ಪಿಎಚ್.ಡಿ., ಪದವಿಗಾಗಿ ಸಲ್ಲಿಸಲಾಗುವ ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ

ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು

ರವಿ ಎಂ.ಕೆ
ಸಂಶೋಧನಾ ವಿದ್ಯಾರ್ಥಿ

ಡಾ.ತ್ರಿವೇಣಿ
ಮಾರ್ಗದರ್ಶಕರು

ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

2024

ಇಂದ,

ರವಿ ಎಂ.ಕೆ ದಿನಾಂಕ :

ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

ಇವರಿಗೆ,

ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

ಮೂಲಕ,

ಅಧ್ಯಕ್ಷರು
ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199

ಮಾನ್ಯರೇ,

ವಿಷಯ: ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖವನ್ನು ಸಲ್ಲಿಸುವುದರ ಕುರಿತು.

ಉಲ್ಲೇಖ: MU/ACC/Ph.D-Reg./CR-246/2017-18/A3.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಡಾ.ತ್ರಿವೇಣಿ, ಸಹ ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ **"ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು"** ಎಂಬ ವಿಷಯ ಕುರಿತು ನಾನು ಅರೆಕಾಲಿಕ ಸಂಶೋಧನಾ ವಿದ್ಯಾರ್ಥಿಯಾಗಿ ಪಿಹೆಚ್.ಡಿ., ಸಂಶೋಧನಾ ಅಧ್ಯಯನವನ್ನು ಕೈಗೊಂಡಿರುತ್ತೇನೆ. ಈ ಸಂಬಂಧ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ಮಾರ್ಗದರ್ಶಕರು ಸಂಶೋಧನಾ ವಿದ್ಯಾರ್ಥಿ

ಅಧ್ಯಕ್ಷರು

ಪರಿವಿಡಿ

ಕ್ರಮ ಸಂಖ್ಯೆ	ಶೀರ್ಷಿಕೆ
ಅಧ್ಯಾಯ–1	ಪೀಠಿಕೆ – ಪ್ರಸ್ತಾವನೆ, ಚಂಗಾಳ್ವ ರಾಜ್ಯದ ಭೌಗೋಳಿಕ ಹಿನ್ನೆಲೆ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಉದ್ದೇಶ, ಸಂಶೋಧನಾಮಾರ್ಗ, ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆ.
ಅಧ್ಯಾಯ–2	ಚಂಗಾಳ್ವರ ರಾಜಕೀಯ ಸಾಧನೆಗಳು – ಸಾಮಂತ ಪ್ರಭುಗಳಾಗಿ ಮತ್ತು ಸ್ವತಂತ್ರ ಅರಸರಾಗಿ ಚಂಗಾಳ್ವರ ಪ್ರಭುತ್ವದ ಸ್ಥಾಪನೆ.
ಅಧ್ಯಾಯ–3	ಚಂಗಾಳ್ವರ ಕಾಲದ ಆರ್ಥಿಕ ಪರಿಸ್ಥಿತಿ – ಕೃಷಿ ವಿಸ್ತರಣೆ, ನೀರಾವರಿ ಸೌಕರ್ಯ, ಕೆರೆಕಟ್ಟೆಗಳ ನಿಮಾಣ, ವ್ಯಾಪಾರ ವಾಣಿಜ್ಯದ ಬೆಳವಣಿಗೆ, ವ್ಯಾಪಾರ ಕೇಂದ್ರಗಳು, ನಾಣ್ಯಪದ್ಧತಿಗಳು.
ಅಧ್ಯಾಯ–4	ಚಂಗಾಳ್ವರ ಕಾಲದ ಧಾರ್ಮಿಕ ನೀತಿ – ಶೈವಧರ್ಮ, ವೈಷ್ಣವಧರ್ಮ, ಜೈನಧರ್ಮಗಳ ಬೆಳವಣಿಗೆ ಮತ್ತು ಚಂಗಾಳ್ವರ ಧಾರ್ಮಿಕ ಸೌಹಾರ್ದ ನೀತಿ
ಅಧ್ಯಾಯ–5	ಚಂಗಾಳ್ವರ ಕಾಲದ ಸಾಮಾಜಿಕ ಪರಿಸ್ಥಿತಿ – ಸಾಮಾಜಿಕ ರಚನೆ, ವರ್ಣವ್ಯವಸ್ಥೆ, ವಿವಿಧ ಜಾತಿ ಸಮುದಾಯಗಳು, ಅಗ್ರಹಾರಗಳ ಸ್ಥಾಪನೆ, ಶಿಕ್ಷಣ ಪದ್ಧತಿ, ಸ್ತ್ರೀಯರ ಸ್ಥಾನಮಾನ
ಅಧ್ಯಾಯ–6	ಚಂಗಾಳ್ವರ ಕಾಲದ ದೇವಾಲಯಗಳು ಮತ್ತು ಕಲಾ ಸ್ಮಾರಕಗಳು
ಅಧ್ಯಾಯ–7	ಉಪಸಂಹಾರ
❖ ಗ್ರಂಥಋಣ	
❖ ನಕ್ಷೆಗಳು	
❖ ಛಾಯಚಿತ್ರಗಳ ಪಟ್ಟಿ	
❖ ಛಾಯಚಿತ್ರಗಳು	

"ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು"

ಪೀಠಿಕೆ

ಪ್ರಸ್ತಾವನೆ: ದಕ್ಷಿಣ ಕರ್ನಾಟಕವನ್ನಾಳಿದ ಅರಸು ಮನೆತನಗಳಲ್ಲಿ ಚಂಗಾಳ್ವರು ಸಹ ಒಂದು ಪ್ರಮುಖ ಅರಸು ಮನೆತನವಾಗಿದೆ. ಪಿರಿಯಾಪಟ್ಟಣ ಅಥವಾ ಸಿಂಹಪಟ್ಟಣ ಚಂಗಾಳ್ವರ ಪ್ರಮುಖ ರಾಜಕೀಯ ಕೇಂದ್ರವಾಗಿತ್ತು. ಹುಣಸೂರು, ಪಿರಿಯಾಪಟ್ಟಣ, ಕೃಷ್ಣರಾಜನಗರ, ಅರಕಲಗೂಡು, ಚನ್ನರಾಯಪಟ್ಟಣ, ಸೋಮವಾರಪೇಟೆ, ಹೆಗ್ಗಡದೇವನಕೋಟೆ ಮುಂತಾದ ಪ್ರದೇಶಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿದರು. ಗಂಗರ ತರುವಾಯ ದಕ್ಷಿಣ ಕರ್ನಾಟಕದಲ್ಲಿ ರಾಜಕೀಯವಾಗಿ ಪ್ರಾಬಲ್ಯಕ್ಕೆ ಬಂದು ಚೋಳರ ಸಾಮಂತರಾಗಿದ್ದ ಚಂಗಾಳ್ವರು ಕೃಷಿ ವಿಸ್ತರಣೆ, ನೀರಾವರಿ ಅಭಿವೃದ್ಧಿಗಾಗಿ ಕೆರೆಕಟ್ಟೆಗಳ ನಿರ್ಮಾಣ, ವ್ಯಾಪಾರ ವಾಣಿಜ್ಯ ಬೆಳವಣಿಗೆ, ದೇವಾಲಯಗಳ ಸ್ಥಾಪನೆ ಮುಂತಾದ ಸಾಂಸ್ಕೃತಿಕ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಪ್ರಾಂತೀಯವಾಗಿ ಹಾಗೂ ಸ್ಥಳೀಯವಾಗಿಯೂ ಕೂಡ ಅನೇಕ ರಾಜಮನೆತನದವರು ಭಾರತೀಯ ನೆಲೆಯನ್ನು ವಿವಿಧ ಕಾಲಘಟ್ಟಗಳಲ್ಲಿ ಆಳಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಹಾಗೆಯೇ ದಕ್ಷಿಣ ಭಾರತದ ಪ್ರದೇಶಗಳಲ್ಲಿ ಕರ್ನಾಟಕವೂ ಕೂಡ ಒಂದು. ಈ ಹಿನ್ನೆಲೆಯಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಕರ್ನಾಟಕ ಪ್ರದೇಶದಲ್ಲಿ ಅನೇಕ ಚಿಕ್ಕ ಚಿಕ್ಕ ಪ್ರಸಿದ್ಧ ಹಾಗೂ ಐತಿಹಾಸಿಕ ಸ್ಥಳಗಳಿವೆ. ಅವುಗಳು ನಮ್ಮ ನಾಡಿನ ಭವ್ಯ ಇತಿಹಾಸದಲ್ಲಿ ಸಾಕಷ್ಟು ಮಹತ್ವದ ಪಾತ್ರವನ್ನು ತಮ್ಮದೇ ಆದಂತಹ ರೀತಿಯಲ್ಲಿ ನಿರ್ವಹಿಸಿವೆ. ಒಂದು ಕಾಲದಲ್ಲಿ ಕರ್ನಾಟಕದ ಚರಿತ್ರೆಯನ್ನು ತಳಸ್ಪರ್ಶಿಯವಾಗಿಯೇ ಗ್ರಹಿಸಿದಾಗ ಕೇವಲ ದೊಡ್ಡ ದೊಡ್ಡ ರಾಜಮನೆತನಗಳ ಇತಿಹಾಸವೆಂಬ ಪರಿಕಲ್ಪನೆ ಇತ್ತು ಮತ್ತು ಅದೇ ಸತ್ಯವೇ ಆಗಿತ್ತು ಎಂಬುದು ಕೂಡ ತಿಳಿದುಬರುತ್ತದೆ. ಭಾರತದ ರಾಜಮನೆತನಗಳ ಆಡಳಿತದಲ್ಲಿ ಮೌರ್ಯರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಚೋಳರು, ಹೊಯ್ಸಳರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರು ಮತ್ತು ಮೈಸೂರು ಸಂಸ್ಥಾನದ ಒಡೆಯರು ಪ್ರಧಾನವಾಗಿ ಕಂಡುಬರುತ್ತಾರೆ

ಮತ್ತು ಆಡಳಿತ ನಡೆಸಿದ್ದಾರೆ. ಈ ರಾಜವಂಶಗಳು ವಿಶಿಷ್ಟವಾಗಿಯೇ ಕರ್ನಾಟಕದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಮತ್ತು ಬೆಳೆಸಿದವರು ಎಂಬುದರಲ್ಲಿ ಯಾವುದೇ ಸಂದೇಹವೇ ಇಲ್ಲ. ಇಂತಹ ಸಾಮ್ರಾಜ್ಯಗಳಿಗೆ ಸಣ್ಣ ಸಣ್ಣ ಸಾಮಂತರು, ಮಾಂಡಲೀಕರು, ಸ್ಥಳೀಯ ಅರಸರು ಇವರುಗಳಿಲ್ಲದೇ ದೊಡ್ಡ ಸಾಮ್ರಾಜ್ಯಗಳು ಬಲಗೊಂಡು ಬೆಳೆಯುವುದು ಅಸಾಧ್ಯವೇ ಆಗಿತ್ತು. ಅದರಲ್ಲಿಯೂ ಪ್ರಧಾನವಾಗಿ ದಕ್ಷಿಣ ಕರ್ನಾಟಕವನ್ನು ಆಳಿದ ರಾಜಮನೆತನಗಳಲ್ಲಿ ಮೈಸೂರು ಮತ್ತು ಕೊಡಗು ಪ್ರದೇಶದಲ್ಲಿದ್ದಂತಹ ಚಂಗಾಳ್ವ ಅರಸರು ಸಹ ಪ್ರಮುಖ ಸಾಮಂತರಾಗಿಯೂ, ಮಾಂಡಲೀಕರಾಗಿಯೂ ಹಾಗೂ ಸ್ವತಂತ್ರ ಅರಸು ಮನೆತನವಾಗಿ ಹೊರಬಂದಿರುವುದು ಪ್ರಸ್ತುತ ಅಧ್ಯಯನದಲ್ಲಿ ತಳಸ್ಪರ್ಶಿಯಾವಾಗಿ ಗುರುತಿಸಲಾಗಿದೆ.

ಸಾಮಂತರಾಗಿದ್ದ ಚಂಗಾಳ್ವ ಅರಸರು ಮೈಸೂರು ಪ್ರದೇಶದ ಪಶ್ಚಿಮ ಭಾಗವನ್ನು ಹಾಗೂ ಕೊಡಗು ಪ್ರದೇಶವನ್ನೂ ಕೂಡ ಬಹುಕಾಲ ಆಳಿದರು. ಹಾಗಾಗಿಯೇ ಚಂಗನಾಡು ಎಂದರೆ ಇಂದಿನ ಮೈಸೂರು ಜಿಲ್ಲೆಯ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳು ಚಂಗಾಳ್ವರ ಆಡಳಿತದ ಕೇಂದ್ರೀಯ ಹಾಗೂ ಮೂಲ ನೆಲೆಯಾಗಿತ್ತು. ಕರ್ನಾಟಕ ರಾಜ್ಯದಲ್ಲಿನ ಸಾಂಸ್ಕೃತಿಕ ನಗರಿ ಎಂದು ಖ್ಯಾತಿಗಳಿಸಿರುವ ಮೈಸೂರು ಜಿಲ್ಲೆಯಲ್ಲಿನ ಏಳು ತಾಲ್ಲೂಕುಗಳಲ್ಲಿ ಬರುವಂತಹ ಪ್ರಮುಖವಾಗಿ ಕೃಷ್ಣರಾಜನಗರ, ಹುಣಸೂರು ಮತ್ತು ಪಿರಿಯಾಪಟ್ಟಣ ಅಥವಾ ಸಿಂಗಪಟ್ಟಣ ತಾಲ್ಲೂಕುಗಳು ಪ್ರಸ್ತುತ ಅಧ್ಯಯನದ ಕೇಂದ್ರ ವಸ್ತು ವಿಷಯವೇ ಆಗಿದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ, ಹಾಸನ ಜಿಲ್ಲೆಯ ಅರಕಲಗೂಡು, ಚನ್ನರಾಯಪಟ್ಟಣ ಮತ್ತು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಒಟ್ಟಾರೆಯ ಪ್ರದೇಶಗಳ ಮೇಲೆ ಇದೇ ಚಂಗಾಳ್ವ ಅರಸರು ತಮ್ಮದೇ ಆದಂತಹ ಪ್ರಬಲ್ಯ ಹಾಗೂ ಅಧಿಕಾರದ ಮೂಲಕ ಪ್ರಭುತ್ವವನ್ನು ಸ್ಥಾಪಿಸಿದರು. ಈ ಪ್ರದೇಶದಲ್ಲಿ ದೊರಕಿರುವ ಹತ್ತು ಹಲವು ಶಾಸನಗಳು ಮತ್ತು ಸಾಹಿತ್ಯಿಕ ಆಧಾರಗಳಿಂದ ಖಚಿತವಾಗಿಯೇ ದೃಢಪಡಿಸಲಾಗಿದೆ.

ಕರ್ನಾಟಕ ಪ್ರದೇಶದ ರಾಜಕೀಯ ಚರಿತ್ರೆಯ ಪರಂಪರೆಯಲ್ಲಿ ಗಂಗರು ದಕ್ಷಿಣ ಕರ್ನಾಟಕದಲ್ಲಿ ರಾಜಕೀಯವಾಗಿ ಹೆಚ್ಚು ಪ್ರಾಬಲ್ಯಕ್ಕೆ ಬಂದರು. ಈ ರಾಜವಂಶದವರೇ ಒಂದು ಸುಸ್ಥಿರವಾದ ರಾಜಕೀಯ ನೆಲೆಯ ಚರಿತ್ರೆಯನ್ನು ಸೃಷ್ಟಿಸಿದವರು ಎಂಬುದು ಕಂಡುಬರುತ್ತದೆ. ಹಾಗೆಯೇ ಇದೇ ಕಾಲಮಾನದಲ್ಲಿಯೇ ತಮಿಳುನಾಡಿನ ಚೋಳರು, ಗಂಗರು ಆಳುತ್ತಿದ್ದಂತಹ ಕರ್ನಾಟಕದ ಪ್ರದೇಶವನ್ನು ಪ್ರವೇಶಿಸಿದರು. ಪ್ರಸ್ತುತ ಅಧ್ಯಯನ ಕೇಂದ್ರ ವಿಷಯದಲ್ಲಿ ಬರುವಂತಹ ಚಂಗಾಳ್ವ ಅರಸರೇ ಆಗಿರುತ್ತಾರೆ ಎಂಬುದನ್ನು ಅಧ್ಯಯನದ ಪ್ರದೇಶದಲ್ಲಿ ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ. ಹಾಗೂ ಹತ್ತು ಹಲವು ಶಾಸನ ಹಾಗೂ ಲಿಖಿತ

ಸಾಕ್ಷ್ಯ ಆಧಾರಗಳಿಂದಲೂ ಹೆಚ್ಚು ದೃಢಪಡಿಸಲಾಗಿದೆ. ಹೀಗೆ ಈ ಪ್ರದೇಶವನ್ನು ಆಳಿರುವ ಹಲವು ಪ್ರಮುಖ ರಾಜಮನೆತನಗಳಿಗೆ ಸಾಮಂತರಾಗಿ ಮತ್ತು ಕೆಲವು ಕಾಲ ಸ್ವಾತಂತ್ರ್ಯರಾಗಿಯೂ ಈ ಪ್ರದೇಶದಲ್ಲಿ ಆಡಳಿತವನ್ನು ಮಾಡಿರುವವರು ಈ ಚಂಗಾಳ್ವ ಅರಸರು. ಚಂಗಾಳ್ವ ಅರಸರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಪ್ರಸ್ತುತ ಅಧ್ಯಯನದ ಮೂಲಕ ಗುರುತಿಸಲಾಗಿದೆ. ಅಂದರೆ ಇವರು ಹೆಚ್ಚು ಕಾಲವೇನು ಸ್ವಾತಂತ್ರ್ಯರಾಗಿ ಆಳ್ವಿಕೆಯನ್ನು ಮಾಡಿರುವುದು ಕಂಡುಬರುವುದಿಲ್ಲ. ಇದರ ಬದಲಿಗೆ ಈ ಪ್ರದೇಶವನ್ನು ಆಳಿರುವ ಹೆಸರಾಂತ ಮತ್ತು ಪ್ರಬಲ ರಾಜವಂಶದವರೊಟ್ಟಿಗೆ ಸಾಮಂತ ಪ್ರಭುಗಳಾಗಿಯೇ ಹೆಚ್ಚು ಕಾಲ ತಮ್ಮದೇ ಆದಂತಹ ಪ್ರಭುತ್ವವನ್ನು ಸ್ಥಾಪಿಸಿದರು.

ಚಂಗಾಳ್ವ ಅರಸರ ಆಡಳಿತ ಕಾಲಾವಧಿಯಲ್ಲಿ ಬಹುಮುಖ್ಯವಾಗಿ ಆರ್ಥಿಕತೆಗೆ ಸಂಬಂಧಿಸಿದಂತ ಕೆಲವು ಮಹತ್ತರವಾದ ಬದಲಾವಣೆಗಳನ್ನು ಆದ್ಯತೆಯ ಮೇರೆಗೆ ತಂದಿದ್ದರು. ಅವುಗಳಲ್ಲಿ ಕೃಷಿ ವಿಸ್ತರಣೆ, ನೀರಾವರಿ ಸೌಕರ್ಯ, ಕೆರೆ ಮತ್ತು ಕಟ್ಟೆಗಳ ನಿರ್ಮಾಣದ ಮೂಲಕ ಸಮಾಜ ಕಾರ್ಯದಂತಹ ಕೆಲಸ ಕಾರ್ಯಗಳನ್ನು ಮಾಡಿರುವುದು ಹಾಗೂ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಗೆ ಸಂಬಂಧಿಸಿದಂತಹ ವ್ಯಾಪಾರ ಕೇಂದ್ರಗಳು, ನಾಣ್ಯ ಪದ್ಧತಿಗೆ ಪೂರಕವಾಗಿಯೇ ಕಾರ್ಯಸೂಚಿಗಳನ್ನು ತಯಾರಿಸಿದರು. ಆ ಮೂಲಕವಾಗಿಯೇ ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಕೂಡ ತುಂಬಾ ಸುಸ್ಥಿರವಾಗಿಯೇ ನಿಭಾಯಿಸಿದ್ದಾರೆ. ಸಾಮಂತ ಹಾಗೂ ಸ್ವಾತಂತ್ರ್ಯ ಮಾಂಡಲೀಕರಾಗಿದ್ದ ಇದೇ ಚಂಗಾಳ್ವ ಅರಸರು ಕಾಲಾನುಕ್ರಮದಲ್ಲಿ ಅನುಸರಿಸುತ್ತಿದ್ದಂತಹ ಧರ್ಮ ಮತ್ತು ಮೂಲನೆಲೆಯಲ್ಲಿಯೇ ಕಂಡುಬರುವ ಧಾರ್ಮಿಕತೆಯ ಬಗೆಗೂ ಕೂಡ ಹೆಚ್ಚು ಗಮನಹರಿಸಿದರು. ಈ ಸಂಬಂಧವಾಗಿಯೇ ಧಾರ್ಮಿಕ ಮತ್ತು ಆಧ್ಯಾತ್ಮೀಕ ನೆಲೆಯಲ್ಲಿ ಅಂದು ಪ್ರಬುದ್ಧಮಾನದಲ್ಲಿದ್ದ ಶೈವಧರ್ಮ, ವೈಷ್ಣವಧರ್ಮ ಮತ್ತು ಜೈನಧರ್ಮಗಳ ಪ್ರಸಾರ ಹಾಗೂ ಬೆಳವಣಿಗೆಗೆ ಹೆಚ್ಚು ಪೂರಕವಾಗಿ ಚಂಗಾಳ್ವ ಅರಸರು ಬದ್ಧತೆಯಿಂದ ತಮ್ಮದೇ ಆದಂತಹ ರೀತಿಯಲ್ಲಿ ಕಾರ್ಯನಿರ್ವಹಿಸಿದರು. ಅವುಗಳೆಲ್ಲವನ್ನು ಪ್ರೋತ್ಸಾಹಿಸಿ, ಪೋಷಿಸಿ, ಬೆಳವಣಿಗೆಗೆ ಕಾರಣಕರ್ತರಾಗಿರುತ್ತಾರೆ.

ಚಂಗಾಳ್ವ ಅರಸರು ಕಾಲಾನುಕ್ರಮದಲ್ಲಿ ಸಾಮಂತರಾಗಿದ್ದ ಕಾಲಘಟ್ಟದಲ್ಲಿ ಆಳ್ವಿಕೆ ಮಾಡುತ್ತಿದ್ದ ಪ್ರಬಲ ಮತ್ತು ಪ್ರಮುಖ ರಾಜಮನೆತನಗಳು ಪಾಲಿಸುತ್ತಿದ್ದ ಮತ್ತು ಅವರುಗಳು ತಮ್ಮ ತಮ್ಮ ಅಧಿಕಾರದ ಅವಧಿಯಲ್ಲಿ ಚಾಲ್ತಿಗೆ ತಂದಿದ್ದಂತಹ ಧರ್ಮಗಳು, ವ್ಯವಸ್ಥೆಗಳು ಹಾಗೂ ಆ ಬಗೆಯ ಧಾರ್ಮಿಕ ನಂಬಿಕೆಯನ್ನು ಕೂಡ ರೂಢಿಗತ ಮಾಡಿಕೊಂಡಿದ್ದರು. ಆದ್ದರಿಂದಲೇ ಇವರು ಶೈವ ಮತ್ತು ವೈಷ್ಣವ ಧರ್ಮದ ಪರಂಪರೆಗೆ ಸಂಬಂಧಿಸಿದಂತೆ ಅನೇಕ ದೇವಾಲಯಗಳನ್ನು ಮತ್ತು ಜೈನಧರ್ಮಕ್ಕೆ

ಅನುಗುಣವಾಗಿಯೇ ಜೈನ ಬಸದಿಗಳನ್ನು ಕೂಡ ನಿರ್ಮಾಣ ಮಾಡಿದರು. ವಿವಿಧ ಧರ್ಮಗಳಿಗೆ ಸಂಬಂಧಿಸಿದಂತೆಯೇ ಪೂಜಾ ಮಂದಿರಗಳು, ಆರಾಧನಾ ಕೇಂದ್ರಗಳು, ಸ್ಥಾನಘಟ್ಟಗಳು, ಅಗ್ರಹಾರಗಳು ಮತ್ತು ವಾಸಸ್ಥಾನಗಳನ್ನು ನಿರ್ಮಾಣ ಮಾಡುವ ಮೂಲಕ ಧಾರ್ಮಿಕ ಸೌಹಾರ್ದತೆಯ ನೀತಿಯನ್ನು ಹೆಚ್ಚಿನ ರೀತಿಯಲ್ಲಿ ಜಾರಿಗೆ ತಂದವರು ಎಂಬುದು ಈ ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಚಂಗಾಳ್ವ ಅರಸರು ಸಾಮಂತರಾಗಿಯೂ ಹಾಗೂ ಸ್ವತಂತ್ರರಾಗಿಯೂ ಕೂಡ ಆಡಳಿತ ಮಾಡಿರುವ ಕಾಲದಲ್ಲಿ ತಾವು ಅನುಸರಿಸಿರುವ, ಪ್ರತಿಪಾದಿಸಿರುವ, ಪ್ರೋತ್ಸಾಹಿಸಿರುವ ವಿವಿಧ ಧರ್ಮಗಳಿಗೆ ಸಂಬಂಧಿಸಿದಂತೆ ಹತ್ತು ಹಲವು ದೇವಾಲಯಗಳನ್ನು ನಿರ್ಮಾಣ ಮಾಡಿರುತ್ತಾರೆ. ಹೀಗೆ ನಿರ್ಮಾಣ ಮಾಡಿರುವ ದೇವಾಲಯಗಳ ಮಾದರಿಗಳು, ಕಲೆಗಳು ಮತ್ತು ವಾಸ್ತುಶಿಲ್ಪಗಳ ಮೂಲಕ ಪ್ರತಿಪಾದಿಸಿರುವಂತಹ ಅವರದೇ ಆದಂತಹ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯ ಮಹತ್ವವು ಪ್ರಧಾನವಾಗಿಯೇ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಚಂಗಾಳ್ವ ಅರಸರ ರಾಜಕೀಯ ಸಾಧನೆಗಳನ್ನು ತಳಸ್ಪರ್ಶಿಯಾವಾಗಿಯೇ ಹಲವು ಅಧ್ಯಾಯನಗಳಾಗಿ ವಿಂಗಡಿಸಿಕೊಂಡು ಬಹುಸ್ಥೂಲವಾಗಿಯೇ ಈ ಮುಂದಿನ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ.

ಚಂಗಾಳ್ವ ಅರಸರ ರಾಜಧಾನಿಯಾಗಿದ್ದ 'ಪೆರಿಯ' ಅಥವಾ ಹಿರಿಯ ಪಟ್ಟಣದ ಕೇಂದ್ರವೇ ಆಗಿದ್ದತಹ 'ಪಿರಿಯಾಪಟ್ಟಣ'ವು ಕರ್ನಾಟಕ ರಾಜ್ಯದಲ್ಲಿ ಒಂದು ಮಾದರಿಯ ಸಾಂಸ್ಕೃತಿಕ ನೆಲೆಯಾಗಿದೆ. ಚಂಗಾಳ್ವ ಅರಸರ ಆಡಳಿತ ಪ್ರದೇಶವೂ ಕೂಡ ಭೌಗೋಳಿಕವಾಗಿ ಒಂದು ಆಯಕಟ್ಟಿನ ಫಲವತ್ತಾದ ತಾಣವಾಗಿರುತ್ತದೆ. ಪರಿಸರದ ದೃಷ್ಟಿಯಿಂದಲೂ ಸಹ ಈ ಪ್ರದೇಶವೂ ಮಾನವಕುಲದ ಜೀವನ ಕ್ರಮದ ಕಾರ್ಯಚಟುವಟಿಕೆಗೆ ಪೂರಕ ಹಾಗೂ ಸಂಬಂಧಿಸಿದಂತೆ ಒಂದು ಸೂಕ್ತವಾದ ಪ್ರಾಮುಖ್ಯತೆಯ ಸ್ಥಳವಾಗಿದೆ. ಹಾಗೆಯೇ ಈ ಪ್ರದೇಶದಲ್ಲಿ ಶಿಲಾಯುಗ ಹಾಗೂ ಲೋಹಯುಗದ ಸಂಸ್ಕೃತಿಗಳು ಸಹ ಪ್ರಾಗೈತಿಹಾಸಿಕ ಕಾಲಘಟ್ಟದಲ್ಲಿ ಪ್ರಮುಖವಾಗಿಯೇ ಹೆಚ್ಚು ಬೆಳೆದು ಬಂದಿರುತ್ತವೆ. ಆದ್ದರಿಂದಲೇ ಇವುಗಳನ್ನು ಪ್ರಚೂರಪಡಿಸುವ ಹತ್ತು ಹಲವು ನೆಲೆಗಳನ್ನು ಕರ್ನಾಟಕದಲ್ಲಿನ ಅನೇಕ ಪುರಾತತ್ವ ಶಾಸ್ತ್ರಜ್ಞರು ಮತ್ತು ವಿಷಯ ತಜ್ಞ ಮಹಾಶಯರಿಂದ ಉತ್ಖನನಗೊಂಡಿವೆ.

ಪ್ರಾಗೈತಿಹಾಸ, ಪೂರ್ವ ಇತಿಹಾಸ ಸಂಸ್ಕೃತಿಯ ನೆಲೆಗಳು ಮತ್ತು ಕಲೆಗಳು ವಿವಿಧ ರೀತಿಯಲ್ಲಿ ಕಂಡುಬಂದಿರುವುದು ಕುತೂಹಲಕಾರಿಯಾಗಿದೆ. ಆದ್ದರಿಂದಲೇ ಇಲ್ಲಿ ನವಶಿಲಾಯುಗದಿಂದ ಹಿಡಿದು ಇತಿಹಾಸ ಪೂರ್ವ ಕಾಲದವರೆಗೂ ಕೂಡ ಹಲವಾರು ನೆಲೆಗಳು ಪತ್ತೆಯಾಗಿರುತ್ತವೆ. ಬಹುಮುಖ್ಯವಾಗಿ ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಪುರಾತತ್ವ ಇಲಾಖೆಯು

ಜಂಟಿಯಾಗಿ ಬೃಹತ್ ಶಿಲಾಯುಗದ ಅನೇಕ ನೆಲೆಗಳನ್ನು ಕೂಡ ಉತ್ಖನನ ಮಾಡಿರುತ್ತವೆ. ಈ ಉತ್ಖನನದಿಂದ ಕಬ್ಬಿಣದ ವಿವಿಧ ಆಯುಧದ ಉಪಕರಣಗಳನ್ನು ಆಯಾ ಕಾಲಮಾನದಲ್ಲಿ ಬಳಸಿದ ಅಂದಿನ ಸಂಸ್ಕೃತಿಯ ಪರಂಪರೆಯನ್ನು ಪ್ರಧಾನವಾದ ನೆಲೆಯಾಗಿ ಬೆಳಕಿಗೆ ತರಲಾಗಿದೆ.

ಚಂಗಾಳ್ವ ಅರಸರು ತಮ್ಮ ಆಳ್ವಿಕೆಯ ಕಾಲಮಾನದಲ್ಲಿ ಸಾಮಾಜಿಕ ಪರಿಸ್ಥಿತಿ, ಸಾಮಾಜಿಕ ರಚನೆಯ ಬಗೆಗೆ ಹೆಚ್ಚಿನ ಗಮನವನ್ನು ನೀಡಿದರು. ಹಾಗೆಯೇ ಅಂದು ಹೇಗೆ ವರ್ಣ ವ್ಯವಸ್ಥೆಯು ಚಾಲ್ತಿಯಲ್ಲಿತ್ತು ಎಂಬುದು ಹಾಗೂ ವಿವಿಧ ಜಾತಿಗಳು ಮತ್ತು ಜನಸಮುದಾಯಗಳ ನಡುವಿನ ಬಾಂಧವ್ಯವನ್ನು, ಸೌಹಾರ್ದತೆಯನ್ನು ಕೂಡ ಗುರುತಿಸಲಾಗಿದೆ. ಬಹುಮುಖ್ಯವಾಗಿ ಚಂಗಾಳ್ವ ಅರಸರು ತಮ್ಮ ಆಡಳಿತದಲ್ಲಿ ವರ್ಣವ್ಯವಸ್ಥೆಯ ಪ್ರಥಮರಾಗಿರುವ ಬ್ರಾಹ್ಮಣರಿಗಾಗಿಯೇ ಪ್ರತ್ಯೇಕ ಅಗ್ರಹಾರಗಳನ್ನು ಕೂಡ ನಿರ್ಮಾಣ ಮಾಡಿದರು. ಆ ಕಾಲದಲ್ಲಿ ಶಿಕ್ಷಣ ಪದ್ಧತಿಗೆ ಹೆಚ್ಚು ಒತ್ತು ನೀಡಿದರು. ಸ್ತ್ರೀಯರ ಸ್ಥಾನಮಾನಕ್ಕೆ ಆದ್ಯತೆಯನ್ನು ನೀಡಿದ್ದಾರೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಿ ಹೊರತರಲಾಗಿದೆ.

ಚಂಗಾಳ್ವ ಅರಸರ ರಾಜ್ಯದ ಭೌಗೋಳಿಕ ಹಿನ್ನೆಲೆ

ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆಗಳ ಕೆಲವು ಪ್ರದೇಶವನ್ನು ಆಳಿದ ಚಂಗಾಳ್ವ ಅರಸರ ರಾಜ್ಯದ ಭೌಗೋಳಿಕ ಪ್ರದೇಶದ ನೆಲೆಗಳನ್ನು ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳ ಹಿನ್ನೆಲೆಯಲ್ಲಿ ಕುರಿತು ಚರ್ಚಿಸಲಾಗಿದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹುಣಸೂರು ಮತ್ತು ಪಿರಿಯಾಪಟ್ಟಣ, ಕೊಡಗು ಜಿಲ್ಲೆಯ ಸೋಮವಾರಪೇಟೆ ಮತ್ತು ಹಾಸನ ಜಿಲ್ಲೆಯ ಅರಕಲಗೂಡು, ಚನ್ನರಾಯಪಟ್ಟಣ ತಾಲ್ಲೂಕುಗಳು ಇದೇ ಚಂಗಾಳ್ವ ಅರಸರ ಆಡಳಿತದ ಪ್ರಮುಖ ಭೌಗೋಳಿಕ ಪ್ರದೇಶವಾಗಿತ್ತು. ಆದರೆ ಅಂದಿನ ಈ ಆಡಳಿತ ಪ್ರದೇಶವು ಇಂದು ವಿಭಜಿತಗೊಂಡಿದೆ. ಆದ್ದರಿಂದ ವಿಭಜಿತಗೊಂಡಿರುವಂತಹ ಭೌಗೋಳಿಕ ಪ್ರದೇಶಗಳ ಕ್ಷೇತ್ರಾಧ್ಯಯನ, ಶಾಸನಗಳು ಮತ್ತು ಸಾಹಿತ್ಯಿಕ ಆಧಾರಗಳ ಮೂಲಕ ವಿವರಿಸಲಾಗಿದೆ

ಕೃಷ್ಣರಾಜನಗರ ತಾಲ್ಲೂಕು

ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕೃಷ್ಣರಾಜನಗರವನ್ನು ಸರಿಸುಮಾರು ಕ್ರಿ.ಶ.1925 ಮತ್ತು 1930ರ ನಡುವೆ ಒಂದು ಹೊಸ ಪಟ್ಟಣವನ್ನು ಸ್ಥಾಪಿಸಲಾಗುತ್ತದೆ. ಇದು ಕಾವೇರಿ ನದಿಯ ಪ್ರವಾಹವು ಹೆಚ್ಚುತ್ತಿರುವುದರಿಂದಲೇ ಹತ್ತಿರದ ಹಳೆಯ ಪಟ್ಟಣವಾಗಿದ್ದ ಯಡತೊರೆಯು ಹಾನಿಯಾಗುತ್ತಿದ್ದರಿಂದ ಕೃಷ್ಣರಾಜನಗರ ಪಟ್ಟಣವನ್ನು ಸರಿಸುಮಾರು 3 ಮೈಲುಗಳಷ್ಟು ದಕ್ಷಿಣಕ್ಕೆ ಮತ್ತು ಪ್ರಸ್ತುತ ಕೃಷ್ಣರಾಜನಗರ

ಎಂದು ಕರೆಯಲ್ಪಡುವ ಎತ್ತರದ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತದೆ. ಆ ಪಟ್ಟಣ ಪ್ರದೇಶಕ್ಕೆ ಮೈಸೂರು ಮಹಾರಾಜರಾಗಿದ್ದ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಇಡಲಾಗುತ್ತದೆ. ಕೃಷ್ಣರಾಜನಗರವು ವಿಶಾಲವಾದ ರಸ್ತೆಯನ್ನು ಹೊಂದಿರುವ ಒಂದು ಪಟ್ಟಣವಾಗಿದೆ. ಹಾಗೆಯೇ ಇದು ಮೈಸೂರು, ಹಾಸನ ಮತ್ತು ಹುಣಸೂರು ಸ್ಥಳಗಳಲ್ಲಿ ರೈಲು ಮತ್ತು ರಸ್ತೆಯ ಮೂಲಕ ಉತ್ತಮ ಸಂಪರ್ಕವನ್ನು ಕೂಡ ಹೊಂದಿರುತ್ತದೆ. ಪ್ರಸ್ತುತ ಚುಂಚನಕಟ್ಟೆ ಜಲಪಾತವು ಇದೇ ಕೃಷ್ಣರಾಜನಗರದಿಂದ ಸರಿಸುಮಾರು 13 ಕಿ.ಮೀ. ದೂರದಲ್ಲಿ ಕಂಡುಬರುತ್ತದೆ.

ಮೈಸೂರು ಜಿಲ್ಲೆಯ ತಾಲ್ಲೂಕುಗಳಲ್ಲಿ ಕೃಷ್ಣರಾಜನಗರ ತಾಲ್ಲೂಕು ಕೂಡ ಒಂದಾಗಿದೆ. ಈ ಕೃಷ್ಣರಾಜನಗರ ತಾಲ್ಲೂಕು ಕೇಂದ್ರವು ಮೈಸೂರು ಜಿಲ್ಲಾ ಕೇಂದ್ರದಿಂದ ಪಶ್ಚಿಮ ದಿಕ್ಕಿಗಿದ್ದು, ಸರಿಸುಮಾರು 41 ಕಿ.ಮೀ. ದೂರದಲ್ಲಿದೆ. ಈ ತಾಲ್ಲೂಕು ಸರಿಸುಮಾರು 605.31 ಚದುರ ಕಿಲೋಮೀಟರ್ ಭೂ ವಿಸ್ತೀರ್ಣವನ್ನು ಹೊಂದುವ ಮೂಲಕ ಮೈಸೂರು ಜಿಲ್ಲೆಯ ತಾಲ್ಲೂಕುಗಳಲ್ಲಿ 6ನೆಯ ಸ್ಥಾನವನ್ನು ಪಡೆದುಕೊಂಡಿರುತ್ತದೆ. ಹಾಗೆಯೇ ಇದು 176 ಗ್ರಾಮಗಳನ್ನು ಮತ್ತು 78 ಉಪಗ್ರಾಮಗಳನ್ನು ಕಸಬಾ, ಹೆಬ್ಬಾಳು, ಚುಂಚನಕಟ್ಟೆ, ಸಾಲಿಗ್ರಾಮ, ಮಿರ್ಲೆ, ಹೊಸ ಅಗ್ರಹಾರ ಹೀಗೆ 6 ಕಂದಾಯ ಹೋಬಳಿ ಕೇಂದ್ರಗಳನ್ನು ಒಳಗೊಂಡು ತನ್ನದೇ ಆದಂತಹ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿರುತ್ತದೆ. ಈ ಕೃಷ್ಣರಾಜನಗರ ತಾಲ್ಲೂಕಿನ ಪೂರ್ವ ದಿಕ್ಕಿಗೆ ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಪ್ರದೇಶವೂ, ಪಶ್ಚಿಮಕ್ಕೆ ಪಿರಿಯಾಪಟ್ಟಣ, ಉತ್ತರಕ್ಕೆ ಕೃಷ್ಣರಾಜಪೇಟೆ ಮತ್ತು ದಕ್ಷಿಣಕ್ಕೆ ಹುಣಸೂರು ತಾಲ್ಲೂಕುಗಳ ಪರಿವ್ಯಾಪ್ತಿಯನ್ನು ಹೊಂದಿರುತ್ತದೆ.

ಕೃಷ್ಣರಾಜನಗರವು ಕಾವೇರಿ ನದಿಯ ದಡದಲ್ಲಿರುವ ಒಂದು ಪ್ರಮುಖ ಪ್ರದೇಶವೇ ಆಗಿದ್ದು, ಈ ನಗರವು ಬಹುಹಿಂದೆಯೇ ‘ಎಡತೊರೆ’ ಎಂದೂ ಕೂಡ ಕರೆಯಲ್ಪಟ್ಟಿರುತ್ತದೆ. ಪ್ರಧಾನವಾಗಿ ಕಾವೇರಿ ನದಿ ದಂಡೆಯ ಮೇಲೆ ಅರ್ಕೇಶ್ವರಸ್ವಾಮಿ ದೇವಾಲಯವಿದೆ. ಇದು ಭಾರತದಲ್ಲಿಯೇ ಕಂಡುಬರುವಂತಹ ಎರಡನೇ ಸೂರ್ಯ ದೇವಾಲಯವಾಗಿದೆ. ಹಾಗೆಯೇ ಈ ದೇವಾಲಯದಲ್ಲಿ ಇರುವಂತಹ ಲಿಂಗದ ಮೇಲೆ ಶಿವರಾತ್ರಿ ಹಬ್ಬವಾದ ಅನಂತರ ದಿನದಲ್ಲಿ ಸೂರ್ಯನ ಕಿರಣಗಳು ನೇರವಾಗಿಯೇ ಬೀಳುತ್ತವೆ. ಈ ಸ್ಥಳವು ನಗರವಾಗಿ ಸ್ಥಾಪಿತಗೊಂಡು ಕಾವೇರಿ ನದಿಯ ಪ್ರವಾಹದ ಹಾನಿಯ ಕಾರಣ ಮತ್ತು ಹಾನಿಯ ಪರಿಣಾಮವಾಗಿ ಎಡತೊರೆಯು ಅನಂತರದಲ್ಲಿ ಕೃಷ್ಣರಾಜನಗರ ಎಂದಾಗಿರುತ್ತದೆ. ಇದಕ್ಕೆ ಮೈಸೂರು ರಾಜ ಸಂಸ್ಥಾನದಲ್ಲಿ ಹೆಚ್ಚು ಪ್ರಸಿದ್ಧಿ ಹಾಗೂ ಜನಪರವಾಗಿ ಅನೇಕ ಸಾಮಾಜಿಕ ನ್ಯಾಯ ಪರವಾದ ಹಾಗೂ ಸಮಾಜ ಕಲ್ಯಾಣ ಕಾರ್ಯಗಳನ್ನು ಅಚ್ಚಳಿಯದೇ ಇರುವ ರೀತಿಯಲ್ಲಿ ಮಾಡಿರುವಂತಹ ರಾಜರ್ಷಿ

ಶ್ರೀನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪಿನ ನಾಮಾಂಕಿತವಾಗಿ ಈ ಪ್ರದೇಶಕ್ಕೆ ಕೃಷ್ಣರಾಜನಗರ ಎಂದು ನಾಮಕರಣ ಮಾಡಲಾಗುತ್ತದೆ. ಹಾಗೆಯೇ ಭೌಗೋಳಿಕವಾಗಿಯೂ ಉತ್ತಮವಾದ ಫಲವತ್ತತೆ ಭೂಪ್ರದೇಶವನ್ನು ಹೊಂದುವ ಮೂಲಕ ಅಣೆಕಟ್ಟೆಯಿಂದ ನಿರ್ಮಾಣಗೊಂಡಿರುವ ನೀರಾವರಿ ಸೌಲಭ್ಯವನ್ನು ಹೊಂದಿರುವ ಒಂದು ತಾಲ್ಲೂಕು ಆಗಿರುತ್ತದೆ. ಇದರಿಂದಲೇ ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜಪ್ರಭುತ್ವವು ಇಡೀ ದೇಶದಲ್ಲಿಯೇ ಹೆಚ್ಚು ಆಕರ್ಷಣೀಯ ರಾಜ್ಯವಾಗಲೂ ಕಾರಣವಾಗಿರುತ್ತದೆ.

ಕೃಷ್ಣರಾಜನಗರ ತಾಲ್ಲೂಕು ತನ್ನದೆಯಾದ ಸಾಂಸ್ಕೃತಿಕ ಹಾಗೂ ಧಾರ್ಮಿಕತೆಯನ್ನು ಪ್ರತಿಪಾದಿಸುವ ಚುಂಚನಕಟ್ಟೆಯಲ್ಲಿನ ಜಲಪಾತ, ಅರ್ಕೇಶ್ವರ ದೇವಾಲಯ, ಚಿಕ್ಕಹನಸೋಗೆಯಲ್ಲಿರುವ ಜೈನ ಬಸದಿ, ಕಪ್ಪಡಿ ಶ್ರೀಕ್ಷೇತ್ರದಲ್ಲಿ ಧರೆಗೆ ದೊಡ್ಡವರಾದ ಮಂಟೇಸ್ವಾಮಿರವರ ಶಿಷ್ಯರಾಗಿರುವಂತಹ ರಾಚಪ್ಪಾಜಿ, ಸಿದ್ದಪ್ಪಾಜಿ ಮತ್ತು ಚನ್ನಾಜಮ್ಮರವರ ಗದ್ದಿಗೆ, ಹಂಪಾಪುರದ ದುರ್ಗಾಪರಮೇಶ್ವರಿ ದೇವಾಲಯ, ತಿಪ್ಪೂರು ಶ್ರೀಲಕ್ಷ್ಮಿನಾರಾಯಣ ದೇವಾಲಯ, ಡೋರನಹಳ್ಳಿಯ ಸಂತ ಅಂಥೋನಿರವರ ಕ್ರೈಸ್ತರ ಧಾರ್ಮಿಕ ಕ್ಷೇತ್ರ, ಚುಂಚನಕಟ್ಟೆಯ ಶ್ರೀರಾಮ ದೇವಾಲಯ ಮತ್ತು ಸಾಲಿಗ್ರಾಮದಲ್ಲಿರುವ ಜೈನ ಬಸದಿಗಳಿಂದಲೂ ಈ ತಾಲ್ಲೂಕು ಪ್ರದೇಶವು ಹೆಚ್ಚು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಎಂಬುದನ್ನು ಕ್ಷೇತ್ರಾಧ್ಯಯನದ ಮೂಲಕ ತಿಳಿಸಲಾಗಿದೆ. ಕೃಷ್ಣರಾಜನಗರ ಪ್ರದೇಶದ ಹತ್ತು ಹಲವು ಗ್ರಾಮಗಳಲ್ಲಿನ ಶಾಸನಗಳಿಂದ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಕುರಿತು ಚರ್ಚಿಸಲಾಗಿದೆ.

ಹುಣಸೂರು ತಾಲ್ಲೂಕು

ಭೌಗೋಳಿಕವಾಗಿ ಮೈಸೂರು ಪ್ರದೇಶದ ಪಶ್ಚಿಮ ಭಾಗದಲ್ಲಿರುವ ಮಲೆನಾಡಿನ ಸೆರಗಿನಲ್ಲಿಯೂ, ಕೊಡಗು ಜಿಲ್ಲೆಗೆ ಬಹು ಹತ್ತಿರಕ್ಕೆ ಹೊಂದಿಕೊಂಡಂತಿರುವ ಹುಣಸೂರು ತಾಲ್ಲೂಕು ಪ್ರದೇಶವೂ ಗಿರಿ ಮತ್ತು ಬೆಟ್ಟಗುಡ್ಡ ಪ್ರದೇಶಗಳಿಂದ ಕೂಡಿರುವ ಹಾಗೂ ಪೂರ್ವಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಸಂಧಿಸುವ ಆಯಕಟ್ಟಿನ ಭೌಗೋಳಿಕ ಪ್ರದೇಶವಾಗಿದೆ. ಐತಿಹಾಸಿಕವಾಗಿ ಸರ್ದಾರ್ ಕೆ. ಬಸವರಾಜೇಅರಸುರವರು ಸಂಗ್ರಹಿಸಿದ್ದ ಸರಿಸುಮಾರು ಕ್ರಿ.ಶ.1535ರ ತಾಮ್ರಶಾಸನವೊಂದರಲ್ಲಿ ಮೂರನೆಯ ಮಂಗರಸ ಕವಿಗೆ ಉಂಬಳಿ ನೀಡಿದ್ದ ಭೂಪ್ರದೇಶವನ್ನು ಉಲ್ಲೇಖಿಸುತ್ತದೆ. ಅದು ಈಗಿನ ಹುಣಸೂರು ತಾಲ್ಲೂಕು ವ್ಯಾಪ್ತಿಯಲ್ಲಿರುವ ಚಿಲುಕುಂದ (ಚಿಲ್ಕುಂದ), ಕಟ್ಟೆಮಳಲವಾಡಿ, ದೊಡ್ಡಹುಣಸೂರು, ಹನಗೋಡು, ಹಬ್ಬನಕುಪ್ಪೆ, ತಮ್ಮಡಹಳ್ಳಿ ಈ ಪ್ರದೇಶಗಳ ಪ್ರಸ್ತಾಪವಿದೆ. 'ದೊಡ್ಡಹುಣಸೂರು' ಈಗ ತಾಲ್ಲೂಕು ಕೇಂದ್ರ

ಹುಣಸೂರು ಪಟ್ಟಣವಾಗಿದ್ದು, ಪಟ್ಟಣದ ಒಂದು ಭಾಗವನ್ನು ಈಗಲೂ ಚಿಕ್ಕಹುಣಸೂರು ಎಂದೇ ಕರೆಯುತ್ತಾರೆ.

ಲಕ್ಷ್ಮಣತೀರ್ಥ ನದಿಯ ಎರಡು ದಂಡೆಗಳ ಮೇಲೂ ಕಂಡುಬರುವ ಹುಣಸೂರು ಉತ್ತಮ ಗುಣಮಟ್ಟದ ಮರಮುಟ್ಟು ಮತ್ತು ಅರಣ್ಯ ಉತ್ಪನ್ನಗಳ ವ್ಯಾಪಾರ ಕೇಂದ್ರವಾಗಿದೆ. ಅರೆಮಲೆನಾಡಾಗಿ, ಸುತ್ತಮುತ್ತಲ ಜಿಲ್ಲೆಗಳಿಗೆ ಮತ್ತು ನೆರೆರಾಜ್ಯಗಳಿಗೂ ಕೂಡ ಸಂಪರ್ಕವನ್ನೂ ಕಲ್ಪಿಸಿಕೊಡುವ ಒಂದು ಶುದ್ಧ ಮಾದರಿಯ ಆಯಕಟ್ಟಿನ ಸ್ಥಳವಾಗಿದೆ. ಹುಣಸೂರು ಪ್ರದೇಶವು ಆರಂಭದಲ್ಲಿ ಪುನ್ನಾಟದ ಅರಸರು ಹಾಗೂ ತಲಕಾಡಿನ ಗಂಗರ ಆಡಳಿತಕ್ಕೆ ಒಳಪಟ್ಟಿತ್ತು. ಸಾಂಸ್ಕೃತಿಕ ವಿಕಾಸವನ್ನು ಕಂಡಿದೆಯಾದರೂ, ತಾಲ್ಲೂಕು ಕೇಂದ್ರ ಹುಣಸೂರಿನ ಪ್ರಾಚೀನತೆಯನ್ನು ಸರಿಸುಮಾರು ಕ್ರಿ.ಶ.10 ಮತ್ತು 11ನೆಯ ಶತಮಾನದಷ್ಟು ಹಿಂದಕ್ಕೆ ಗುರುತಿಸಬಹುದಾಗಿರುತ್ತದೆ. ಆದರೂ ಇದು ಪ್ರಾಮುಖ್ಯತೆಗಳಿಸಿದ್ದು ಮರಮುಟ್ಟಿನ ವ್ಯಾಪಾರ ಕೇಂದ್ರವಾಗಿ ರೂಪುಗೊಂಡ ಅನಂತರವೇ. ಟಿಪ್ಪುಸುಲ್ತಾನನು ಈ ಪ್ರದೇಶವನ್ನು ತನ್ನ ಸೈನಿಕ ನೆಲೆಯಾಗಿ ಉಪಯೋಗಿಸುತ್ತಿದ್ದನು.

ಹುಣಸೂರು ಎಂಬ ನಾಮಪದದ ಮೂಲ ಸರಿಯಾಗಿ ತಿಳಿದುಬಂದಿಲ್ಲ. ಆದರೂ ಸಹ ಇದುವರೆಗೂ ದೊರಕಿರುವ ಹಲವು ಶಾಸನಗಳಲ್ಲಾಗಲಿ ಅಥವಾ ಪ್ರಾಚೀನ ಸಾಹಿತ್ಯಾಧಾರಗಳಿಂದಾಗಲೀ ಹುಣಸೂರು ಹೆಸರಿನ ಉಲ್ಲೇಖವಿಲ್ಲ. ಆದರೆ ಈ ಊರಿನ ಸುತ್ತಮುತ್ತಲ್ಲಿನ ಅರಣ್ಯ ಪ್ರದೇಶದಲ್ಲಿ ದಟ್ಟವಾಗಿ ಸಾಲುಸಾಲಾಗಿ ಹುಣಸೆಮರಗಳಿದ್ದು, ಹುಣಸೆಹಣ್ಣಿನ ಉತ್ಪತ್ತಿ ಹೆಚ್ಚಾಗಿತ್ತು. ಅಕ್ಕಪಕ್ಕದ ಊರಿನ ಜನ ಹುಣಸೆಹಣ್ಣಿಗಾಗಿ ಇಲ್ಲಿಗೆ ಬರುತ್ತಿದ್ದು, ಈ ಊರನ್ನು 'ಹುಣಸೆಯೂರು' ಎಂದು ಗುರುತಿಸಲು ಆರಂಭಿಸಿದರು. ಅದೇ ಕಾಲಕಳೆದಂತೆ ಜನಸಾಮಾನ್ಯರು 'ಹುಣಸೆಯೂರು,' 'ಹುಣಸೂರು' ಆಗಿ ಇದೇ ಶಾಶ್ವತವಾಗಿ ಬಳಕೆಯಾಗತೊಡಗಿತು ಎಂಬುದು ಜನಪದದ ನಿರುಕ್ತಿಯಾಗಿರುತ್ತದೆ. ಇಲ್ಲಿನ ಅರಣ್ಯಗಳಲ್ಲಿ ವಿಫುಲವಾಗಿ ತೇಗದ ಮರಗಳು ಬೆಳೆಯುತ್ತಿದ್ದವು ಅವುಗಳಿಂದ ಸ್ಥಳೀಯರು ಎತ್ತಿನ ಬಂಡಿಗಳನ್ನು ತಯಾರಿಸಿ ಸುತ್ತಲ ರೈತಾಪಿ ಜನರಿಗೆ ಮಾರುತ್ತಿದ್ದರು. ಅದರಿಂದಾಗಿ ಈ ಪ್ರದೇಶವನ್ನು 'ಗಾಡಿಪಾಳ್ಯ' ಎಂದೂ ಕರೆಯುತ್ತಿದ್ದರಂತೆ ಎಂಬುದು ಕ್ಷೇತ್ರಾಧ್ಯಯನದಿಂದ ತಿಳಿದುಬರುತ್ತದೆ. ಆದರೆ ಜನಪದಕಾವ್ಯ 'ಪಿರಿಯಾಪಟ್ಟಣದ ಕಾಳಗ'ದಲ್ಲೂ 'ಗಾಡಿಪಾಳ್ಯ ಹುಣ್ಸೂರು' ಎಂಬ ಉಲ್ಲೇಖವಿದೆ. ಈಗಲೂ ಪಟ್ಟಣದ ಮಧ್ಯೆ ಇರುವ ಒಂದು ರಸ್ತೆಗೆ 'ಗಾಡಿಕಾರ್ಖಾನೆ ರಸ್ತೆ'ಎಂಬ ಹೆಸರಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಚಂಗಾಳ್ವ ಅರಸರು ಮತ್ತು ಕೊಂಗಾಳ್ವ ಅರಸರ ನಡುವೆ ನಡೆದ ಯುದ್ಧದಲ್ಲಿ ಕೊಂಗಾಳ್ವ ರಾಜಹೋರಾಡುತ್ತಲೇ ಮಡಿದಾಗ ಅವನ ಪತ್ನಿ ಏಚಲಾದೇವಿಯು ಪುಣಚಮಯ್ಯನನ್ನು ಸಾಕಿ ಸಲುಹಿಸಿರುವ ಒಂದು ಐತಿಹ್ಯವಿದೆ. ಕಾಡಿನಿಂದ ಸೌದೆಯನ್ನು ತಂದು ಮಾರಿ ಜೀವನ ಸಾಗಿಸುತ್ತಿದ್ದ ಪುಣಚಮಯ್ಯನಿಗೆ ಅಪಾರ ಐಶ್ವರ್ಯ ದೊರೆಯಿತೆಂದೂ ಆ ಹಣದಿಂದ ಲಕ್ಷ್ಮಣತೀರ್ಥನದಿಯ ದಡದಲ್ಲಿ ಊರೊಂದನ್ನು ನಿರ್ಮಿಸಿದ್ದನು. ಹೀಗೆ ನಿರ್ಮಾಣ ಮಾಡಿರುವ ಆ ಊರಿಗೆ "ಪೊನ್ನಚ್ಚೂರು"ಎಂದು ಕರೆದನೆಂದೂ ಮುಂದೇ ಪೊನ್ನಚ್ಚೂರೇ ಹುಣಸೂರೆಂದಾಯಿತು. ಇದೇ ಪುಣಚಮಯ್ಯನು ತನ್ನ ಗುರುಗಳಾದ ಕುಂದಾಚಾರ್ಯರ ಹೆಸರಿನಲ್ಲಿ ಶ್ರೀಕುಂದಾಚಾರ್ಯಪುರವನ್ನು ನಿರ್ಮಿಸಿದನೆಂದೂ ಮುಂದೆ ಅದೇ ಚಿಲ್ಕುಂದವೆಂದಾಯಿತೆಂದೂ ಹೇಳಲಾಗುತ್ತದೆ. ಹೊಯ್ಸಳರ ಪ್ರಖ್ಯಾತ ರಾಜನಾಗಿದ್ದ ವಿಷ್ಣುವರ್ಧನನ ದಂಡನಾಯಕ ಪುಣಸಮಯ್ಯನಿಂದ ಈ ಊರಿಗೆ ಆ ಹೆಸರು ಬಂದಿರುವ ಸಾಧ್ಯತೆಯನ್ನೂ ಪರಿಶೀಲಿಸುವ ಅಗತ್ಯವಿದೆ ಎಂದು ಹೇಳಬಹುದು. ಮೈಸೂರು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಒಂದಾದ ಹುಣಸೂರು ತಾಲ್ಲೂಕಿಗೆ ಪೂರ್ವದಲ್ಲಿ ಮೈಸೂರು, ಆಗ್ನೇಯ ಮತ್ತು ದಕ್ಷಿಣದಲ್ಲಿ ಹೆಗ್ಗಡದೇವನಕೋಟೆ, ನೈಋತ್ಯದಲ್ಲಿ ಕೊಡಗು ಜಿಲ್ಲೆಯ ವೀರಾಜಪೇಟೆ, ಪಶ್ಚಿಮದಲ್ಲಿ ಪಿರಿಯಾಪಟ್ಟಣ ಹಾಗೂ ಉತ್ತರದಲ್ಲಿ ಕೃಷ್ಣರಾಜನಗರ ತಾಲ್ಲೂಕುಗಳು ಗಡಿಗಳಾಗಿವೆ. ಹುಣಸೂರು ತಾಲ್ಲೂಕು ಪೂರ್ವ–ಪಶ್ಚಿಮವಾಗಿ 35 ಕಿಮೀ. ಉತ್ತರ–ದಕ್ಷಿಣವಾಗಿ 24 ಕಿಮೀ. ವ್ಯಾಪಿಸಿದ್ದು, ಆಕಾರದಲ್ಲಿ ಉತ್ತರ–ದಕ್ಷಿಣವಾಗಿ ಕಿರಿದಾಗಿದ್ದರೆ, ಪೂರ್ವ–ಪಶ್ಚಿಮವಾಗಿ ಹಿರಿದಾಗಿದ್ದು, ಒಟ್ಟು 900 ಚ.ಕಿಮೀ. ಭೂವಿಸ್ತೀರ್ಣವನ್ನು ಹೊಂದಿದೆ. ಮೈಸೂರು ಜಿಲ್ಲೆಯ ತಾಲೂಕುಗಳ ವಿಸ್ತೀರ್ಣದಲ್ಲಿ ಇದು ಮೂರನೆಯ ಸ್ಥಾನ ಪಡೆದಿದೆ.

ಈ ತಾಲ್ಲೂಕು ಸಮುದ್ರ ಮಟ್ಟದಿಂದ ಗರಿಷ್ಠ ಸರಾಸರಿ 800 ಮೀಟರ್ ಎತ್ತರದಲ್ಲಿದೆ. ಆದರೆ ಸಮೋನ್ನತ ರೇಖೆಗಳ ಗರಿಷ್ಠ ಎತ್ತರ 820 ಮೀಟರ್ ಇದೆ. ತಾಲ್ಲೂಕಿನ ಮಧ್ಯಭಾಗದಿಂದ ಪಶ್ಚಿಮದ ಕಡೆಗೆ ಹೋದಂತೆ ಪಶ್ಚಿಮಘಟ್ಟಗಳಲ್ಲಿ ಮೊದಲ ಮೆಟ್ಟಲುಗಳಂತೆ ಕೆಲವು ಬೆಟ್ಟಗಳಿವೆ. ಅವುಗಳಲ್ಲಿ ನವಿಲುಮಂಟಿ, ಕಳ್ಳಬೆಟ್ಟ, ಓಂಕಾರೇಶ್ವರಬೆಟ್ಟಗಳನ್ನು ಕಾಣಬಹುದು. ಗ್ರಾನೈಟ್ ಶಿಲೆಯಿಂದ ಉಂಟಾದ ಕೆಂಪು ಮರಳು ಮತ್ತು ಮಿಶ್ರಗೋಡು ಮಣ್ಣು ಹೆಚ್ಚು ಕಂಡುಬರುತ್ತವೆ. ಸುಣ್ಣಕಲ್ಲು, ಗ್ರಾಫೈಟ್, ಮ್ಯಾಗ್ನಸೈಟ್, ಚಿನ್ನದ ಅದಿರು, ಕಲ್ನಾರು, ಪೈರಸೀನಸ್ ಮುಂತಾದ ನಿಕ್ಷೇಪಗಳು ಕಂಡುಬರುತ್ತವೆ. ಭೌಗೋಳಿಕ ಕ್ಷೇತ್ರದ ಶೇಕಡಾ 14.5ರಷ್ಟಿದೆ. ಮಾನ್ಸೂನ್ ಮಾದರಿಯ ಪ್ರಕಾರ ಮರಗಿಡ ಸಸ್ಯವರ್ಗಗಳು ಇಲ್ಲಿನ ಅರಣ್ಯಗಳಲ್ಲಿವೆ. ತೇಗ, ಮತ್ತಿ, ಮಾವು, ಬೀಟೆ, ಬೇವು, ಬೇಲ, ಬನ್ನಿ, ಬೂರುಗ, ಆಲ, ಹಲಸು, ಹುಣಸೆ, ಹೊನ್ನೆ, ನಂದಿ, ನೇರಳೆ, ಶ್ರೀಗಂಧ, ಬಿದಿರುನಂತಹ ಬಹು ಉಪಯೋಗಿ ಹಾಗೂ ಹೆಚ್ಚು ಬೆಲೆಬಾಳುವ ಮರಗಳಿವೆ. 'ಸಾಗುವಾನಿ'

ನಗರ ಎಂದೇ ಕರೆಯಲ್ಪಡುವ ಹುಣಸೂರಿನಿಂದ ತೇಗದ ಮರ ದೇಶದ ನಾನಾಭಾಗಗಳಿಗೆ ರಫ್ತಾಗುತ್ತದಲ್ಲದೇ ವಿದೇಶಗಳಲ್ಲೂ ಇದಕ್ಕೆ ಹೆಚ್ಚು ಬೇಡಿಕೆಯಿದೆ. ಇಂದು 'ಅರಬ್ಬಿತಿಟ್ಟು' ಎಂದು ಕರೆಯಲಾಗುವ ಸ್ಥಳದಲ್ಲಿ ಹಿಂದೆ ಅರಬ್ ದೇಶದವನೊಬ್ಬನು ಒಂಟೆ, ಕುದುರೆಗಳ ವ್ಯಾಪಾರ ನಡೆಸುತ್ತಿದ್ದನು. ಅಂದಿನಿಂದ ಈ ಸ್ಥಳಕ್ಕೆ ಅವನ ದೇಶದ ಹೆಸರಿನಿಂದಲೇ ಕರೆಯಲಾಗುತ್ತಿದೆ.

ಹುಣಸೂರು ತಾಲ್ಲೂಕಿನ ಏಕೈಕ ನದಿಯಾದ ಲಕ್ಷ್ಮಣತೀರ್ಥವೂ ಕರ್ನಾಟಕದ ಜೀವ ಜಲಧಾರೆಯೇ ಆಗಿರುವಂತಹ ಕಾವೇರಿ ನದಿಯ ಒಂದು ಮುಖ್ಯ ಉಪನದಿ ಇದಾಗಿದೆ. ಇದರ ಉಗಮಕ್ಕೂ ರಾಮಾಯಣಕ್ಕೂ ಇರುವ ಸಂಬಂಧವನ್ನು ಈಗಲೂ ಜನರ ಬಾಯಲ್ಲಿ ಕೇಳಬಹುದು. ವನವಾಸ ಕಾಲದಲ್ಲಿ ಶ್ರೀರಾಮ, ಸೀತೆ, ಲಕ್ಷ್ಮಣ ಈ ಭಾಗದಲ್ಲಿ ಸಂಚರಿಸುತ್ತಿರುವಾಗ ಸೀತೆಗೆ ದಾಹವಾಗಿ ಕುಡಿಯಲು ನೀರು ಕೇಳಿದಾಗ ಅಲ್ಲೆಲ್ಲೂ ನೀರು ಕಾಣಿಸದಿರಲು ಲಕ್ಷ್ಮಣನು ಬಾಣ ಪ್ರಯೋಗಿಸಿದಾಗ ಬಂಡೆಯೊಂದು ಸೀಳಿಕೊಂಡು ಅದರಿಂದಲೇ ನೀರು ಚಿಮ್ಮಲಾರಂಭಿಸಿತಂತೆ ಲಕ್ಷ್ಮಣನು ಹೂಡಿದ ಬಾಣದಿಂದ ಹುಟ್ಟಿದ ಈ ನದಿ ಲಕ್ಷ್ಮಣತೀರ್ಥವೆಂದೇ ಮುಂದೆ ಹೆಸರಾಯಿತು. ಈ ಲಕ್ಷ್ಮಣತೀರ್ಥ ನದಿ ದಂಡೆಯಲ್ಲಿರುವ ಶಿವನ ಒಂದು ದೇವಾಲಯವನ್ನು ಶ್ರೀರಾಮಚಂದ್ರನೇ ನಿರ್ಮಿಸಿದ್ದನೆಂದೂ ಎಂಬ ಪ್ರತೀತಿಯೂ ಕೂಡ ಇದೆ. ಆದ್ದರಿಂದಲೇ ಇಲ್ಲಿ ಪ್ರತಿವರ್ಷ ಮಹಾಶಿವರಾತ್ರಿಯ ದಿನದಂದು ದೊಡ್ಡ ಜಾತ್ರೆಯೂ ಕೂಡ ನಡೆಯುತ್ತದೆ. ಹುಣಸೂರು ತಾಲ್ಲೂಕಿನ ಜಲಾವಶ್ಯಕತೆಯನ್ನು ಅಲ್ಲಿನ ಅನೇಕ ಕೆರೆ ಮತ್ತು ಕೊಳವೆ, ತೆರೆದ ಬಾವಿಗಳು ಸಹ ಪೂರೈಸುತ್ತಿವೆ ಎಂಬುದು ತಿಳಿದುಬರುತ್ತದೆ.

ಪಿರಿಯಾಪಟ್ಟಣ ತಾಲ್ಲೂಕು

ಕರ್ನಾಟಕ ರಾಜ್ಯದಲ್ಲಿನ ದಕ್ಷಿಣ ದಿಕ್ಕಿನಲ್ಲಿರುವ ಮೈಸೂರು ಜಿಲ್ಲೆಯ ಪರಿಮಿತಿಯಲ್ಲಿ ಬರುವಂತಹ ಏಳು ತಾಲ್ಲೂಕುಗಳಲ್ಲಿ ಪಿರಿಯಾಪಟ್ಟಣವೂ ಕೂಡ ಒಂದಾಗಿದೆ. ಈ ಪಿರಿಯಾಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆಯ ಪಶ್ಚಿಮಕ್ಕೆ ಇದ್ದು, ಈ ಜಿಲ್ಲೆಯಲ್ಲಿನ ಪಶ್ಚಿಮ ಹಾಗೂ ವಾಯುವ್ಯ ಗಡಿಯೂ ಆಗಿದ್ದು, ಸರಿಸುಮಾರು ಕ್ರಿ.ಶ. 1869ರಲ್ಲಿ ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದರೂ ಸಹ ಹುಣಸೂರು ಇದರ ಕೇಂದ್ರ ಸ್ಥಾನವೇ ಆಗಿತ್ತು. ಇದು ಸರಿಸುಮಾರು ಕ್ರಿ.ಶ 1882ರಲ್ಲಿ ಹುಣಸೂರು ಒಂದು ತಾಲ್ಲೂಕು ಆದಾಗ ಅದರಲ್ಲಿ ಈ ತಾಲ್ಲೂಕು ವಿಲೀನವೇ ಆಗಿರುತ್ತದೆ. ಈ ಪಿರಿಯಾಪಟ್ಟಣವು ಸರಿಸುಮಾರು ಕ್ರಿ.ಶ 1935ರಲ್ಲಿ ಮತ್ತೇ ಒಂದು ಸ್ವತಂತ್ರ ಅಸ್ತಿತ್ವ ಪಡೆದ ನಂತರ ಈ ತಾಲ್ಲೂಕು ವಾಯುವ್ಯ ಭಾಗದಲ್ಲಿ ಗಡಿಯಾಗಿ ಕಾವೇರಿ ನದಿ ಸ್ವಲ್ಪ ದೂರದಲ್ಲಿ ಪ್ರವೇಶಿಸಿ ನೆರೆಯ ಹಾಸನ ಜಿಲ್ಲೆಯನ್ನು ಹೊಳೆನರಸೀಪುರ ತಾಲ್ಲೂಕಿನಲ್ಲಿ ಸಂಧಿಸುತ್ತದೆ ಎಂಬುದನ್ನು ಅಧ್ಯಯದಲ್ಲಿ ಗುರುತಿಸಲಾಗಿದೆ.

ಪಿರಿಯಾಪಟ್ಟಣ ತಾಲ್ಲೂಕಿನ ಪೂರ್ವ ದಿಕ್ಕಿಗೆ ಹುಣಸೂರು ತಾಲ್ಲೂಕು, ಉತ್ತರಕ್ಕೆ ಹಾಸನ ಜಿಲ್ಲೆ, ಪಶ್ಚಿಮಕ್ಕೆ ಇರುವ ಮಾವುಕಲ್ಲಯ್ಯನ ಬೆಟ್ಟ ಹಾಗೂ ಜೇನುಕಲ್ಲುಬೆಟ್ಟಗಳು ಪಿರಿಯಾಪಟ್ಟಣ ತಾಲ್ಲೂಕಿನ ಅತಿ ದೊಡ್ಡ ಬೆಟ್ಟಗಳೇ ಆಗಿರುತ್ತವೆ. ಕೊಡಗು ಜಿಲ್ಲೆಗೆ ಬಹು ಹತ್ತಿರವಿರುವ ಈ ತಾಲ್ಲೂಕಿನ ಪಶ್ಚಿಮ ಹಾಗೂ ವಾಯುವ್ಯ ಗಡಿಯಲ್ಲಿಯೇ ಕನ್ನಡನಾಡಿನ ಜೀವಜಲಧಾರೆಯಾಗಿರುವ ಕಾವೇರಿ ನದಿಯು ಹರಿದು ಸೋಮವಾರಪೇಟೆಯ ತಾಲ್ಲೂಕನ್ನು ಪ್ರತ್ಯೇಕಿಸುತ್ತದೆ. ಹಾಗೆಯೇ ವಿರಾಜಪೇಟೆ, ಉತ್ತರಕ್ಕೆ ಸೋಮವಾರಪೇಟೆ ತಾಲ್ಲೂಕು, ದಕ್ಷಿಣಕ್ಕೆ ಹೆಗ್ಗಡದೇವನಕೋಟೆ ತಾಲ್ಲೂಕುಗಳನ್ನು ಸುತ್ತುವರೆದಿರುತ್ತದೆ

ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದಂತೆಯೇ ಅನೇಕ ಐತಿಹ್ಯ ಹಾಗೂ ಪುರಾಣ ಕಥೆಗಳು ಈ ಸುತ್ತಮುತ್ತಲಿನ ಪ್ರದೇಶದಲ್ಲಿ ಇಂದಿಗೂ ಜೀವಂತವಾಗಿರುವುದಲ್ಲದೇ ಅಗಸ್ತ್ಯರು ಈ ಸ್ಥಳವನ್ನು ಸಂದರ್ಶಿಸಿದ್ದರೆಂದು ಪ್ರತೀತಿಯೂ ಸಹ ಇದೆ. ಆದ್ದರಿಂದಲೇ ಇದೇ ಪಿರಿಯಾಪಟ್ಟಣದ ಉತ್ತರ ದಿಕ್ಕಿನಲ್ಲಿ ಹರಿಯುತ್ತಿರುವಂತಹ ಕಾವೇರಿ ನದಿಯ ದಡದಲ್ಲಿ ರಾಮನಾಥಪುರ ಎಂಬುವಂತಹ ಒಂದು ಪ್ರಸಿದ್ಧಿಯಾಗಿರುವ ಯಾತ್ರಾ ಸ್ಥಳವಿದೆ. ಕಾವೇರಿ ನದಿಯ ದಡದಲ್ಲಿ ಎದ್ದು ಕಾಣವ ದೊಡ್ಡ ಗಾತ್ರದ ಬಂಡೆ ಇದೆ. ಆ ಬಂಡೆಯನ್ನು ಗಾಯತ್ರಿಶಿಲೆ ಎಂದೂ ಕೂಡ ಕರೆಯಲಾಗುತ್ತದೆ. ಈ ಸ್ಥಳದಲ್ಲಿ ಮಹಾನ್ ಋಷಿ ಆಗಿದ್ದಂತಹ ವಿಶ್ವಾಮಿತ್ರನು ತಪಸ್ಸು ಮಾಡಿ ಗಾಯಿತ್ರಿ ದೇವಿಯನ್ನು ಸಾಕ್ಷಾತ್ಕರಿಸಿಕೊಂಡಿರುವುದು ಕಂಡುಬರುತ್ತದೆ. ಇದಲ್ಲದೇ ಇದೇ ವಿಶ್ವಾಮಿತ್ರ ಮತ್ತು ಸಪ್ತ ಸುಂದರಿಯರಲ್ಲಿ ಒಬ್ಬರಾದಂತಹ ಮೇನಕೆಯ ನಡುವಿನ ಸಂಬಂಧದಿಂದ ಜನಿಸಿರುವ ಶಾಕುಂತಲೆಯನ್ನು ಪೋಷಿಸಿ ಬೆಳೆಸಿದಂತಹ ಕಣ್ವ ಮಹರ್ಷಿಯವರ ಆಶ್ರಯ ತಾಣವಿದ್ದ ಸ್ಥಳವೇ ರಾಮನಾಥಪುರಕ್ಕೆ ಸಮೀಪದಲ್ಲಿರುವ ‘ಕಣಗಾಲು’ ಅಥವಾ ‘ಕಣ್ವಗಾಲು’ ಎಂದೇ ಕರೆಯಲಾಗುತ್ತದೆ. ಈ ಕಣಗಾಲು ಹತ್ತಿರದಲ್ಲಿ ಇರುವ ಕೊಣನೂರು ಕಣ್ವನೂರಂತೆ ಶಾಸನಗಳಲ್ಲಿ ಉಲ್ಲೇಖಿತವಾಗಿರುತ್ತದೆ.

ಪಿರಿಯಾಪಟ್ಟಣ ಪ್ರದೇಶದ ರಾಜಕೀಯ ಚರಿತ್ರೆಯನ್ನು ಬಹಳ ಪ್ರಮುಖವಾಗಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು ಮತ್ತು ಮೈಸೂರು ಸಂಸ್ಥಾನದ ಒಡೆಯರು, ಕೊಡಗಿನ ರಾಜರು ಆಳ್ವಿಕೆ ಮಾಡಿರುವುದು ತಿಳಿದುಬರುತ್ತದೆ. ಇವರ ಜೊತೆಜೊತೆಗೆ ಸ್ಥಳೀಯ ಪ್ರಭುಗಳು ಹೆಚ್ಚು ಪ್ರಸಿದ್ಧಿಯನ್ನು ಗಳಿಸಿಕೊಂಡಿರುವಂತಹ ಚಂಗಾಳ್ವರು ಹಾಗೂ ಕೊಂಗಾಳ್ವರು ಇಲ್ಲಿನ ರಾಜಕೀಯ ಚರಿತ್ರೆಗೆ ಅಪಾರವಾದಂತಹ ಸೇವೆಯನ್ನು ಸಲ್ಲಿಸಿ ಗಣನೀಯವಾದ ಕೊಡುಗೆಯನ್ನು ಸಹ ನೀಡಿರುವುದು ಇಂದಿಗೂ ದಾಖಲೆಯ ವಿಷಯವಾಗಿರುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನ ಸರಿಸುಮಾರು ಒಟ್ಟು ಗ್ರಾಮಗಳ ಪೈಕಿ 60

ಗ್ರಾಮಗಳಲ್ಲಿ ಒಟ್ಟು 148 ಶಾಸನಗಳು 'ಎಪಿಗ್ರಾಫಿಯ ಕರ್ನಾಟಿಕ ಸಂಪುಟ–4'ರಲ್ಲಿ ಸಂಗ್ರಹಿತಗೊಂಡಿರುತ್ತವೆ. ಈ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಹೆಚ್ಚಿನ ಪ್ರಾಥಮಿಕ ಮಾಹಿತಿಯನ್ನು ನೀಡುತ್ತವೆ.

ಗಂಗರು ಕೋಲಾರ ಮತ್ತು ಮೈಸೂರು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ತಮ್ಮದೇ ಆದಂತಹ ಪ್ರಭುತ್ವವನ್ನು ಸಾಧಿಸಿದ್ದರು. ಅನಂತರ ಸರಿಸುಮಾರು ಕ್ರಿ.ಶ.8–9ನೇ ಶತಮಾನದಲ್ಲಿ ಕೊಡಗು ಜಿಲ್ಲೆ ಅಥವಾ ಚಂಗಾಳ್ವರ ನಾಡು ಎಂದೇ ಖ್ಯಾತಿ ಗಳಿಸಿರುವ ಈ ಪ್ರದೇಶವು ಅಂದರೆ ಪೂರ್ವ ಹಾಗೂ ದಕ್ಷಿಣ ಭಾಗದಲ್ಲಿ ಆಳ್ವಿಕೆ ನಡೆಸಿರುವುದನ್ನು ಬಿಳಿಯೂರಿನಲ್ಲಿ ದೊರೆತಿರುವ ಶಾಸನದಲ್ಲಿ ರಾಜನು ಸರ್ವನಂಬಿ ಭಟಾರನೆಂಬ ಜೈನಮುನಿಗೆ ಸರಿಸುಮಾರು ಕ್ರಿ.ಶ.888ರಲ್ಲಿ ನೀಡಿದ ದಾನದ ಬಗೆಗಿನ ಉಲ್ಲೇಖವಿದೆ. ಸತ್ಯವಾಕ್ಯ ಜಿನಾಲಯವನ್ನು ರಾಜನು ಬಿಳಿಯೂರಿನ 'ಪೇಣ್ಣೆ ಕಡಂಗ' ಎಂಬಲ್ಲಿ ನಿರ್ಮಾಣ ಮಾಡಿ ಅದರ ನಿರ್ವಹಣೆಗಾಗಿಯೇ ಇದೇ ಬಿಳಿಯೂರು ಹಾಗೂ ಇತರೆ 12 ಗ್ರಾಮಗಳನ್ನು ದಾನವಾಗಿ ಕೊಟ್ಟರು ಎಂಬುದು ಇದೇ ಶಾಸನದಲ್ಲಿ ದಾಖಲಿಸಲಾಗಿದೆ ಎಂಬುದನ್ನು ತಿಳಿಯಬಹುದೆ.

ಹೊಯ್ಸಳರು ಸಂಪೂರ್ಣವಾಗಿ ಗಂಗವಾಡಿಯನ್ನು ಚೋಳರಿಂದ ಬಿಡುಗಡೆ ಮಾಡುವುದಕ್ಕೆ ಮೊದಲೇ ಉತ್ತರ ಕೊಡಗಿನಲ್ಲಿ ತನ್ನದೇ ಆದಂತಹ ಪ್ರಭುತ್ವ ಹಾಗೂ ಪ್ರಭಾವವನ್ನು ಕೂಡ ಹೊಂದಿದ್ದರು ಎಂಬುದನ್ನು ಗುರುತಿಸಲಾಗಿದೆ. ಹೊಯ್ಸಳರ ಆಡಳಿತ ಕಾಲಮಾನಕ್ಕೆ ಸೇರಿದಂತಹ ಸರಿಸುಮಾರು ಕ್ರಿ.ಶ.1175ರ ಮಲ್ಲಿಕಾರ್ಜುನ ದೇವಾಲಯ ಶಾಸನದ ಪ್ರಕಾರ ಈ ಶಾಸನದಲ್ಲಿ ಹೊಯ್ಸಳರ ರಾಜನಾಗಿದ್ದಂತಹ ಎರಡನೆಯ ಬಲ್ಲಾಳನು ದ್ವಾರಸಮುದ್ರದಲ್ಲಿ ಆಳ್ವಿಕೆಯನ್ನು ನಡೆಸುತ್ತಿದ್ದನು ಎಂದು ಹೇಳುತ್ತದೆ. ಹಾಗೆಯೇ ಸೋಮವಾರಪೇಟೆ ತಾಲ್ಲೂಕಿನ ಹೆಗ್ಗಡಹಳ್ಳಿಯಲ್ಲಿ ದೊರೆತಿರುವ ಹೊಯ್ಸಳರ ಕಾಲದ ಒಂದು ವೀರಗಲ್ಲು ಶಾಸನವೂ ಕೂಡಾ ಈ ಬಲ್ಲಾಳನ ಆಡಳಿತದ ಕಾಲದ್ದೇ ಆಗಿರುತ್ತದೆ. ಆದ್ದರಿಂದಲೇ ಈ ಎರಡನೇ ಬಲ್ಲಾಳನು ಇದೇ ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದಂತಹ ಕೊಂಗಾಳ್ವರ ಆಡಳಿತವನ್ನು ಕೂಡ ಸಂಪೂರ್ಣವಾಗಿ ಕೊನೆಗಾಣಿಸಿದನು. ಇದರ ತರುವಾಯ ತನ್ನ ವಶದಲ್ಲಿದ್ದ ಕೊಡಗಿನ ಕೆಲವು ಭಾಗವನ್ನು ಸಾಮಂತರಾಗಿದ್ದಂತಹ ಚಂಗಾಳ್ವರಿಗೆ ಆಡಳಿತ ನಡೆಸಲು ಬಿಟ್ಟುಕೊಟ್ಟನು ಎಂಬುದು ತಿಳಿದುಬರುತ್ತದೆ. ಆದ್ದರಿಂದಲೇ ಈ ಪ್ರದೇಶದಲ್ಲಿ ಚಂಗಾಳ್ವರು ಹೊಯ್ಸಳ ರಾಜಮಹಾರಾಜರಿಗೆ ಮಾಂಡಲೀಕರಾಗಿ ಆಡಳಿತವನ್ನು ನಡೆಸಿದ್ದರು ಎಂಬುದು ತಿಳಿದುಬರುತ್ತದೆ. ಹಾಗೆಯೇ ಸರಿಸುಮಾರು ಕ್ರಿ.ಶ. 1235ರ ಶಾಸನವೊಂದರಲ್ಲಿ ಚಂಗಾಳ್ವ ಸೋಮದೇವ ಹಾಗೂ ಬೊಪ್ಪದೇವರು ರಾಮನಾಥಪುರದ ಸೋಮೇಶ್ವರನನ್ನು ಕಂಡು ಇದೇ ರಾಮನಾಥಪುರಲ್ಲಿನ ದೇವಾಲಯಕ್ಕೆ ದಾನವನ್ನು ನೀಡಿದ ವಿಚಾರವೂ ಕೂಡ ದಾಖಲಾಗಿರುತ್ತದೆ.

ಚಂಗಾಳ್ವ ಅರಸರು ಮೈಸೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ್ದಾರೆ ಎಂಬುದು ತಿಳಿದುಬರುತ್ತದೆ. ಚಂಗಾಳ್ವ ಅರಸರ ಚರಿತ್ರೆಯು ಸರಿಸುಮಾರು ಕ್ರಿ.ಶ.10ನೇ ಶತಮಾನದಿಂದ 17ನೇ ಶತಮಾನದ ಮಧ್ಯಭಾಗದವರೆಗೆ ಇತ್ತು ಎಂದು ಗುರುತಿಸಲಾಗಿದೆ. ಇದೇ ಚಂಗಾಳ್ವ ಅರಸರು ಇಷ್ಟು ದೀರ್ಘಕಾಲ ಅಳ್ವಿಕೆ ನಡೆಸಿದರೂ ಎಂಬುದನ್ನು ಕುರಿತಂತೆ ಯಾವುದೇ ಮಾದರಿಯ ಶಾಸನಗಳಿಂದಾಗಲಿ ಹಾಗೂ ಸಮಕಾಲೀನ ಕೃತಿಗಳಿಂದಾಗಲಿ ಹೆಚ್ಚಿನ ಮಾಹಿತಿಗಳು ದೊರಕಿರುವುದಿಲ್ಲ. ಚಂಗಾಳ್ವರು ಆಳಿದ ಕೊಡಗಿನ ಭಾಗಗಳು ಮೈಸೂರು ಯುದ್ಧಗಳ ತರುವಾಯ ಸ್ಥಾಪಿತಗೊಂಡ ಕೊಡಗು ರಾಜ್ಯಕ್ಕೆ ಸೇರಿದ್ದವು. ಉಳಿದ ಭಾಗಗಳಾದ ಪಿರಿಯಾಪಟ್ಟಣ, ಹುಣಸೂರು, ಕೃಷ್ಣರಾಜನಗರ, (ಎಡತೊರೆ) ಈ ಮೊದಲಾದ ಪ್ರದೇಶಗಳು ಮೈಸೂರು ಜಿಲ್ಲೆಗೆ ಸೇರಿದ್ದವು. ಚಂಗಾಳ್ವರು ಗಂಗ, ಚೋಳ ಹೊಯ್ಸಳರ ಸಾಮಂತರಾಗಿದ್ದರು. ಇಂತಹ ಮಹತ್ವದ ಮಾಹಿತಿಗಳುನ್ನು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಜಾನಪದ ಖ್ಯಾತ ವಿದ್ವಾಂಸರಾದಂತಹ ಡಾ.ಪಿ.ಕೆ.ರಾಜಶೇಖರ್‌ರವರ ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಈ ಪ್ರದೇಶದಲ್ಲಿ ದೊರಕಿರುವ ಶಾಸನಗಳಲ್ಲಿ ಸರಿಸುಮಾರು ಶೇಕಡಾ 25ರಷ್ಟು ಶಾಸನಗಳು ಚಂಗಾಳ್ವ ಅರಸರದ್ದೇ ಆಗಿರುವ ಕಾರಣ ಶಾಸನಗಳ ಮಾಹಿತಿಯನ್ನು ಪರಿಗಣಿಸಲಾಗಿದೆ.

ವಿಜಯನಗರ ಅರಸರ ಆಡಳಿತದ ಕಾಲಕ್ಕೆ ಕೊಡಗು ಮತ್ತು ಮೈಸೂರು ಪ್ರದೇಶದಲ್ಲಿ ವಿಜಯನಗರದ ಅರಸರ ಆಡಳಿತವನ್ನು ಸಹ ಗುರುತಿಸಬಹುದು. ಇವರ ಆಡಳಿತದ ಕಾಲಾವಧಿಯಲ್ಲಿ ಚಂಗಾಳ್ವ ಅರಸರು ಮಾಂಡಲೀಕರಾಗಿ ಇವರ ಕೆಲವು ಪ್ರದೇಶವನ್ನು ಹಾಗೂ ಭೂ ಭಾಗವನ್ನು 15ನೇ ಶತಮಾನದಿಂದ ಆಳುತ್ತಿದ್ದರು ಎಂಬುದನ್ನು ಗುರುತಿಸಲಾಗಿದೆ. ಈ ಚಂಗಾಳ್ವರು ವಿಜಯನಗರ ಅರಸರ ಮಾಂಡಲೀಕರಾಗಿ ಆಡಳಿತವನ್ನು ನಡೆಸಿದರು ಎಂಬುದನ್ನು ಕೊಡಗಿನ ಪ್ರದೇಶದಲ್ಲಿನ 'ಮುಳ್ಳೂರು' ಗ್ರಾಮದಲ್ಲಿ ಗುರುತಿಸಲಾಗಿರುವ ಸರಿಸುಮಾರು ಕ್ರಿ.ಶ.1390ರ ಶಾಸನ ಸಂಖ್ಯೆ–75ರ ಪ್ರಕಾರ ಆಡಳಿತ ನಡೆಸಿರುವುದು ಉಲ್ಲೇಖಿತಗೊಂಡಿದೆ. ಹಾಗೆಯೇ ಸರಿಸುಮಾರು 16ನೇ ಶತಮಾನದ ಉತ್ತರಾರ್ಧದಲ್ಲಿ ಕೊಡಗಿನ ಒಡೆಯರು ದಕ್ಷಿಣ ಮತ್ತು ಪಶ್ಚಿಮ ಕೊಡಗಿನಲ್ಲೂ ಇದೇ ಚಂಗಾಳ್ವರು ನಂಜರಾಜ ಪಟ್ಟಣದಿಂದ ಕೊಡಗಿನ ಪೂರ್ವಸೀಮೆ ಹಾಗೂ ಮೈಸೂರು ಜಿಲ್ಲೆಯ ಭೂ ಭಾಗಗಳಲ್ಲಿಯೂ ಆಳುತ್ತಿದ್ದರು ಎಂದು ತಿಳಿಸುತ್ತದೆ. ಹೀಗೆ ಆಳುತ್ತಿದ್ದಂತಹ ಚಂಗಾಳ್ವರ ಪ್ರದೇಶದ ಮೇಲೆ ಯುದ್ಧ ಮಾಡಿದ ಮೈಸೂರಿನ ಅರಸರು ಪಿರಿಯಾಪಟ್ಟಣವನ್ನು ವಶಪಡಿಸಿಕೊಂಡು ಆ ಮೂಲಕ ನಾಮಾವಶೇಷ ಮಾಡಿ ಅನಂತರದಲ್ಲಿ ಚಂಗಾಳ್ವರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಂಡರು ಎಂಬುದು ತಿಳಿದುಬರುತ್ತದೆ.

ಕೊಡಗಿನ ಒಡೆಯರು ಪಿರಿಯಾಪಟ್ಟಣ ಪ್ರದೇಶದಲ್ಲಿ ಮಾಂಡಲೀಕರಾಗಿದ್ದ ಚಂಗಾಳ್ವರೂ ಸಹ ಒಂದೇ ವಂಶದವರು ಎಂದೂ ಅಥವಾ ಅವರಿಬ್ಬರೂ ಪರಸ್ಪರ ಸಂಬಂಧಿಗಳೇ ಆಗಿದ್ದರು ಎಂಬುದು ತಿಳಿದುಬರುತ್ತದೆ. ಚಂಗಾಳ್ವರು ಸರಿಸುಮಾರು ಪ್ರಾಚೀನ ವಂಶದವರಾಗಿದ್ದು ಅಂದರೆ 16ನೇ ಶತಮಾನದಲ್ಲಿ ಇವರು ನಂಜರಾಜಪಟ್ಟಣದಿಂದಲೇ ಆಡಳಿತವನ್ನು ನಡೆಸುತ್ತಿದ್ದರು. ಹಾಗೆಯೇ ಸರಿಸುಮಾರು ಕ್ರಿ.ಶ. 1590ರಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣವನ್ನು ಸ್ಥಾಪಿಸಿದರು ಎಂಬುದನ್ನು ಪಿರಿಯಾಪಟ್ಟಣ ನಗರ ಪ್ರದೇಶದಲ್ಲಿನ ಶಾಸನ ಸಂಖ್ಯೆ– 1ರಲ್ಲಿ ದಾಖಲೀಸಲಾಗಿದೆ. ಇದೇ ಸ್ಥಳದಲ್ಲಿ ಹೊಸ ಹೆಸರು ಕೊಟ್ಟ ಒಂದು ಕೋಟೆಯನ್ನು ಕೂಡ ಕಟ್ಟಿಸಿ ಅದನ್ನು ವಿಸ್ತರಿಸಿದ್ದನು. ಇವರು ಮುಂದೆ ಸರಿಸುಮಾರು ಕ್ರಿ.ಶ.1612ರ ಶಾಸನವೊಂದರಲ್ಲಿ ನಂಜರಾಜ ಪಟ್ಟಣದ ಅರಸು ಎಂದು ಸ್ವಯಂ ಆಗಿಯೇ ಕರೆದುಕೊಂಡ್ಡಿದಾರೆ ಎಂದು ಉಲ್ಲೇಖಿತಗೊಂಡಿದೆ.

ಮೈಸೂರಿನ ಕಂಠೀರವ ನರಸರಾಜ ಹಾಗೂ ಕೊಡಗಿನ ಕೆಲವು ಪ್ರದೇಶದ ಹಾಗೂ ಭೂ ಭಾಗಗಳನ್ನು ಗೆದ್ದು ವಶಪಡಿಸಿಕೊಂಡಾಗ ಅಂದರೆ ಸರಿಸುಮಾರು ಕ್ರಿ.ಶ.1645ರಲ್ಲಿ ಈ ಪ್ರದೇಶದಲ್ಲಿನ ಚಂಗಾಳ್ವ ರಾಜನನ್ನು ಪಿರಿಯಾಪಟ್ಟಣದಲ್ಲಿ ಬಂಧಿಸಿ ಕಾವೇರಿಯ ಪೂರ್ವ ದಿಕ್ಕಿನ ಪ್ರದೇಶವನ್ನು ವಶಪಡಿಸಿಕೊಂಡಿದ್ದನು. ಆಗ ಈ ಚಂಗಾಳ್ವರ ವಶದಲ್ಲಿದ್ದ ಪ್ರದೇಶವು ಕೊಡಗಿನ ವಶಕ್ಕೆ ಬಂದು ಅನಂತರ ಇದನ್ನು ಪಡೆಯಲು ಮೈಸೂರು ಅರಸರು ಒಂದು ವರ್ಷ ಮುತ್ತಿಗೆ ಹಾಕಿದರು ಎಂಬುದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಚಂಗಾಳ್ವರು ತಮ್ಮನ್ನು ತಾವು 'ಕ್ಷಾತ್ರಪ'ಗೋತ್ರದವರೆಂದು ಹೇಳಿಕೊಳ್ಳುತ್ತಿದ್ದರು. ಆದರೆ ಇವರು ಮೈಸೂರು ಸಂಸ್ಥಾನದ ಅರಸರಿಗೆ ಬೀಗರಾಗಿದ್ದರು ಎಂಬುದು ಕೂಡ ತಿಳಿದುಬರುತ್ತದೆ.

ಚಂಗಾಳ್ವ ಅರಸರು ತೀರ ಸಾಮಾನ್ಯ ಹಾಗೂ ನಗಣ್ಯ ಪಾಳೆಯಗಾರರೇ ಆಗಿದ್ದರು. ಆದ್ದರಿಂದಲೇ ಒಂದನೇ ಮುದ್ದುರಾಜ ಇವರ ಆಳ್ವಿಕೆಯು ಮುಗಿದ ನಂತರ ಹಾಲೇರಿ ಹಾಗೂ ಹೆಚ್ಚಿನ ಪ್ರದೇಶವನ್ನು ಕೈವಶ ಮಾಡಿಕೊಂಡನು. ಹಾಗೆಯೇ ಸರಿಸುಮಾರು ಕ್ರಿ.ಶ. 1568ರ ಸನ್ಯಾಸಿಪುರದಲ್ಲಿನ ತಾಮ್ರಶಾಸನ ಒಂದರ ಪ್ರಕಾರ ನಂಜರಾಜಪಟ್ಟಣವು ಇದೇ ಚಂಗಾಳ್ವರ ರಾಜಧಾನಿಯಾಗಿತ್ತು ಎಂದು ಉಲ್ಲೇಖಿಸಿರುತ್ತದೆ. ಕೊಡಗಿನಲ್ಲಿ ಚಂಗಾಳ್ವರು ಸರಿಸುಮಾರು ಕ್ರಿ.ಶ.1645ರಲ್ಲಿ ಪತನವಾದ ಅನಂತರ ಉತ್ತರ ಮತ್ತು ಪೂರ್ವ ಕೊಡಗಿನ ಪ್ರದೇಶವನ್ನು ಇದೇ ಮುದ್ದುರಾಜನು ವಶಪಡಿಸಿಕೊಂಡು ಆಳ್ವಿಕೆಯನ್ನು ನಡೆಸಿದನು ಎಂಬುದು ತಿಳಿದುಬರುತ್ತದೆ.

ತಮಿಳುನಾಡು ಮೂಲದ ಚೋಳರು ತಲಕಾಡಿನ ಗಂಗ ವಂಶದ ರಾಜರನ್ನು ಸೋಲಿಸಿ ಕೊಡಗು ಹಾಗೂ ಮೈಸೂರಿನ ಅನೇಕ ಪ್ರದೇಶವನ್ನು ವಶಪಡಿಸಿಕೊಂಡಿದ್ದರು. ಈ ಪ್ರದೇಶದಲ್ಲಿ ಚಂಗಾಳ್ವ ಅರಸರು ಅದೇ ಚೋಳ ರಾಜರ ಪ್ರತಿನಿಧಿಗಳಾಗಿ ಹಾಗೂ ಅವರ ಸಾಮಂತರಾಗಿಯೂ ಆಳಿರುವುದನ್ನು ಅಧ್ಯಯನದಲ್ಲಿ ದೊರಕಿರುವ ಶಾಸನ ಮತ್ತು ಸಾಹಿತ್ಯಿಕ ಆಧಾರಗಳ ಮೂಲಕ ಗುರುತಿಸಲಾಗಿದೆ. ಗಂಗ ವಂಶಸ್ಥರ ರಾಜಧಾನಿ ಆಗಿದ್ದಂತಹ ಗಂಗವಾಡಿಯನ್ನು ಚೋಳರು ಆಕ್ರಮಣ ಮಾಡಿ ಗೆದ್ದರು. ಇದೇ ಗಂಗವಾಡಿಯ ಪಶ್ಚಿಮದಲ್ಲಿ ಚಂಗಾಳ್ವ ಅರಸರನ್ನು ಈ ಚೋಳರು ತಮ್ಮ ಮಾಂಡಲೀಕರನ್ನಾಗಿಯೂ ಕೂಡ ಮಾಡಿಕೊಂಡಿದ್ದರು ಎಂಬುದು ಕಂಡುಬರುತ್ತದೆ.

ಚಂಗಾಳ್ವ ಅರಸರ ರಾಜ್ಯವೇ ಆಗಿರುವ ಕೊಡಗಿನಲ್ಲಿ ಶಾಸನ ಸಂಖ್ಯೆ 48, 49, 53, 65, 67, 70, 72, 73, 81 ಹಾಗೂ 87 ಲಭ್ಯವಾಗಿರುವ ಶಾಸನಗಳಾಗಿರುತ್ತವೆ. ಚೋಳರಾಜರುಗಳು ಸರಿಸುಮಾರು ಕ್ರಿ.ಶ.985 ರಿಂದ 1064ರವರೆಗೆ ಇದೇ ಚಂಗಾಳ್ವ ಅರಸರನ್ನು ತಮ್ಮ ಸಾಮಂತರನ್ನಾಗಿ ಮಾಡಿಕೊಳ್ಳುವ ಮೂಲಕ ಕೊಡಗಿನಲ್ಲಿ ಅವರು ತಮ್ಮದೇ ಆದಂತಹ ಪ್ರಭುತ್ವ ಹೊಂದಿರುವ ಮೂಲಕ ಅಧಿಕಾರವನ್ನು ನಡೆಸಿದರು ಎಂದು ತಿಳಿದುಬರುತ್ತದೆ. ಒಟ್ಟಾರೆಯಾಗಿ ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆಗಳಲ್ಲಿನ ಕೆಲವು ಪ್ರದೇಶಗಳನ್ನು ಪ್ರಮುಖರಾದಂತಹ ಗಂಗರು, ಕದಂಬರು, ಚೋಳರು, ಚಾಲುಕ್ಯರು, ಕೊಡಗಿನ ಅರಸರು, ಮೈಸೂರು ಒಡೆಯರು, ವಿಜಯನಗರದ ಅರಸರು. ಹೀಗೆ ಈ ಪ್ರದೇಶವನ್ನು ಇವರೊಟ್ಟಿಗೆ ಚಂಗಾಳ್ವ ಅರಸರು ಸಾಮಂತರಾಗಿ ಹಾಗೂ ಸ್ವತಂತ್ರರಾಗಿಯೂ ಆಳ್ವಿಕೆ ಮಾಡಿರುವುದನ್ನು ಕೂಡ ಪ್ರಸ್ತುತ ಅಧ್ಯಯನದ ಮೂಲಕ ತಳಸ್ಪರ್ಶಿಯಾಗಿಯೇ ಗುರುತಿಸಲಾಗಿರುತ್ತದೆ.

ಪ್ರಸ್ತುತ ಅಧ್ಯಯನದ ಕೇಂದ್ರ ವಿಷಯವೇ ಆಗಿರುವಂತಹ ಚಂಗಾಳ್ವ ಅರಸರ ರಾಜ್ಯವಾಗಿದಂತಹ ಇಂದಿನ ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹುಣಸೂರು ಹಾಗೂ ಪಿರಿಯಾಪಟ್ಟಣ ತಾಲ್ಲೂಕುಗಳು, ಕೊಡಗು ಜಿಲ್ಲೆಯ ಸೋಮವಾರ ಪೇಟೆ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ಮತ್ತು ಚನ್ನರಾಯಪಟ್ಟಣ ತಾಲ್ಲೂಕು ಪ್ರದೇಶವು ಪ್ರಾಚೀನತೆಯ ಪರಂಪರೆಯುಳ್ಳಂತಹ ಚಂಗಾಳ್ವರ ಆಳ್ವಿಕೆಯ ತಾಣವಾಗಿತ್ತು ಎಂಬುದನ್ನು ಸ್ಥೂಲವಾಗಿ ದಾಖಲೀಕರಿಸಲಾಗಿದೆ. ಹಾಗೆಯೇ ಮುಂದಿನ ಅಧ್ಯಾಯಗಳನ್ನು ವಿಂಗಡಿಸಿಕೊಂಡು ಇದೇ ಚಂಗಾಳ್ವರ ರಾಜಕೀಯ ಸಾಧನೆಗಳನ್ನು ವಿಸ್ತೃತವಾಗಿ ಪ್ರಾಥಮಿಕ ಮೂಲವಾಗಿರುವ ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳ ಮಾಹಿತಿಯನ್ನು ಪ್ರಸ್ತುತ ಪಡಿಸಲಾಗಿದೆ.

ಮುಂದುವರೆದಂತೆಯೇ ಚಂಗಾಳ್ವರ ಆಡಳಿತ ಕಾಲದಲ್ಲಿನ ಆರ್ಥಿಕ ಪರಿಸ್ಥಿತಿ, ಅವರ ಧಾರ್ಮಿಕ ನೀತಿ, ಸಾಮಾಜಿಕ ಪರಿಸ್ಥಿತಿ ಹಾಗೂ ಇವರ ಆಳ್ವಿಕೆಯ ಕಾಲಮಾನದಲ್ಲಿ ಅನುಸರಿಸಿ ಆಚರಣೆಗೊಂಡಿರುವ

ಶೈವಧರ್ಮ, ವೈಷ್ಣವಧರ್ಮ, ವೀರಶೈವಧರ್ಮ ಹಾಗೂ ಜೈನಧರ್ಮಗಳಿಗೆ ಸಂಬಂಧಿಸಿದಂತೆ ಮತ್ತು ಅವುಗಳಿಗೆ ಪೂರಕವಾಗಿರುವ ದೇವಾಲಯಗಳಲ್ಲಿನ ಕಲಾ ಮತ್ತು ವಾಸ್ತುಶಿಲ್ಪಗಳ ಸಂಸ್ಕೃತಿಯ ಮಹತ್ವವನ್ನು ಸಾಕ್ಷೀಕರಿಸಲಾಗಿದೆ. ಯಾರು ಅಧಿಕಾರಕ್ಕಾಗಿಯೇ ಆಳ್ವಿಕೆ ನಡೆಸುತ್ತಾರೋ ಅವರು ಅನುಸರಿಸುವ ಧರ್ಮ ಹಾಗೂ ಧಾರ್ಮಿಕ ನಂಬಿಕೆಯನ್ನು ಹೊಂದಿರುತ್ತಾರೆ ಎಂಬುದನ್ನು ಈ ಪ್ರದೇಶದಲ್ಲಿ ಗುರುತಿಸಲಾಗಿದೆ. ಆದ್ದರಿಂದಲೇ ಶೈವಧರ್ಮ, ಜೈನಧರ್ಮ, ವೈಷ್ಣವ ಧರ್ಮಗಳ ಬೆಳವಣಿಗೆಗೆ ಶ್ರಮಿಸಿದ್ದಾರೆ ಹಾಗೂ ಚಂಗಾಳ್ವ ಅರಸರು ಧಾರ್ಮಿಕ ಸೌಹಾರ್ದತೆಯ ನೀತಿಯನ್ನು ಕೂಡ ತಮ್ಮ ಆಡಳಿತದಲ್ಲಿ ಅನುಸರಿಸಿರುವ ಕಾರಣವಾಗಿಯೇ ಯಾವುದೇ ಬಗೆಯ ಧಾರ್ಮಿಕ ಸಂಘರ್ಷಗಳು ನಡೆದಿರುವುದು ಇವರ ಆಳ್ವಿಕೆಯಲ್ಲಿ ಕಂಡುಬರುವುದಿಲ್ಲ ಎಂಬುದು ವಿಶೇಷವಾಗಿದೆ.

ಚಂಗಾಳ್ವ ಅರಸರ ಆಡಳಿತದ ಕಾಲಮಾನದಲ್ಲಿ ಸಾಮಾಜಿಕ ಪರಿಸ್ಥಿತಿಯ ಅನಾವರಣವನ್ನು ಗ್ರಹಿಸಿದಾಗ ಸಾಮಾಜಿಕ ರಚನೆ, ವರ್ಣ ವ್ಯವಸ್ಥೆ, ವಿವಿಧ ಜಾತಿ ಜನಸಮುದಾಯಗಳ ನೆಲೆ–ಹಿನ್ನೆಲೆಯ ಸಂದರ್ಭದಲ್ಲಿ ಶ್ರೇಣೀಕೃತ ವ್ಯವಸ್ಥೆಯ ಉನ್ನತ ಸ್ಥಾನವನ್ನು ಪಡೆದುಕೊಂಡಿರುವಂತಹ ಬ್ರಾಹ್ಮಣರಿಗಾಗಿಯೇ ಪ್ರತ್ಯೇಕವಾದಂತಹ ಅಗ್ರಹಾರಗಳ ಸ್ಥಾಪನೆ, ಅವರು ಜಾರಿಗೆ ತಂದಿರುವಂತಹ ಶಿಕ್ಷಣ ನೀತಿ ಮತ್ತು ಪದ್ಧತಿಯೇ ಆಗಿರುತ್ತದೆ. ಬಹುಮುಖ್ಯವಾಗಿ ಸ್ತ್ರೀಯರ ಸ್ಥಾನಮಾನವು ಹೇಗೆ ಇತ್ತು ಎಂಬುದನ್ನು ಸಾಧರಪಡಿಸಲಾಗಿದೆ. ಹಾಗೆಯೇ ಇವರ ಆಡಳಿತದ ಕಾಲಮಾನದಲ್ಲಿ ನಿರ್ಮಾಣಗೊಂಡಿರುವ ವಿವಿಧ ಧರ್ಮಗಳು ಹಾಗೂ ದೇವತೆಗಳಿಗೆ ಸಂಬಂಧಿಸಿದಂತೆ ಇರುವ ದೇವಾಲಯಗಳು, ಅಲ್ಲಿ ಅನುಸರಿಸಿರುವ ಕಲಾ ಮತ್ತು ಸ್ಮಾರಕಗಳಿಂದ ಮೂಡಿಬಂದಿರುವ ಸಾಂಸ್ಕೃತಿಕ ಪರಂಪರೆಯ ಮಹತ್ವವನ್ನು ಸಂಪೂರ್ಣ ಕ್ಷೇತ್ರಾಧ್ಯಯನ ಮೂಲಕ ಸಂಗ್ರಹಿಸಿರುವ ಪ್ರಾಥಮಿಕ ಮೂಲ ಮಾಹಿತಿಯನ್ನು ಆಧರಿಸಿ ಅಂತಿಮ ಸಂಶೋಧನಾ ಪ್ರಬಂಧವನ್ನು ರಚಿಸಲಾಗಿದೆ. ಹೀಗೆ ಈ ರೀತಿಯಾಗಿ ಚಂಗಾಳ್ವರ ರಾಜಕೀಯ ಸಾಧನೆ ಮತ್ತು ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಿಸಿದಂತೆ ಅನೇಕ ಶಾಸನ ಆಧಾರಗಳು, ಸಾಹಿತ್ಯಿಕ ಆಧಾರಗಳು ಹಾಗೂ ಪ್ರಧಾನವಾಗಿ ಕ್ಷೇತ್ರಾಧ್ಯಯನ ಮೂಲಕ ಅನೇಕ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸುವ ಮೂಲಕ ತನ್ನದೇ ಆದಂತಹ ಸ್ವರೂಪವನ್ನು ಬಹುಮುಖ್ಯವಾಗಿ ಹೊಂದಿರುತ್ತದೆ ಎಂದು ಹೇಳಬಹುದು.

ಚಂಗಾಳ್ವ ಅರಸರ ರಾಜಕೀಯ ಸಾಧನೆಗಳನ್ನು ಅವರ ಪ್ರಾಚೀನತೆಯಿಂದ ಆರಂಭಗೊಂಡು ಅವನತಿಯವರೆವಿಗೂ ಕೂಡ ಪ್ರಸ್ತುತಪಡಿಸಲಾಗಿದೆ. ಅದರಲ್ಲಿ ಚಂಗಾಳ್ವ ಅರಸರು ಕಾಲಾನುಕ್ರಮದಲ್ಲಿ ಕೆಲವು ಕಾಲ ಸಾಮಂತರಾಗಿಯೂ ಹಾಗೂ ಕೆಲವು ಕಾಲ ಸ್ವತಂತ್ರ ಅರಸರಾಗಿಯೂ ಚಂಗಾಳ್ವರ ಅರಸರು

ಹೇಗೆ ಪ್ರಭುತ್ವವನ್ನು ಸ್ಥಾಪನೆ ಮಾಡಿದ್ದಾರೆ ಎಂಬುದನ್ನು ಶಾಸನ ಆಧಾರಗಳು ಹಾಗೂ ಸಾಹಿತ್ಯಿಕ ಆಧಾರಗಳಿಂದಲೂ ದೃಢಪಡಿಸಲಾಗಿದೆ. ಮುಂದುವರೆದಂತೆ ಚಂಗಾಳ್ವ ಅರಸರ ಕಾಲದಲ್ಲಿ ಆರ್ಥಿಕ ಪರಿಸ್ಥಿತಿಯ ದಾಖಲೀಕರಣದಲ್ಲಿ ಇವರು ತಂದಿದ್ದ ಕೃಷಿ ವಿಸ್ತರಣೆ, ನೀರಾವರಿ ಸೌಕರ್ಯಗಳು, ಕೆರೆ – ಕಟ್ಟೆಗಳ ನಿರ್ಮಾಣ, ವ್ಯಾಪಾರ ಹಾಗೂ ವಾಣಿಜ್ಯದ ಬೆಳವಣಿಗೆಯ ಹಾದಿಗಳು, ವ್ಯಾಪಾರ ವಹಿವಾಟಿನ ಕೇಂದ್ರಗಳ ಸ್ಥಾಪನೆ ಅವುಗಳ ನಿರ್ವಹಣೆ ಹಾಗೂ ನಾಣ್ಯ ಪದ್ಧತಿಯನ್ನು ಪ್ರಸ್ತಾಪಿಸಲಾಗಿದೆ. ಇವರ ಕಾಲದ ಧಾರ್ಮಿಕ ನೀತಿಯಲ್ಲಿ ಕರ್ನಾಟಕ ಹಾಗೂ ಚಂಗಾಳ್ವರ ತಾಣದಲ್ಲಿ ಪ್ರಬಲ ರಾಜಮನೆತನಗಳು ಆಳ್ವಿಕೆ ಮಾಡಿರುವುದನ್ನು ಚರಿತ್ರೆಯ ಪುಟಗಳಲ್ಲಿ ಶಾಶ್ವತವಾಗಿ ದಾಖಲಾಗಿದೆ.

ಕೊಡಗು

ಕೊಡಗು ಪ್ರದೇಶವು ಪ್ರಧಾನವಾಗಿ ಪಶ್ಚಿಮ ಘಟ್ಟದ ತಪ್ಪಲಿನ ದಟ್ಟವಾದ ಕಾಡುಗಳಿಂದ ಕೂಡಿದ್ದು ಕರ್ನಾಟಕದಲ್ಲಿ ಅತ್ಯಂತ ಸುಂದರವಾದ ಗಿರಿಧಾಮವಾಗಿದೆ. ಇದು ನೈಋತ್ಯ ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ 4,102 ಚದರ ಕಿಲೋಮೀಟರ್ – 1,584 ಚದರ ಮೈಲಿಯ ಪ್ರದೇಶವನ್ನು ಆವರಿಸಿದೆ. ಕೊಡಗಿನ ಕಾಫಿ ಮತ್ತು ಕೊಡಗಿನ ಯೋಧರು ಎಂದು ಪ್ರಪಂಚದಲ್ಲಿಯೇ ಪ್ರಸಿದ್ಧಿ ಪಡೆದಿದೆ. ಮಡಿಕೇರಿಯು ಕೊಡಗಿನ ಕೇಂದ್ರಸ್ಥಾನವಾಗಿದೆ. ಕೊಡಗು 'ಕೊಡವ' ಭಾಷೆಯನ್ನು ಮಾತನಾಡುವ ಸ್ಥಳೀಯರಿಗೆ ನೆಲೆಯಾಗಿದೆ.

ಕೊಡಗಿನ ಅಧಿಕ ಭೂ ಭಾಗವು ಕೃಷಿಗಾಗಿ ಬಳಸಲಾಗುತ್ತಿದೆ. ಐತಿಹಾಸಿಕವಾಗಿ ಮತ್ತು ವಿಶಿಷ್ಟವಾಗಿ ಭತ್ತದ ಗದ್ದೆಗಳು ಕಣಿವೆ ಪ್ರದೇಶದಲ್ಲಿ ಕಂಡುಬರುತ್ತದೆ. ಕಾಫಿ ಮತ್ತು ಮೆಣಸಿನಗಿಡಗಳು ಸುತ್ತಮುತ್ತಲಿನ ಬೆಟ್ಟಗಳಲ್ಲಿ ಮುಖ್ಯವಾಗಿ ಮಡಿಕೇರಿ ಬಳಿ ಕಂಡುಬರುತ್ತದೆ. ಸಾಮಾನ್ಯವಾಗಿ ಕಂಡುಬರುವಂತಹ ಬೆಳೆ ಕಾಫಿ, ಅದರಲ್ಲೂ ವಿಶೇಷವಾಗಿ 'ರೋಬಸ್ಟಾ' ಕಾಫಿ ಬೆಳೆಯನ್ನು ಹೇರಳವಾಗಿ ಬೆಳೆಯುತ್ತಾರೆ. ಇದು ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್‌ಗಿರಿಯ ಅನಂತರ ಭಾರತದ ಎರಡನೇ ಕಾಫಿ ಉತ್ಪಾದನಾ ಪ್ರದೇಶವಾಗಿದೆ. ಇದರಿಂದ ಕೊಡಗು ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿನ ಶ್ರೀಮಂತ ಜಿಲ್ಲೆಗಳಲ್ಲಿ ಒಂದಾಗಿ ಬೆಳೆದಿದೆ. ಕೊಡಗು ಪ್ರದೇಶವು ವನ್ಯಜೀವಿ ಸಂಪನ್ಮೂಲಗಳಿಂದ ಸಮೃದ್ಧವೆಂದು ಪರಿಗಣಿಸಲಾಗಿದೆ. ಮೂರು ವನ್ಯಜೀವಿ ಅಭಯಾರಣ್ಯಗಳು ಮತ್ತು ಒಂದು ರಾಷ್ಟ್ರೀಯ ಉದ್ಯಾನವನವನ್ನು ಹೊಂದಿದೆ. ಬ್ರಹ್ಮಗಿರಿ, ತಲಕಾವೇರಿ ಮತ್ತು ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯಗಳು ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಅಥವಾ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನವೆಂದೂ ಕರೆಯಲಾಗುತ್ತದೆ.

ಕೊಡಗು ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರಿನಲ್ಲಿದೆ. ಜಿಲ್ಲೆಯು ವಾಯುವ್ಯಕ್ಕೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರಕ್ಕೆ ಹಾಸನ ಜಿಲ್ಲೆ, ಪೂರ್ವಕ್ಕೆ ಮೈಸೂರು ಜಿಲ್ಲೆ, ನೈರುತ್ಯಕ್ಕೆ ಕೇರಳ ರಾಜ್ಯದ ಕಣ್ಣೂರು ಜಿಲ್ಲೆ ಮತ್ತು ದಕ್ಷಿಣಕ್ಕೆ ಇದೇ ಕೇರಳದ ವಯನಾಡ್ ಜಿಲ್ಲೆಗಳೊಂದಿಗೆ ಗಡಿಯನ್ನು ಹೊಂದಿದೆ. ಇದು ಸಮುದ್ರ ಮಟ್ಟಕ್ಕಿಂತ 900 ಮೀಟರ್ ಅಂದರೆ, ಸರಿಸುಮಾರು 3,000 ಅಡಿಯ ಎತ್ತರದಲ್ಲಿದೆ. ಜಿಲ್ಲೆಯ ಅತ್ಯುನ್ನತ ಶಿಖರ 'ತಡಿಯಾಂಡಮೋಲ್' 1,715 ಮೀಟರ್ ಅಂದರೆ 5,740 ಅಡಿ ಎತ್ತರದಲ್ಲಿದೆ. ಎರಡನೇ ಅತಿ ಎತ್ತರದ ಶಿಖರ 'ಪುಷ್ಪಗಿರಿ'ಯು 1,715 ಮೀಟರ್ ಅಂದರೆ 5,740 ಅಡಿ ಎತ್ತರದಲ್ಲಿದೆ.

ಕೊಡಗು ಜಿಲ್ಲೆಯ ಮುಖ್ಯ ನದಿ ಕಾವೇರಿ ಇದು ಪಶ್ಚಿಮ ಘಟ್ಟಗಳ ಪೂರ್ವ ಭಾಗದಲ್ಲಿರುವ ತಲಾ ಕಾವೇರಿಯಲ್ಲಿ ಹುಟ್ಟಿ, ಅದರ ಉಪನದಿಗಳೊಂದಿಗೆ ಜಿಲ್ಲೆಯ ಅಧಿಕ ಭಾಗವನ್ನು ಆವರಿಸಿದೆ. ಜುಲೈ ಮತ್ತು ಆಗಸ್ಟ್‌ನಲ್ಲಿ ಮಳೆಯು ಹೆಚ್ಚು ತೀವ್ರವಾಗಿರುತ್ತದೆ ಮತ್ತು ನವೆಂಬರ್‌ನಲ್ಲಿ ಹೆಚ್ಚಾಗಿ ಮಳೆಯಾಗುತ್ತದೆ. ವಾರ್ಷಿಕ ಮಳೆ ಕೆಲವು ಪ್ರದೇಶಗಳಲ್ಲಿ 4,000 ಮಿಲಿಮೀಟರ್‌ಗಳನ್ನು ಅಂದರೆ 160 ಇಂಚುಗಳು ಮೀರಬಹುದು. ಕೊಡಗು ಪ್ರದೇಶದಲ್ಲಿ ವಿರಾಜಪೇಟೆ, ಕುಶಾಲನಗರ, ಸೋಮವಾರಪೇಟೆ ಮತ್ತು ಗೋಣಿಕೊಪ್ಪಗಳು ಕೂಡ ಸೇರಿವೆ. ಈ ಜಿಲ್ಲೆಯನ್ನು ಮೂರು ಆಡಳಿತಾತ್ಮಕ ತಾಲೂಕುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ; ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರಪೇಟೆ, ಇವು ಕೂಡ ಚಂಗಾಳ್ವರ ಆಡಳಿತದ ಪ್ರದೇಶದಲ್ಲಿ ಪ್ರಮುಖವಾಗಿರುತ್ತವೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಸೋಮವಾರಪೇಟೆ

ಸೋಮವಾರಪೇಟೆ ಪ್ರದೇಶವೂ ಕೊಡಗು ಜಿಲ್ಲೆಯ ಒಂದು ತಾಲ್ಲೂಕಾಗಿದೆ. ಇದು ಕೊಡಗು ಜಿಲ್ಲೆಯ ಈಶಾನ್ಯಭಾಗದಲ್ಲಿದ್ದು, ಎತ್ತರದ ದೃಷ್ಟಿಯಿಂದ ಕರ್ನಾಟಕದ 2ನೇ ಅತಿ ಎತ್ತರದ ಪ್ರದೇಶವಾಗಿದೆ. ಸೋಮವಾರಪೇಟೆಯ ಪ್ರದೇಶದಲ್ಲಿ ಕನ್ನಡ, ತುಳು, ಅರೆ ಭಾಷೆ, ಕೊಡವ ತಕ್ಕ್, ಬ್ಯಾರಿ ಭಾಷೆ, ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಜನರು ಮಾತನಾಡುತ್ತಾರೆ ಎಂಬುದು ಕ್ಷೇತ್ರಾಧ್ಯಯನದಿಂದ ತಿಳಿದುಬಂದಿದೆ. ಮಲೆ ಮಲ್ಲೇಶ್ವರ ಬೆಟ್ಟವು ಇದೇ ಸೋಮವಾರಪೇಟೆಯಿಂದ 13ಕಿ.ಮೀ. ಮತ್ತು ಶನಿವಾರಸಂತೆಯಿಂದ 7 ಕಿಮೀ ದೂರದಲ್ಲಿದೆ. ಇಲ್ಲಿನ ಧಾರ್ಮಿಕತೆಯ ದೃಷ್ಟಿಯಿಂದಲೂ ಕೂಡ ಪೂಜೆಯನ್ನು ನಿಯಮಿತವಾಗಿ ನಡೆಸಲಾಗುತ್ತದೆ. ಪ್ರತಿ ವರ್ಷ ಮಹಾಶಿವರಾತ್ರಿಯ ದಿನದಂದು ಭವ್ಯವಾದ ಆಚರಣೆಯನ್ನು ನಡೆಸಲಾಗುತ್ತದೆ. ಕೋಟೆಬೆಟ್ಟ 'ತಡಿಯಾಂಡಮೋಳ್' ಅನಂತರದಲ್ಲಿ ಕುಮಾರ ಪರ್ವತವು ಕೂರ್ಗ್‌ನಲ್ಲಿ ಮೂರನೇ ಅತಿ ಎತ್ತರದ ಶಿಖರವಾಗಿದೆ. ಕೋಟೆಬೆಟ್ಟ ಎಂದರೆ ಕೋಟೆಯಂತಹ ನೋಟದಿಂದಾಗಿ 'ಕೋಟೆ

ಬೆಟ್ಟ' ಎಂದರ್ಥ. ಇದು ಸಮುದ್ರ ಮಟ್ಟದಿಂದ ಸುಮಾರು ಎತ್ತರ 1620 ಮೀಟರ್ ಅಂದರೆ 5313 ಅಡಿ. ಇದು ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ನಡುವಿನ ಗಡಿಯ ಸಮೀಪದಲ್ಲಿದೆ. ಟ್ರೆಕ್ ಪ್ರಾರಂಭವಾಗುವ ಸ್ಥಳವು ಹಟ್ಟಿಹೊಳೆ ಎಂಬ ಸೇತುವೆಯ ಸಮೀಪವಿರುವ ಜಂಕ್ಷನ್ ಆಗಿದೆ. ಈ ಶಿಖರವು ಹಟ್ಟಿಹೊಳೆಯಿಂದ 10 ಕಿ.ಮೀ. ದೂರದಲ್ಲಿದ್ದು ಕೋಟೆಬೆಟ್ಟದ ಬುಡದಲ್ಲಿ ಶಿವನ ದೇವಾಲಯವಿದೆ.

ಮಕ್ಕಳಗುಡಿ ಬೆಟ್ಟವು ಸೋಮವಾರಪೇಟೆ ಮತ್ತು ಮಡಿಕೇರಿ ರಸ್ತೆಯ ನಡುವೆ ಕಿರಗಂದೂರಿನಿಂದ 10 ಕಿ.ಮೀ ದೂರದಲ್ಲಿದೆ. ಭತ್ತದ ಗದ್ದೆಗಳು, ಅರಣ್ಯ ಮತ್ತು ಹಾರಂಗಿ ಜಲಾಶಯದ ನೀರಿನ ನೋಟವಿದೆ. ದುಬಾರೆ ಆನೆ ಶಿಬಿರವೂ ಕೂಡ ಇದೇ ಪ್ರದೇಶದಲ್ಲಿನ ಕಾವೇರಿ ನದಿಯ ದಡದಲ್ಲಿರುವ ಇದು ಕೂರ್ಗ್‌ನ ಅತ್ಯಂತ ಆಸಕ್ತಿದಾಯಕ ಸ್ಥಳಗಳಲ್ಲಿ ಒಂದಾಗಿದೆ. ಇಲ್ಲಿ ಜನರು ಸ್ನಾನವನ್ನು ಮಾಡಬಹುದು ಮತ್ತು ಆನೆಗಳಿಗೆ ಆಹಾರವನ್ನು ನೀಡಬಹುದು ಹಾಗೂ ಆನೆಗಳ ಮೇಲೆ ಸವಾರಿ ಮಾಡಬಹುದು ಮತ್ತು ಗೌರ್, ಮೊಸಳೆಗಳು, ಸೋಮಾರಿ ಕರಡಿಗಳು ಮತ್ತು ಕಾಡು ಜೀವಿಗಳು ಮತ್ತು ಹಚ್ಚ ಹಸಿರಿನ ಪ್ರದೇಶಗಳನ್ನು ನೋಡಬಹುದು. ಮಲ್ಲಳ್ಳಿ ಜಲಪಾತವು ಮಲ್ಲಳ್ಳಿ ಅಬ್ಬಿ ಅಥವಾ ಕುಮಾರಧಾರಾ ಜಲಪಾತವು ಕೂರ್ಗ್‌ನಲ್ಲಿರುವ ಅತಿ ಎತ್ತರದ ಜಲಪಾತಗಳಲ್ಲಿ ಒಂದಾಗಿದೆ. ಇಲ್ಲಿ ಕುಮಾರಧಾರಾ ನದಿಯು 200 ಅಡಿ ಕೆಳಗೆ ದುಮುಕುತ್ತದೆ. ಸೋಮವಾರಪೇಟೆಯಿಂದ 25 ಕಿಮೀ. ದೂರದಲ್ಲಿರುವ ಪುಷ್ಪಗಿರಿ ಬೆಟ್ಟ ಮತ್ತು ಶ್ರೇಣಿಗಳ ತಪ್ಪಲಿನಲ್ಲಿ ನೆಲೆಗೊಂಡಿರುವ ಇತರ ಮಂಜಿನ ಜಲಪಾತಗಳು ಹೊಳೆಯ ಉದ್ದಕ್ಕೂ ಹರಡಿಕೊಂಡಿವೆ. ಮಥನಹೈಲ್, ಸೋಮವಾರಪೇಟೆ, ನೈರ್ಮಲ್ಯ ರಸ್ತೆಯಲ್ಲಿರುವ 'ಬ್ಯೂಟಿ ಸ್ಪಾಟ್' 'ಮೌಂಟೇನ್ ಮಿಸ್ಟ್ ಕಾಫಿ ವ್ಯಾಲಿ' ಕಂಡುಬರುತ್ತದೆ.

ಸೋಮವಾರಪೇಟೆಯ ತಾಲ್ಲೂಕಿನ ಇತರ ಆಕರ್ಷಣೆಗಳು ಎಂದರೆ ಕುಶಾಲನಗರ, ಒಂದು ಜನಪ್ರಿಯ ಪ್ರವಾಸಿ ತಾಣವಾಗಿದೆ. ದಕ್ಷಿಣದಲ್ಲಿ ಮೈಸೂರು ಮತ್ತು ಮಡಿಕೇರಿ ರಸ್ತೆಯ ಉದ್ದಕ್ಕೂ ಹರಡಿಕೊಂಡಿದೆ. ಬೈಲಕುಪ್ಪೆ ಟಿಬೆಟಿಯನ್ ವಸಾಹತು ಈ ಪಟ್ಟಣದ ಸಮೀಪದಲ್ಲಿದೆ. ಹಾರಂಗಿ ಜಲಾಶಯ, ನೇತಾಡುವ ಕಣಿವೆ, ಕಾವೇರಿ ನಿಸರ್ಗಧಾಮ, ದುಬಾರೆ ಆನೆ ಶಿಬಿರ, ಚಿಕ್ಲಿಹೊಳೆ ಜಲಾಶಯ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳು ಪ್ರಮುಖವಾಗಿ ಕಂಡುಬರುತ್ತವೆ. ಸೋಮವಾರಪೇಟೆಯಿಂದ ಸುಮಾರು 18 ಕಿ.ಮೀ. ದೂರದಲ್ಲಿರುವ ಮಲ್ಲಳ್ಳಿಯ ಬಳಿ ಮಲ್ಲಳ್ಳಿ ಜಲಪಾತವಿದೆ. ಇದರೊಟ್ಟಿಗೆ ಕುಮಾರ ಪರ್ವತ ಚಾರಣವಿದೆ. ಸೋಮವಾರಪೇಟೆಯು ಕೊಡಗು ಜಿಲ್ಲೆಯ ಪ್ರಮುಖ ಆಕರ್ಷಣೆಯ ಪ್ರವಾಸಿ ತಾಣಗಳಿಗೆ ಉತ್ತಮ ಸಂಪರ್ಕ ಹೊಂದಿದೆ ಎಂದು ತಿಳಿದುಬರುತ್ತದೆ.

ಅರಕಲಗೂಡು

ಅರಕಲಗೂಡು ಹಾಸನ ಜಿಲ್ಲೆಯ ತಾಲ್ಲೂಕುಗಳಲ್ಲಿಯೇ ಒಂದು ಪ್ರಮುಖವಾದ ತಾಲ್ಲೂಕು ಕೇಂದ್ರವಾಗಿದೆ. ಇದು ಹಾಸನ ತಾಲ್ಲೂಕು, ಆಲೂರು ತಾಲ್ಲೂಕು ಹಾಗೂ ಹೊಳೇನರಸೀಪುರ ತಾಲ್ಲೂಕುಗಳನ್ನು ಹಾಗೆಯೇ ಹತ್ತಿರದ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕನ್ನು ಮತ್ತು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕುನಿಂದ ಸುತ್ತುವರೆದಿದೆ. ಈ ಅರಕಲಗೂಡು ಪ್ರದೇಶವು ಅರೆಮಲೆನಾಡು ಪ್ರದೇಶವಾಗಿದೆ. ಇದು ಹೆಸರಾಂತಹ ಸಾಹಿತಿಯಾಗಿರುವ ಅ.ನ.ಕೃ. ಅವರು ಹುಟ್ಟಿದ ಸ್ಥಳವಾಗಿದೆ. ಮತ್ತು ಕಾವೇರಿ ನದಿಯ ತೀರದಲ್ಲಿರುವ ರಾಮನಾಥಪುರ ಗ್ರಾಮದಲ್ಲಿರುವ ಸುಬ್ರಮಣ್ಯ ದೇವಸ್ಥಾನವು ಹೆಚ್ಚು ಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾಗಿದೆ. ಈ ಪ್ರದೇಶದಲ್ಲಿ ಭತ್ತ, ತೆಂಗು, ಅಡಿಕೆ, ತಂಬಾಕು, ಆಲೂಗಡ್ಡೆ ಪ್ರಮುಖ ಬೆಳೆಗಳಾಗಿರುತ್ತವೆ. ಮುಂದುವರೆಯದ ಮತ್ತು ಹಿಂದುಳಿಯದ ಪ್ರದೇಶ ಇದಾಗಿದೆ ಎನ್ನಬಹುದು. ಈ ಪ್ರದೇಶಕ್ಕೆ ಅರಕಲಗೂಡು ಎಂಬಂತಹ ಈ ಹೆಸರು ಬರಲು ಗೌತಮ ಮಹರ್ಷಿ ಕಾರಣ ಎಂದು ಹೇಳಲಾಗುತ್ತದೆ. ಏಕೆಂದರೆ, ಈ ಹಿಂದೆ ಗೌತಮ ಋಷಿಯು ಸೂರ್ಯ ದೇವರನ್ನು ಪೂಜಿಸಲು ಅರ್ಕೇಶ್ವರ ಪ್ರತಿಮೆಯನ್ನು ಈ ಊರಿನಲ್ಲಿ ಸ್ಥಾಪಿಸಿದ್ದರು. ಇದರ ನಿಜವಾದ ಹೆಸರು ಅರ್ಕಪುರಿ ಎಂದಿತ್ತು. ಅನಂತರ ಇದು ಅರಕಲಗೂಡು ಎಂದು ಬದಲಾಗಿದೆ ಎನ್ನಲಾಗುತ್ತದೆ. ಅರಕಲಗೂಡನ್ನು ಐಗೂರಿನ ಪಾಳೆಯಗಾರ ಕೃಷ್ಣಪ್ಪ ನಾಯಕನು ಕ್ರಿ.ಶ.1268ರಲ್ಲಿ ಬೆಳಕಿಗೆ ತಂದನು ಎಂಬುದು ಚರಿತ್ರೆಯಲ್ಲಿ ದಾಖಲಾಗಿದೆ. ಅರಕಲಗೂಡು ತಾಲ್ಲೂಕು ಪ್ರದೇಶದಲ್ಲಿನ ರಾಮನಾಥಪುರ ಗ್ರಾಮವು ಸುಬ್ರಹ್ಮಣ್ಯ ಸ್ವಾಮಿಯ ಹಾಗೂ ಹೊಯ್ಸಳರ ಕಾಲದ ರಾಮೇಶ್ವರ ದೇವಸ್ಥಾನ ಹೊಂದಿದ್ದು, ಇದು ದಕ್ಷಿಣ ಕಾಶಿ ಎಂದೂ ಕೂಡ ಹೆಚ್ಚು ಪ್ರಸಿದ್ಧವಾಗಿದೆ.

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ದೊಡ್ಡಮ್ಮ ತಾಯಿಯ ದೇವಾಲಯವಿದೆ. ಅರಕಲಗೂಡಿಗೆ ಹೊಂದಿಕೊಂಡಂತೆಯೇ ಇರುವ ಗೋರೂರಿನಲ್ಲಿ ಹೇಮಾವತಿ ನದಿಗೆ ಅಣೆಕಟ್ಟು ನಿರ್ಮಿಸಲಾಗಿದ್ದು ಇದು ನೀರಾವರಿಗೆ ಇಂಬು ನೀಡಲಾಗಿದೆ. ಕೊಣನೂರಿನಲ್ಲಿರುವ ತೂಗು ಸೇತುವೆ ಹಾಸನ ಜಿಲ್ಲೆಯ ರಾಮನಾಥಪುರದಿಂದ ಐದು ಕಿ.ಮೀ ದೂರದಲ್ಲಿದೆ. ಕೊಣನೂರಿನಿಂದ ಕಟ್ಟೇಪುರ ಗ್ರಾಮಕ್ಕೆ ಜನರು ಸುಲಭವಾಗಿ ಸಂಚರಿಸಲು ಅನುಕೂಲವಾಗುವಂತೆ ಕಾವೇರಿ ನದಿಗೆ ಅಡ್ಡಲಾಗಿ ಇದನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಐತಿಹಾಸಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿರುವಂತಹ ಅನೇಕ ದೇವಾಲಯಗಳು ಈ ಗ್ರಾಮದಲ್ಲಿದ್ದು ಅನೇಕ ಪುರಾತತ್ವಶಾಸ್ತ್ರಜ್ಞರು ಮತ್ತು ಅಧ್ಯಯನಕಾರರು ಸಂಶೋಧಿಸಿರುವಂತಹ ದಾಖಲೆಗಳು ಕಂಡುಬರುತ್ತದೆ. ಅರಕಲಗೂಡು ತಾಲ್ಲೂಕು ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಒಂದಾಗಿದೆ. ಇದು ಹಾಸನದಿಂದ 30 ಕಿಮೀ,

ಮಂಗಳೂರಿನಿಂದ 181 ಕಿಮೀ ಹಾಗೂ ಬೆಂಗಳೂರಿನಿಂದ 195 ಕಿಮೀ ದೂರದಲ್ಲಿದೆ. ಹೇಮಾವತಿ ನದಿಯು ತಾಲ್ಲೂಕಿನ ಸಂಪೂರ್ಣ ಉತ್ತರದ ಗಡಿಯನ್ನು ರೂಪಿಸುತ್ತದೆ. ಕಾವೇರಿ ನದಿಯು ದಕ್ಷಿಣದ ಒಂದು ಭಾಗದಲ್ಲಿ ಹರಿಯುತ್ತದೆ.

ಚಾರಿತ್ರಿಕವಾಗಿಯೇ ಗುರುತಿಸಿರುವಂತಹ ಮಹರ್ಷಿಗಳಲ್ಲಿ ಗೌತಮ ಮಹರ್ಷಿಗಳು ಒಬ್ಬರು. ಗೌತಮ ಋಷಿಗಳು ಸೂರ್ಯನನ್ನು ಕುರಿತಂತೆ ಒಂದು ಕಾಲದಲ್ಲಿ ತಪಸ್ಸು ಮಾಡಿದರು. ಹಾಗೆಯೇ ಈ ಸ್ಥಳದಲ್ಲಿ ಒಂದು ಅರ್ಕೇಶ್ವರ ದೇವಸ್ಥಾನದ ಪ್ರಧಾನ ದೇವತೆಯಾದ ಅರ್ಕೇಶ್ವರನ ವಿಗ್ರಹವನ್ನು ಸ್ಥಾಪಿಸಿದರು. ಹಾಗೂ ಇದೇ ಪಟ್ಟಣವನ್ನು ಮೂಲತಃ ಅರ್ಕಪುರಿ ಎಂದು ಕೂಡ ಕರೆಯಲಾಗುತ್ತಿತ್ತು. ಆದ್ದರಿಂದಲೇ, ಅರಕಲಗೂಡು ಎಂಬ ಹೆಸರು ಅಸ್ತಿತ್ವಕ್ಕೆ ಬಂದಿತು ಎಂಬಂತಹ ಒಂದು ಚಾರಿತ್ರಿಕ ಐತಿತ್ಯವೂ ಕೂಡ ಇದೆ. ಇದನ್ನು ಸರಿಸುಮಾರು ಕ್ರಿ.ಶ. 1568ರಲ್ಲಿ ಐಗೂರು (ಬಲಂ) ಮುಖ್ಯಸ್ಥರಲ್ಲಿ ಒಬ್ಬರಾದ ಕೃಷ್ಣಪ್ಪ ನಾಯಕ ಅವರು ಸ್ಥಾಪಿಸಿದರು. ಅನಂತರ ಇದನ್ನು ಸರಿಸುಮಾರು ಕ್ರಿ.ಶ 1647ರಲ್ಲಿ ಮೈಸೂರು ಸಂಸ್ಥಾನವನ್ನು ಆಳಿದಂತಹ ಒಂದನೇಯ ಕಂಠೀರವ ನರಸರಾಜ ಅರಸರು ವಶಪಡಿಸಿಕೊಂಡರು. ಅನಂತರ ಇದನ್ನು ಇಕ್ಕೇರಿಯ ಕೆಳದಿ ಶಿವಪ್ಪ ನಾಯಕ ಹಾಗೂ ಚಿಕ್ಕದೇವರಾಜ ಒಡೆಯರು ಕ್ರಿ.ಶ 1694ರಲ್ಲಿ ವಶಪಡಿಸಿಕೊಂಡರು. ಅರಕಲಗೂಡಿನ ಒಟ್ಟು ಭೌಗೋಳಿಕ ವಿಸ್ತೀರ್ಣ 675 ಕಿಮೀ 2261 ಚದರ ಮೈಲಿ ಇದು ಭೌಗೋಳಿಕ ಪ್ರದೇಶದ ದೃಷ್ಟಿಯಿಂದ ಜಿಲ್ಲೆಯಲ್ಲಿ ಆರನೇ ಸ್ಥಾನವನ್ನು ಪಡೆದುಕೊಂಡಿದೆ. ನೀರಾವರಿ ಪದ್ಧತಿಯಲ್ಲಿ ಭತ್ತ, ಕಬ್ಬು, ತೆಂಗು, ಆಲೂಗೆಡ್ಡೆ, ತರಕಾರಿಗಳು ಮತ್ತು ತೋಟದ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದೆ. ಮಳೆಯಾಶ್ರಿತ ಪ್ರದೇಶದಲ್ಲಿ ರಾಗಿ, ದ್ವಿದಳ ಧಾನ್ಯಗಳು, ನೆಲಗಡಲೆ, ಆಲೂಗಡ್ಡೆ ಮತ್ತು ಜೋಳವನ್ನು ಬೆಳೆಯಲು ಸೂಕ್ತವಾಗಿದೆ.

ಕರ್ನಾಟಕ ರಾಜ್ಯದ ಜೀವಜಲಧಾರೆಯೇ ಆಗಿರುವಂತಹ ಕಾವೇರಿ ನದಿಯು ಅರಕಲಗೂಡಿನ ದಕ್ಷಿಣದ ಗ್ರಾಮವಾದ ಕೊಡವಿನ ಹೊಸಹಳ್ಳಿಯಲ್ಲಿ ಪ್ರವೇಶಿಸುತ್ತದೆ. ಇದು ಸರಿಸುಮಾರು 24 ಕಿಮೀ. ಭಾಗದಲ್ಲಿ ಮಾತ್ರ ಹರಿಯುತ್ತದೆ. ಮೈಸೂರು ಜಿಲ್ಲೆ ಹಾಗೂ ಅರಕಲಗೂಡಿನಲ್ಲಿ ಈ ನದಿಗೆ ಅಡ್ಡಲಾಗಿ ಕೃಷ್ಣರಾಜಕಟ್ಟೆ ಎಂಬ ಅಣೆಕಟ್ಟೆಯೊಂದನ್ನು ಕೂಡ ನಿರ್ಮಿಸಲಾಗಿದ್ದು, ಇದರಿಂದ ಎರಡು ನಾಲೆಗಳು ಕಟ್ಟೇಪುರ ಕೆನಲ್ ಮತ್ತು ರಾಮನಾಥಪುರ ಗ್ರಾಮದ ಕೆನಲ್ ಕ್ರಮವಾಗಿ ಸುಮಾರು 24 ಕಿಲೋಮೀಟರ್ ಹಾಗೂ 30 ಕಿಲೋಮೀಟರ್ ಉದ್ದಕ್ಕೆ ಟೇಕ್ ಆಫ್ ಆಗುತ್ತವೆ. ಕಟ್ಟೇಪುರ ವಾಹಿನಿಯು ರುದ್ರಪಟ್ಟಣವನ್ನು ದಾಟಿ ದಕ್ಷಿಣ ದಂಡೆಯಲ್ಲಿ ಸಾಗುತ್ತದೆ. ಹಾಗೆಯೇ ರಾಮನಾಥಪುರ ಕೆನಲ್ ಉತ್ತರ ದಂಡೆಯ ಉದ್ದಕ್ಕೂ ಕೊಣ್ಣನೂರು ಮತ್ತು ರಾಮನಾಥಪುರದಿಂದ ಬಸವಾಪಟ್ಟಣಕ್ಕೆ ಹಾದುಹೋಗುತ್ತದೆ. ಹೇಮಾವತಿ ನದಿಯು

ಅರಕಲಗೂಡು ಹಾಗೂ ಹಾಸನ ತಾಲೂಕುಗಳನ್ನು ವಿಭಜಿಸುತ್ತದೆ. ನದಿಯು ಪಶ್ಚಿಮ ಭಾಗದಲ್ಲಿ ಹೊನ್ನತಪುರವನ್ನು ಪ್ರವೇಶಿಸುತ್ತದೆ. ಪೂರ್ವಕ್ಕೆ ಹರಿದು ಹೊಳೆನರಸೀಪುರವನ್ನು ಪ್ರವೇಶಿಸುತ್ತದೆ. ಈ ತಾಲ್ಲೂಕಿನಲ್ಲಿ ನೈಋುತ್ಯ ಮಾನ್ಸೂನ್‌ನಿಂದ ಮಳೆಯಾಗುತ್ತದೆ. ಇದು ಸಮುದ್ರ ಮಟ್ಟದಿಂದ ಸುಮಾರು 3,085 ಅಡಿ ಅಂದರೆ 940 ಮೀ ಎತ್ತರದಲ್ಲಿದೆ. ತಾಲ್ಲೂಕಿನ ಮಧ್ಯ ಭಾಗವು ಮಲೆನಾಡು ಪ್ರದೇಶ ಹಾಗೂ ಆಗ್ನೇಯ ಭಾಗಗಳು ದಕ್ಷಿಣ ಮೈದಾನ ಪ್ರದೇಶವನ್ನು ಹೊಂದಿದೆ. ಕೊಣನೂರು ದೊಡ್ಡ ಗ್ರಾಮ ಬಸವಾಪಟ್ಟಣ ಅರಕಲಗೂಡು ತಾಲೂಕಿನ ಇತರ ಗ್ರಾಮಗಳಲ್ಲಿ ಒಂದಾಗಿದ್ದು, ಇದರಲ್ಲಿ ಲಕ್ಷ್ಮೀಕಾಂತಸ್ವಾಮಿ ದೇವಸ್ಥಾನವಿದ್ದು, ರಾಮನಾಥಪುರ ಗ್ರಾಮದಲ್ಲಿನ ದೇವಸ್ಥಾನಗಳು ತಾಲೂಕಿನಲ್ಲಿ ಹೆಚ್ಚು ಪ್ರಸಿದ್ಧಿ ಪಡೆದಿವೆ. ರಾಮನಾಥಪುರ ದೇವಸ್ಥಾನಗಳಲ್ಲಿ ಪ್ರತಿ ವರ್ಷ ಒಂದು ತಿಂಗಳ ಜಾತ್ರೆಯನ್ನು ಇಲ್ಲಿ ಆಚರಿಸಲಾಗುವುದು ಎಂದು ಕ್ಷೇತ್ರಾಧ್ಯಯನದಿಂದ ತಿಳಿದುಬರುತ್ತದೆ.

ಚನ್ನರಾಯಪಟ್ಟಣ

ಚನ್ನರಾಯಪಟ್ಟಣ ತಾಲ್ಲೂಕು ಹಾಸನ ಜಿಲ್ಲೆಯ ತಾಲ್ಲೂಕುಗಳಲ್ಲಿಯೇ ಪ್ರಮುಖವಾದ ತಾಲ್ಲೂಕು ಕೇಂದ್ರವಾಗಿದೆ. ಕರ್ನಾಟಕ ರಾಜಧಾನಿ ಆಗಿರುವ ಬೆಂಗಳೂರಿನಿಂದ 147 ಕಿ.ಮೀ. ದೂರದಲ್ಲಿದೆ. ಇದಕ್ಕೆ ಕೊಳತ್ತೂರು/ಅಮೃತಪುರ ಎಂಬ ಹೆಸರುಗಳಿವೆ. ಈ ನಗರದ ಹೆಸರು ಚೆನ್ನಿಗರಾಯಪಟ್ಟಣ, ಈ ನಗರವನ್ನು ಆಳುತಿದ್ದ ರಾಜನ ಹೆಸರಿನಿಂದ ಬಂದಿರುತ್ತದೆ. ಇದೇ ಚನ್ನರಾಯಪಟ್ಟಣ ತಾಲ್ಲೂಕು ಆರು ಹೋಬಳಿಗಳನ್ನು ಹೊಂದಿದ್ದು ಅವುಗಳೆಂದರೆ 1. ನುಗ್ಗೇಹಳ್ಳಿ 2. ಹಿರಿಸಾವೆ 3. ಬಾಗೂರು 4. ಶ್ರವಣಬೆಳಗೊಳ, 5. ದಂಡಿಗನಹಳ್ಳಿ 6. ಕಸಬಾವಾಗಿ ವಿಭಾಗಿಸಲಾಗಿದೆ. ಚನ್ನರಾಯಪಟ್ಟಣ ತಾಲ್ಲೂಕು ಪ್ರದೇಶವು ಉತ್ತರದಲ್ಲಿ ಅರಸೀಕೆರೆ ತಾಲ್ಲೂಕನ್ನು ಮತ್ತು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕನ್ನು, ಹಾಗೆಯೇ ಪೂರ್ವದಲ್ಲಿ ತುರುವೇಕೆರೆ ತಾಲ್ಲೂಕುಗಳನ್ನು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ದಕ್ಷಿಣದಲ್ಲಿ ಕೃಷ್ಣರಾಜಪೇಟೆ ತಾಲ್ಲೂಕುಗಳನ್ನು, ನೈಋುತ್ಯ ಮತ್ತು ಪಶ್ಚಿಮದಲ್ಲಿ ಇದೇ ಜಿಲ್ಲೆಯ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳು ಸುತ್ತುವರಿದಿವೆ ಎಂಬುದು ಕೂಡ ಕಂಡುಬರುತ್ತದೆ. ಹಾಗೆಯೇ ಇದು ಭೌಗೋಳಿಕ ವಿಸ್ತೀರ್ಣದಲ್ಲಿಯೂ ಕೂಡ ಸರಿಸುಮಾರು 1,042.26 ಚದುರ ಕೀಲೋ ಮೀಟರ್ ಪ್ರದೇಶವನ್ನು ಕೂಡ ಹೊಂದಿರುತ್ತದೆ ಎಂಬುದು ದಾಖಲೆಗಳಿಂದ ತಿಳಿದುಬರುತ್ತದೆ.

ಚನ್ನರಾಯಪಟ್ಟಣ ತಾಲ್ಲೂಕು ಒಂದು ಮುಖ್ಯವಾದ ವ್ಯಾಪಾರಿ ಕೇಂದ್ರವಾಗಿದೆ. ಇಲ್ಲಿ ಮಾರಾಟವಾಗುವ ವಸ್ತುಗಳಲ್ಲಿ ತೆಂಗು ಮತ್ತು ಬೆಲ್ಲ ಮುಖ್ಯವಾದವುಗಳು. ಪ್ರತಿ ಶನಿವಾರ ಇಲ್ಲಿ 'ಸಂತೆ' ನಡೆಯುತ್ತದೆ. ಈ ಸಂತೆಯ ಸುತ್ತಮುತ್ತಲಿನ ಎಲ್ಲಾ ಹಳ್ಳಿ ಮತ್ತು ಸಾಗತವಳ್ಳಿಯಿಂದ ಹೆಚ್ಚು ಜನರು ಸಂತೆಗೆ

ಬಂದು ಮಾರುವ ಮತ್ತು ಕೊಂಡುಕೊಳ್ಳುವ ವ್ಯಾಪಾರ ಮಾಡುತ್ತಾರೆ. ಬಹುಮುಖ್ಯವಾದ ಜಾತ್ರೆ ಸಮಾರಂಭ 7 ದಿನಗಳ ಕಾಲ ನಡೆಯುತ್ತದೆ. ಇಲ್ಲಿಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದು ದೇವರ ಕೃಪೆಗೆ ಪಾತ್ರರಾಗುತ್ತಾರೆ. ಆನೆಕೆರೆಯಮ್ಮ ಮತ್ತು ಕುಂದೂರು ಮಠದ ಮೆಳಿಯಮ್ಮ ದೇವಿಯ ದೇವಸ್ಥಾನ ಇಲ್ಲಿಯ ಬಹು ಮುಖ್ಯವಾದ ದೇವಾಲಯಗಳು ಎಂದು ಹೇಳಬಹುದು.

ಶ್ರವಣಬೆಳಗೊಳವು ಈ ತಾಲ್ಲೂಕಿನ ಅತ್ಯಂತ ಪ್ರಸಿದ್ಧ ಸ್ಥಳ ಆಗಿರುತ್ತದೆ. ಇದು ಜೈನರ ಪ್ರಮುಖ ಯಾತ್ರಸ್ಥಳವೂ ಕೂಡ ಆಗಿರುತ್ತದೆ. ಇದು ತಾಲೂಕು ಕೇಂದ್ರ ಚನ್ನರಾಯಪಟ್ಟಣಕ್ಕೆ 13 ಕಿ.ಮೀ. ದೂರದಲ್ಲಿದೆ. ಶಾಸನಗಳಲ್ಲಿ ಇದನ್ನು ವೆಳಗೊಳ, ದೇವರಬೆಳಗೂಳ, ಶ್ವೇತಸರೊವರ, ಧವಳಸರೋವರ, ಗೋಮ್ಮಟಪುರ ಎಂದು ಕೂಡ ಕರೆಯಲಾಗಿದೆ. ಜೈನಮುನಿ ಭದ್ರಬಾಹುವು ಮತ್ತು ಚಂದ್ರಗುಪ್ತ ಮೌರ್ಯ ಬಂದಿದ್ದರೆಂದು ಹಲವು ಸಾಕ್ಷಿ ಆಧಾರಗಳಿಂದ ತಿಳಿದುಬರುತ್ತದೆ. ಶ್ರವಣಬೆಳಗೊಳವು ಇಂದ್ರಗಿರಿ ಅಥವಾ ವಿಂಧ್ಯಗಿರಿ ಮತ್ತು ಚಂದ್ರಗಿರಿ ಎಂಬ ಎರಡು ಬೆಟ್ಟಗಳನ್ನು ಹೊಂದಿದೆ. ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕ ಇಲ್ಲಿನ ವಿಶೇಷ ಸಂಭ್ರಮಾಚರಣೆಯಾಗಿದೆ. ಹಾಗೆಯೇ ಶ್ರವಣಬೆಳಗೊಳದಲ್ಲಿ ಅನೇಕ ಜೈನ ಬಸದಿಗಳು ಮತ್ತು ಬಹುದೊಡ್ಡದಾದ ಕಳಸವಿದೆ. ಗೊಮ್ಮಟೇಶ್ವರ ಬೃಹತ್ ಮೂರ್ತಿ ಶಿಲ್ಪವಿದೆ. ಚನ್ನರಾಯಪಟ್ಟಣವು ಹಾಸನ ಜಿಲ್ಲೆಯ ಒಂದು ಪ್ರಮುಖ ನಗರವಾಗಿದೆ. ಇದರ ವ್ಯಾಪ್ತಿಯಲ್ಲಿ ಬರುವಂತಹ ಶ್ರವಣಬೆಳಗೊಳವು ಭಾರತದ ಇತಿಹಾಸದಲ್ಲಿ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿದೆ. ಏಕೆಂದರೆ ಈ ಪ್ರದೇಶದಲ್ಲಿ ಸೋದರರೇ ಆಗಿರುವಂತಹ ಭರತ ಮತ್ತು ಬಾಹುಬಲಿ ಅವರುಗಳ ಸಂಕೇತವಾಗಿಯೇ ಎರಡು ಬೆಟ್ಟಗಳಿವೆ. ಆ ಬೆಟ್ಟಗಳನ್ನು ಚಂದ್ರಗಿರಿ ಬೆಟ್ಟ ಮತ್ತು ಇಂದ್ರಗಿರಿ ಬೆಟ್ಟ ಎಂದು ಕೂಡ ಕರೆಯಲಾಗುತ್ತದೆ. ಪ್ರಧಾನವಾಗಿ ಈ ಎಲ್ಲಾ ಅಂಶಗಳನ್ನು ಹೊಂದಿರುವ ಶ್ರವಣಬೆಳಗೊಳವು ದೇಶದಲ್ಲಿಯೇ ಒಂದು ಪ್ರವಾಸಿಗರ ತಾಣವಾಗಿದೆ. ದೇಶ ವಿದೇಶಗಳಿಂದಲೂ ಕೂಡ ಹಲವಾರು ಪ್ರವಾಸಿಗರು ಭೇಟಿ ನೀಡುವ ಪ್ರೇಕ್ಷಣೀಯ ಸ್ಥಳವೇ ಈ ಪ್ರಖ್ಯಾತ ಶ್ರವಣಬೆಳಗೊಳವಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಚೆನ್ನಕೇಶವ ದೇವಸ್ಥಾನ, ಆಂಜನೇಯ ದೇವಸ್ಥಾನ, ತೇಜಿಗೆರೆಯಮ್ಮ ದೇವಸ್ಥಾನ ಹೀಗೆ ಹತ್ತು ಹಲವು ದೇವಾಲಯಗಳನ್ನು ಹೊಂದಿದೆ. ಚನ್ನರಾಯಪಟ್ಟಣ ತಾಲ್ಲೂಕು ಪ್ರದೇಶದಲ್ಲಿ ಕೃಷಿಯು ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಅದರಲ್ಲಿ ಕಬ್ಬು ಮತ್ತು ತೆಂಗು ಪ್ರಮುಖ ವಾಣಿಜ್ಯ ಬೆಳೆಗಳಾಗಿದ್ದರೆ, ಆಹಾರ ಬೆಳೆಗಳಲ್ಲಿ ರಾಗಿ, ಆಲೂಗಡ್ಡೆ, ಸೂರ್ಯಕಾಂತಿ ಮತ್ತು ಭತ್ತ ಸೇರಿವೆ. ತಾಲ್ಲೂಕು ಕ್ರೋಮೈಟ್ ಅಂತಹ ಖನಿಜ ನಿಕ್ಷೇಪಗಳನ್ನು ಹೊಂದಿದೆ ಎಂದು ಹೇಳಬಹುದು.

ಇಂತಹ ಪ್ರಸಿದ್ಧ ಪ್ರದೇಶದಲ್ಲಿಯೂ ಕೂಡ ಚಂಗಾಳ್ವ ಅರಸರು ಸಾಮಂತರಾಗಿ ಹಾಗೂ ಸ್ವಾತಂತ್ರ್ಯರಾಗಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ.

ಅಧ್ಯಯನದ ಸ್ವರೂಪ

ಪ್ರತಿಯೊಂದು ವಿಷಯದಲ್ಲಿಯೂ ಕೂಡ ಒಂದು ಕರಾರುಹೊಕ್ಕಾದ ಮತ್ತು ನಿರ್ದಿಷ್ಟವಾದ ವ್ಯಾಖ್ಯಾವು ಇದ್ದೇ ಇರುತ್ತದೆ. ಅದರಲ್ಲಿನ ವ್ಯಾಪಕವಾದ ಅಧ್ಯಯನ ಕೇಂದ್ರೀಯ ವಸ್ತುವಿಷಯದ ಹಾಗೂ ಬಹುಮುಖ್ಯವಾಗಿ ಅಧ್ಯಯನ ಪ್ರದೇಶದ ಕ್ಷೇತ್ರವನ್ನು ಹೊಂದಿರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯನ್ನು ಆಧಾರವಾಗಿರಿಸಿಕೊಂಡೇ ಪ್ರಸ್ತುತ ಅಧ್ಯಯನದ ಸ್ವರೂಪವನ್ನು ಈ ಮುಂದಿನಂತೆ ರಚಿಸಲಾಗಿದೆ. ಪ್ರಾದೇಶಿಕ ಇತಿಹಾಸ ರಚನೆಯ ಸಂದರ್ಭದಲ್ಲಿ ನಿರ್ದಿಷ್ಟ ಕಾಲ ಘಟ್ಟದ ಆಯಾ ಪ್ರದೇಶದ ಮಾನವ ಚಟುವಟಿಕೆಗಳು, ಸಾಂಸ್ಕೃತಿಕ ಪ್ರತೀಕವಾಗಿ ಆತನಿಂದ ನಿರ್ಮಿತಗೊಂಡ ಸ್ಮಾರಕಗಳು, ದೇವಾಲಯ, ಮಠ, ಕೆರೆ–ಕಾಲುವೆಗಳು ಇತಿಹಾಸ ಕಾಲದಲ್ಲಿ ಮುಂದುವರಿದು ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಚಟುವಟಿಕೆಗಳು ವಿವಿಧ ಸನ್ನಿವೇಶಗಳಲ್ಲಿ ಕಂಡು ಬಂದಿರುತ್ತವೆ. ಇತಿಹಾಸ ಕಾಲದಲ್ಲಿ ವ್ಯಾಪಾರಿ ನೆಲೆಗಳು, ಆಡಳಿತ ನೆಲೆಗಳು, ವಿವಿಧ ಧಾರ್ಮಿಕ ನೆಲೆಗಳು, ಕಂಡು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳ ಕುರಿತಾಗಿ ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳನ್ನು ಬಳಸಿ ಅಧ್ಯಯನ ನಡೆಸಲಾಗಿದೆ.

ಇತ್ತೀಚೆಗೆ ಹೊಸ ಹೊಸ ಆಕರಗಳು, ವೈಜ್ಞಾನಿಕ ವಿಧಾನಗಳು, ದೃಷ್ಟಿಕೋನಗಳು, ವಿಮರ್ಶಾತ್ಮಕ ವಿಶ್ಲೇಷಣೆಗಳು ಚರಿತ್ರಾಕಾರರಿಗೆ ಲಭ್ಯವಾಗಿ ಐತಿಹಾಸಿಕ ಬರವಣಿಗೆಯು ಹಲವು ರೀತಿಯಿಂದ ಪ್ರಗತಿಯನ್ನು ಸಾಧಿಸುತ್ತಿದೆ. ಹಿರಿಯ ಇತಿಹಾಸಕಾರರು ಹಾಗೂ ತರುಣ ಸಂಶೋಧಕರು ಹಲವಾರು ಗ್ರಂಥಗಳು ಮತ್ತು ಲೇಖನಗಳನ್ನು ಬರೆದು ಇತಿಹಾಸದ ರಚನೆಗೆ ಹೊಸ ಆಯಾಮ ಹಾಗೂ ಮೆರುಗನ್ನು ನೀಡುತ್ತಿದ್ದಾರೆ. ಹೀಗೆ ಇತಿಹಾಸದ ರಾಜಕೀಯ ಸಾಧನೆಯ ಹಿನ್ನೆಲೆಯಲ್ಲಿ ಇತಿಹಾಸವನ್ನು ಅಧ್ಯಯನ ಮಾಡುವುದು ಒಂದು ಕ್ರಮವಾದರೆ, ಸಾಂಸ್ಕೃತಿಕ ಕೊಡುಗೆಗಳ ವೈವಿಧ್ಯತೆಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಮತ್ತೊಂದು ಕ್ರಮ. ಇಂತಹ ಅಧ್ಯಯನವನ್ನು ಸಾಮಾನ್ಯವಾಗಿ ಸಂಕೀರ್ಣತೆಯ ಐತಿಹಾಸಿಕ ಅಧ್ಯಯನವೆಂದು ಕರೆಯಲಾಗುತ್ತದೆ. ಇಂತಹ ಅಧ್ಯಯನವನ್ನು ಕೈಗೊಂಡಾಗ ಒಂದು ಪ್ರದೇಶದಲ್ಲಿರುವ ಹಾಗೂ ವಿಶಿಷ್ಟವೆನಿಸಬಹುದಾದ ಸಾಂಸ್ಕೃತಿಕ ಪರಂಪರೆಯ ವೈವಿಧ್ಯತೆಗಳನ್ನು ಗುರುತಿಸಬಹುದಾದ ಸಾಧ್ಯತೆ ಹೆಚ್ಚಾಗಿರುತ್ತದೆ. ಆದುದರಿಂದ ಪ್ರಾದೇಶಿಕ ಮಟ್ಟದಲ್ಲಿ ಆಳವಾದ ಹಾಗೂ ಸಮಗ್ರವಾದ ಅಧ್ಯಯನ ಮತ್ತು

ಸಂಶೋಧನೆ ನಡೆದಷ್ಟು ಭಾರತೀಯ ಸಾಂಸ್ಕೃತಿಕ ಇತಿಹಾಸದ ಸ್ವರೂಪ, ವ್ಯಾಪ್ತಿ ಮತ್ತು ಅರ್ಥಗಳು ಮತ್ತಷ್ಟು ಸ್ಪಷ್ಟವಾಗುತ್ತಾ ಹೋಗುತ್ತವೆ.

ಭಾರತೀಯ ಸಂಸ್ಕೃತಿಯು ವೈವಿಧ್ಯಮಯವಾಗಿರುವುದು ಸಣ್ಣ ಸಣ್ಣ ಘಟಕಗಳು ನೀಡಿರುವ ಸಾಂಸ್ಕೃತಿಕ ಕೊಡೆಗೆಗಳಿಂದ ಸಣ್ಣ ಪುಟ್ಟ ರಾಜಮನೆತನಗಳ ಸಮೂಹವೇ ಭಾರತೀಯ ಸಾಂಸ್ಕೃತಿಕ ಇತಿಹಾಸದ ಪ್ರತೀಕ. ಇಂತಹ ರಾಜಮನೆತನಗಳ ಚರಿತ್ರೆಯೊಂದಿಗೆ ಪ್ರಸಿದ್ಧ ಸ್ಥಳಗಳ, ಐತಿಹಾಸಿಕ ವಿಕಾಸವೂ ಹೆಣೆದುಕೊಂಡಿರುತ್ತದೆ. ಇಂತಹ ಇತಿಹಾಸಕ್ಕೆ ಜಾನಪದ, ಶಿಷ್ಟ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಕಲಾತ್ಮಕ, ಸಾಹಿತ್ಯಾತ್ಮಕ ಮೊದಲಾದ ಸಾಂಸ್ಕೃತಿಕ ಮುಖಗಳಿರುತ್ತವೆ. ಆದುದರಿಂದ ಐತಿಹಾಸಿಕ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ವಿವರವಾಗಿ ಪರಿಶೀಲಿಸಲಾಗಿದೆ. ಇಂತಹ ರಾಜಮನೆತನಗಳ ಇತಿಹಾಸದ ಅಧ್ಯಯನವು ವಿವರವಾಗಿ ನಡೆದಾಗಲೇ ಒಂದು ದೇಶದ ಅಥವಾ ನಾಡಿನ ಸಂಪೂರ್ಣ ಹಾಗೂ ಸಮಗ್ರ ಚರಿತ್ರೆಯನ್ನು ರೂಪಿಸಲು ಸಾಧ್ಯವಾಗುತ್ತದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವನ್ನು ಚಂಗಾಳ್ವ ಅರಸರ ಆಡಳಿತದ ಕಾಲಮಾನವೇ ಆಗಿರುವ ಸುಮಾರು 10ನೇ ಶತಮಾನದಿಂದ 17ನೇ ಶತಮಾನದ ವ್ಯಾಪ್ತಿಯೊಳಗೆ ಬರುವ ಮಾಹಿತಿಯನ್ನು ಚರ್ಚಿಸಿ, ವಿಮರ್ಶಿಸಿ, ವಿಶ್ಲೇಷಿಸಿ, ವಿವರಿಸಿ, ವಿವರಣೆಯನ್ನು ದಾಖಲೀಕರಿಸಲಾಗಿದೆ. ಏಕೆಂದರೆ ಮೈಸೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳ ಕೆಲವು ತಾಲ್ಲೂಕು ಪ್ರದೇಶಗಳಲ್ಲಿ ಸಾಮಂತರಾಗಿ ಹಾಗೂ ಸ್ವತಂತ್ರವಾಗಿ ಆಡಳಿತ ನಡೆಸಿದ **ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ** ಮುಖ್ಯ ವಿಷಯಯವನ್ನು ವಸ್ತುನಿಷ್ಠವಾಗಿ ವಿವರಿಸಲಾಗಿದೆ. ಆದ್ದರಿಂದಲೇ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳು, ಸಾಹಿತ್ಯಿಕ ಆಧಾರಗಳು, ಕ್ಷೇತ್ರಾಧ್ಯಯನದಲ್ಲಿ ಸಂಗ್ರಹಿಸಿರುವ ಮಾಹಿತಿಗಳು ಈ ಪ್ರದೇಶವನ್ನು ಆಳಿದ ಚಂಗಾಳ್ವ ಅರಸರಿಗೆ ಸಂಬಂಧಿಸಿವೆ ಎಂಬುದನ್ನು ಬಹುಸೂಕ್ಷ್ಮವಾಗಿ ಗುರುತಿಸಲಾಗಿದೆ. ಇದೇ ಕೆಲವೊಂದು ಖಾಸಗಿ ಶಾಸನಗಳು ಇರುವುದು ಕೂಡ ಕ್ಷೇತ್ರಾಧ್ಯಯನದಿಂದ ಕಂಡುಬಂದಿರುತ್ತದೆ. ಹಾಗೆಯೇ ಬಹುಮುಖ್ಯವಾಗಿ ಅಧ್ಯಯನದ ಕಾಲವೂ ಸಹ ಹತ್ತು ಹಲವು ರೀತಿಯಲ್ಲಿ ಹೊಸ ಹೊಸ ವಿಚಾರಧಾರೆಗಳನ್ನು ಶೋಧಿಸಲು ಹಾಗೂ ಗುರುತಿಸಲು ಆ ಮೂಲಕ ಅವುಗಳನ್ನು ಬೆಳಕಿಗೆ ತರುವ ಮಹತ್ವದ ಕಾರ್ಯದಲ್ಲಿ ತೊಡಗಿ ಅಧ್ಯಯನವು ತನ್ನ ಅಂತಿಮ ಗುರಿಯನ್ನು ತಲುಪಲಾಗಿದೆ ಎಂದು ಹೇಳಬಹುದು.

ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ದೊರೆಕಿರುವ ಮತ್ತು ಅಧ್ಯಯನಕ್ಕೆ ಯೋಗ್ಯವಾಗಿರುವ ಶಾಸನಗಳು, ವಿವಿಧ ಧರ್ಮಗಳ ದೇವಾಲಯಗಳು, ಜೈನ ಬಸದಿಗಳು, ವೀರಗಲ್ಲುಗಳು, ಮಹಾಸತಿಕಲ್ಲುಗಳು, ಸಾಹಿತ್ಯ ಆಧಾರಗಳು ಪ್ರಧಾನವಾಗಿರುತ್ತವೆ. ಇವುಗಳಿಂದ ಚಂಗಾಳ್ವ ಅರಸರ ಕಾಲಮಾನದಲ್ಲಿ ಸಮಾಜ, ಸಂಸ್ಕೃತಿ, ಪರಂಪರೆ, ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪಗಳು, ಸ್ಮಾರಕಗಳನ್ನು ಕುರಿತಂತೆ ಮಹತ್ವದ ವಿಚಾರಧಾರೆಗಳನ್ನು ಕುರಿತು ತಳಸ್ಪರ್ಶಿಯಾಗಿ ಅಧ್ಯಯನ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು, ಕೊಡಗು ಹಾಗೂ ಹಾಸನ ಜಿಲ್ಲೆಯಲ್ಲಿನ ತಾಲ್ಲೂಕುಗಳ ಕೆಲವು ಪ್ರದೇಶವನ್ನು ಅಧ್ಯಯನದ ವ್ಯಾಪ್ತಿಯಾಗಿ ಬಳಸಿಕೊಳ್ಳಲಾಗಿರುತ್ತದೆ. ಹೀಗೆ ಅಧ್ಯಯನದ ಕ್ಷೇತ್ರ ಹಾಗೂ ಪ್ರದೇಶಕ್ಕೆ ಸಂಬಂಧಿಸಿದಂತೆ ಲಭ್ಯವಾಗಿರುವ ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳು, ಕ್ಷೇತ್ರಾಧ್ಯಯನದಿಂದ ದೊರೆತಿರುವ ಪ್ರಾಥಮಿಕ ಮಾಹಿತಿಯನ್ನು ಆಧರಿಸಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ ಈ ಪ್ರದೇಶವನ್ನು ಆಳಿದ ಚಂಗಾಳ್ವ ಅರಸರು ಸ್ಥಳೀಯ ಸಾಮಂತರೇ ಆಗಿದ್ದರು ಹಾಗೂ ಕೆಲವು ಕಾಲ ಸ್ವಾತಂತ್ರ್ಯರೂ ಆಗಿದ್ದರು ಎಂಬುದು ಚರಿತ್ರೆಯೇ ಹೇಳುತ್ತದೆ. ಆದ್ದರಿಂದಲೆ ಇವರ ರಾಜಮನೆತನದ ಆಡಳಿತದ ಕ್ರಮಗಳನ್ನು ದಾಖಲಿಸುವ ಅನಿವಾರ್ಯ ಮತ್ತು ಅಗತ್ಯತೆಯೂ ಕೂಡ ಕಂಡುಬರುತ್ತದೆ. ಕಾರಣ ಮತ್ತು ಪರಿಣಾಮದಿಂದಾಗಿಯೇ ವಿಸ್ತೃತ ಅಂಶಗಳು ಮತ್ತು ವಿಷಯಗಳನ್ನು ಬಳಸಿಕೊಂಡು ಅಧ್ಯಯನದ ಅಂತಿಮ ಗುರಿಯನ್ನು ತಲುಪಲು ಸಾಧ್ಯವಾಗಿರುತ್ತದೆ.

ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಕೇಂದ್ರೀಯ ವಸ್ತು ವಿಷಯದ ಮಹತ್ವದ ಶೀರ್ಷಿಕೆಯುಳ್ಳ ಪ್ರಸ್ತುತ ಅಧ್ಯಯನದ ಉಪಯೋಗಕ್ಕಾಗಿ ಮತ್ತು ಕ್ರಮಬದ್ಧವಾಗಿ ಏಳು ಪ್ರಧಾನ ಅಧ್ಯಾಯಗಳಾಗಿ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಚಂಗಾಳ್ವ ಅರಸರನ್ನು ಕುರಿತಂತೆ ಚಾರಿತ್ರಿಕ ಅಧ್ಯಯನದ ಸಂಪೂರ್ಣ ಸಾರಾಂಶವನ್ನು ಹೊರಜಗತ್ತಿಗೆ ತರುವಂತಹ ಪ್ರಯತ್ನದ ಫಲಿತಾಂಶವೇ ಇದಾಗಿರುತ್ತದೆ. ಈ ಹಿನ್ನಲೆಯಲ್ಲಿ ಏಳು ಅಧ್ಯಾಯಗಳ ಸಾರಾಂಶವನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ–1 ಪೀಠಿಕೆ – ಪ್ರಸ್ತಾವನೆ, ಚಂಗಾಳ್ವ ರಾಜ್ಯದ ಭೌಗೋಳಿಕ ಹಿನ್ನೆಲೆ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಉದ್ದೇಶ, ಸಂಶೋಧನಾಮಾರ್ಗ, ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆ.

ಅಧ್ಯಾಯ–2 ಚಂಗಾಳ್ವರ ರಾಜಕೀಯ ಸಾಧನೆಗಳು – ಸಾಮಂತ ಪ್ರಭುಗಳಾಗಿ ಮತ್ತು ಸ್ವತಂತ್ರ ಅರಸರಾಗಿ ಚಂಗಾಳ್ವರ ಪ್ರಭುತ್ವದ ಸ್ಥಾಪನೆ.

ಅಧ್ಯಾಯ–3 ಚಂಗಾಳ್ವರ ಕಾಲದ ಆರ್ಥಿಕ ಪರಿಸ್ಥಿತಿ – ಕೃಷಿ ವಿಸ್ತರಣೆ, ನೀರಾವರಿ ಸೌಕರ್ಯ, ಕೆರೆಕಟ್ಟೆಗಳ ನಿಮಾಣ, ವ್ಯಾಪಾರ ವಾಣಿಜ್ಯದ ಬೆಳವಣಿಗೆ, ವ್ಯಾಪಾರ ಕೇಂದ್ರಗಳು, ನಾಣ್ಯಪದ್ಧತಿಗಳು.

ಅಧ್ಯಾಯ–4 ಚಂಗಾಳ್ವರ ಕಾಲದ ಧಾರ್ಮಿಕ ನೀತಿ – ಶೈವಧರ್ಮ, ವೈಷ್ಣವಧರ್ಮ, ಜೈನಧರ್ಮಗಳ ಬೆಳವಣಿಗೆ ಮತ್ತು ಚಂಗಾಳ್ವರ ಧಾರ್ಮಿಕ ಸೌಹಾರ್ದ ನೀತಿ.

ಅಧ್ಯಾಯ–5 ಚಂಗಾಳ್ವರ ಕಾಲದ ಸಾಮಾಜಿಕ ಪರಿಸ್ಥಿತಿ – ಸಾಮಾಜಿಕ ರಚನೆ, ವರ್ಣವ್ಯವಸ್ಥೆ, ವಿವಿಧ ಜಾತಿ ಸಮುದಾಯಗಳು, ಅಗ್ರಹಾರಗಳ ಸ್ಥಾಪನೆ, ಶಿಕ್ಷಣ ಪದ್ಧತಿ, ಸ್ತ್ರೀಯರ ಸ್ಥಾನಮಾನ

ಅಧ್ಯಾಯ–6 ಚಂಗಾಳ್ವರ ಕಾಲದ ದೇವಾಲಯಗಳು ಮತ್ತು ಕಲಾ ಸ್ಮಾರಕಗಳು

ಅಧ್ಯಾಯ–7 ಉಪಸಂಹಾರ

ಅಧ್ಯಾಯ ಒಂದರಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯ ರೂಪದಲ್ಲಿರುವ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಅಧ್ಯಯನದ ಪ್ರಸ್ತಾವನೆ, ಚಂಗಾಳ್ವರ ಅರಸರ ರಾಜ್ಯದ ಭೌಗೋಳಿಕೆ ಹಿನ್ನೆಲೆ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಉದ್ದೇಶ ಮತ್ತು ಸಂಶೋಧನಾ ಮಾರ್ಗ, ಇದುವರೆವಿಗೂ ನಡೆದಿರುವ ಚಾರಿತ್ರಿಕ ಬರವಣಿಗಗಳನ್ನು ಕುರಿತು ಅಧ್ಯಯನವನ್ನು ನಡೆಸಲಾಗಿದೆ. ಸಾಮಂತ ಮತ್ತು ಸ್ವಾತಂತ್ರರಾಗಿ ಆಳ್ವಿಕೆ ಮಾಡಿರುವ ಚಂಗಾಳ್ವ ಅರಸರು ಆಡಳಿತವನ್ನು ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ವಿವರವಾಗಿ ದಾಖಲೀಸಲಾಗಿದೆ. ಈ ಅಂಶಗಳನ್ನು ಹೊಂದಿರುವ ಮೊದಲನೆ ಅಧ್ಯಾಯವು ಒಂದು ಮಾದರಿಯ ಮುಕುಟದಂತಿ ಎಂದು ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು, ಸಾಮಂತ ಪ್ರಭುಗಳಾಗಿ ಮತ್ತು ಸ್ವತಂತ್ರ ಅರಸರಾಗಿ ಚಂಗಾಳ್ವರ ಪ್ರಭುತ್ವದ ಸ್ಥಾಪನೆಯನ್ನು ಕುರಿತು ಚರ್ಚಿಸಲಾಗಿದೆ. ಈ ಪ್ರದೇಶದಲ್ಲಿ ಕಂಡುಬರುವ ಶಾಸನಗಳು, ಚಾರಿತ್ರಿಕ ದಾಖಲೆಗಳು ಹಾಗೂ ಪ್ರಧಾನವಾಗಿ ಕ್ಷೇತ್ರಕಾರ್ಯ ಸಂಧರ್ಭದಲ್ಲಿ ಲಭ್ಯವಾಗಿರುವ ಮೂಲಮಾಹಿತಿಗಳನ್ನು ವಿಸ್ತೃತವಾಗಿ ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸಾಮಂತ ಚಂಗಾಳ್ವರ ಮೂಲವನ್ನು ಶೋಧಿಸಿ ತಳಸ್ಪರ್ಶಿಯವಾಗಿ ತಿಳಿಸಲಾಗಿದೆ. ಮೊದಲ ಚಂಗಾಳ್ವರ ರಾಜ ನನ್ನಿಚಂಗಾಳ್ವ, ಚಂಗಾಳ್ವರು ಮತ್ತು ಚೋಳರ ನಡುವಿನ ಸಂಬಂದ, ಚೋಳರ ಸಾಮಂತರಾಗಿ ಚಂಗಾಳ್ವರು,

ನನ್ನಿಚಂಗಾಳ್ವ ರಾಜೇಂದ್ರ ಚೋಳ, ಮಾಚೆಯರಸ ಚಂಗಾಳ್ವ, ಚಂಗಾಳ್ವ ದೇವ, ಉದಯಾದಿತ್ಯ ದೇವ, ಇಮ್ಮಡಿ ಚಂಗಾಳ್ವರ ಆಡಳಿತವನ್ನು ಕುರಿತು ವಿವರಿಸಲಾಗಿದೆ. ಚಂಗಾಳ್ವರು ಮತ್ತು ಹೊಯ್ಸಳರ ಸಂಬಂಧ, ಚಂಗಾಳ್ವರು ಮತ್ತು ವಿಜಯನಗರದ ಅರಸರು, ಚಂಗಾಳ್ವರು ಮತ್ತು ಮೈಸೂರಿನ ಒಡೆಯರ ಸಂಬಂಧ ಹಾಗೂ ಚಂಗಾಳ್ವ ಪತನವನ್ನು ಸಹ ಕುರಿತು ಚರ್ಚಿಸಲಾಗಿದೆ. ಚಂಗಾಳ್ವ ಅರಸರ ರಾಜಕೀಯ ಸಾಧನೆಯೂ ಕೂಡ ಒಂದು ಮಾದರಿಯಲ್ಲಿ ಮೈಸೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳ ಕೆಲವು ತಾಲ್ಲೂಕು ಪ್ರದೇಶಗಳಲ್ಲಿ ಕಂಡುಬಂದಿದೆ. ವಿಶಿಷ್ಟ, ವೈಶಿಷ್ಟ್ಯ ಹಾಗೂ ವಿಶೇಷತೆಯಿಂದ ಕೂಡಿರುವುದು ತಿಳಿದುಬರುತ್ತದೆ.

ಅಧ್ಯಾಯ ಮೂರರಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಚಂಗಾಳ್ವರ ಆಡಳಿತ ಕಾಲದ ಆರ್ಥಿಕ ಪರಿಸ್ಥಿತಿಯನ್ನು ವಿಸ್ತೃತವಾಗಿ ದಾಖಲೀಕರಿಸಲಾಗಿದೆ. ಪ್ರಧಾನವಾಗಿ ಚಂಗಾಳ್ವ ಅರಸರ ಆಡಳಿತದ ಕಾಲಾವಧಿಯಲ್ಲಿ ಇದ್ದಂತಹ ಕೃಷಿ ವಿಸ್ತರಣೆ, ನೀರಾವರಿಯ ಸೌಕರ್ಯ, ಮುಖ್ಯವಾಗಿ ನೀರಿನ ಮೂಲವನ್ನು ತಳಸ್ಪರ್ಶಿಯವಾಗಿ ಅಧ್ಯಯನ ಮಾಡಲಾಗಿದೆ. ರಾಜ್ಯದ ಹಿತದೃಷ್ಟಿಯಿಂದ ಚಂಗಾಳ್ವ ರಾಜಮನೆತನದ ರಾಜ ಮಹಾರಾಜರು, ಮಂತ್ರಿಗಳು, ದಂಡನಾಯಕರು ಮತ್ತು ಸ್ಥಳೀಯ ಪ್ರಭುಗಳು ಕೆರೆ ಮತ್ತು ಕಟ್ಟೆಗಳ ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಇವರ ಕಾಲಾವಧಿಯಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದ ಅಂಶಗಳು ಹಾಗೂ ವಾಣಿಜ್ಯ ಬೆಳವಣಿಗೆಯೂ ಕೂಡ ಅದಕ್ಕೆ ಪೂರಕವಾಗಿಯೇ ಇರುವಂತಹ ಸ್ಥಳೀಯವಾಗಿ ಮತ್ತು ಇತರರನ್ನು ಹೆಚ್ಚು ಹೆಚ್ಚು ಸೆಳೆಯುವಂತಹ ಮಾದರಿಯ ವಾಣಿಜ್ಯ ವ್ಯಾಪಾರ ಸಂಬಂಧಿತ ಕೇಂದ್ರಗಳನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಇವರದೇ ಆದಂತಹ ನಾಣ್ಯ ಪದ್ಧತಿಯನ್ನು ಕೂಡ ವಿಶೇಷವಾಗಿ ಜಾರಿಗೆ ತಂದಿರುವ ಅಂಶಗಳನ್ನು ಈ ಅಧ್ಯಾಯದಲ್ಲಿ ಶಿಸ್ತುಬದ್ಧ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಚಂಗಾಳ್ವ ಅರಸರ ಕಾಲದ ಧಾರ್ಮಿಕ ನೀತಿಯನ್ನು ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಚಂಗಾಳ್ವ ಅರಸರು ಕರ್ನಾಟಕ ರಾಜ್ಯವನ್ನು ಆಳಿದ ಕದಂಬರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಮೈಸೂರು ಒಡೆಯರ ಸಾಮಂತರಾಗಿಯೂ ಹಾಗೂ ಕೆಲವು ಕಾಲ ಸ್ವಾತಂತ್ರ್ಯರಾಗಿ ಆಡಳಿತ ಮಾಡಿರುವ ರಾಜಮನೆತನವಾಗಿದೆ. ಚಂಗಾಳ್ವ ಅರಸರು ಬಹುಮುಖ್ಯವಾಗಿ ಸ್ಥಳೀಯರು, ಆದ್ದರಿಂದಲೇ ಇವರ ಕಾರ್ಯಕ್ಷೇತ್ರವೇ ಆಗಿದ್ದಂತಹ ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆಗಳ ಕೆಲವು ತಾಲ್ಲೂಕು ಪ್ರದೇಶದಲ್ಲಿ ಪ್ರಖ್ಯಾತ ರಾಜವಂಶದವರು ಅನುಸರಿಸಿ, ಆಚರಿಸಿ,

ಪ್ರೋತ್ಸಾಹಿಸಿ ಆ ಮೂಲಕ ಸ್ಥಾಪಿತಗೊಂಡಿದ್ದ ಶೈವಧರ್ಮ, ವೈಷ್ಣವಧರ್ಮ ಮತ್ತು ಜೈನಧರ್ಮಗಳಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರವನ್ನು ನೀಡುವ ಮೂಲಕ ಅವುಗಳ ಬೆಳವಣಿಗೆಯಲ್ಲಿ ತಮ್ಮದೇ ಆದಂತಹ ಪಾತ್ರವನ್ನು ವಿಶಿಷ್ಟ ರೀತಿಯಲ್ಲಿ ನಿರ್ವಹಿಸಿದ್ದಾರೆ. ಆದ್ದರಿಂದಲೇ ಈ ಚಂಗಾಳ್ವ ಅರಸರು ಕಾಲಾನುಕ್ರಮದಲ್ಲಿ ತಮ್ಮ ಸಾಮಂತ ಮತ್ತು ಸ್ವತಂತ್ರ ಆಳ್ವಿಕೆಯ ಕಾಲಘಟ್ಟದಲ್ಲಿ ಧಾರ್ಮಿಕ ಸೌಹಾರ್ದ ನೀತಿಯನ್ನು ಅನುಷ್ಠಾನಕ್ಕೆ ತಂದಿರುವುದನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಚಂಗಾಳ್ವ ಅರಸರ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಕುರಿತ ವಿಸ್ತೃತವಾಗಿ ವಿವರಿಸಲಾಗಿದೆ. ಚಂಗಾಳ್ವ ಅರಸರ ಆಡಳಿತದ ಕಾಲಘಟ್ಟದಲ್ಲಿ ಸಾಮಾಜದ ರಚನೆ, ವರ್ಣವ್ಯವಸ್ಥೆ, ವಿವಿಧ ಜಾತಿ ಸಮುದಾಯಗಳು, ಅಗ್ರಹಾರಗಳ ಸ್ಥಾಪನೆ, ಶಿಕ್ಷಣ ಪದ್ಧತಿ, ಸ್ತ್ರೀಯರ ಸ್ಥಾನಮಾನ, ಸತಿಸಹಗಮನ ಪದ್ಧತಿ, ರೂಢಿಸಂಪ್ರದಾಯಗಳು, ಆಚಾರ ವಿಚಾರಗಳ ವಿಷಯವನ್ನು ಕುರಿತು ನಿರೂಪಿಸಲಾಗಿದೆ. ಚಂಗಾಳ್ವ ಅರಸರ ಶ್ರೇಣೀಕೃತ ವ್ಯವಸ್ಥೆಯಲ್ಲಿ ಅಗ್ರಪಂಕ್ತಿಯಲ್ಲಿದ್ದ ಬ್ರಾಹ್ಮಣ ವರ್ಗಕ್ಕೆ ಪ್ರತ್ಯೇಕವಾಗಿ ವಾಸಿಸಲು ಅಗ್ರಹಾರಗಳ ಸ್ಥಾಪನೆಯನ್ನು ಮಾಡಿರುವುದು ಕಂಡುಬರುತ್ತದೆ. ಇವರ ಆಡಳಿತದಲ್ಲಿ ಶಿಕ್ಷಣ ಪದ್ಧತಿಯು ಅಗ್ರಹಾರ, ದೇವಾಲಯ, ಘಟಿಕಸ್ಥಾನಗಳಲ್ಲಿ ನಡೆಯುತ್ತಿತ್ತು. ಆಡಳಿತ ಪ್ರದೇಶದಲ್ಲಿ ವಿವಾಹ ಪದ್ಧತಿಗಳು, ಅಲಂಕಾರಿಕ ವಸ್ತ್ರವಿನ್ಯಾಸ, ಸ್ತ್ರೀಯರ ಸ್ಥಾನಮಾನದ ಬಗೆಗೂ ಕೂಡ ಈ ಅಧ್ಯಾಯದಲ್ಲಿ ಸಂಗ್ರಹಿಸಿರುವ ವಿಸ್ತೃತವಾದ ಅಂಶಗಳನ್ನು ಸಾಕ್ಷೀಕರಿಸಲಾಗಿದೆ.

ಅಧ್ಯಾಯ ಆರರಲ್ಲಿ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಅಧ್ಯಯನದ ಹಿನ್ನೆಲೆಯಲ್ಲಿ ಚಂಗಾಳ್ವ ಅರಸರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳು, ಮಠಗಳು, ಜೈನಬಸದಿಗಳ ಕಲೆ ಮತ್ತು ವಾಸ್ತುಶಿಲ್ಪಗಳಿಗೆ ನೀಡಿದ ಕೋಡುಗೆಯನ್ನು ಕುರಿತು ವಿವರಿಸಲಾಗಿದೆ. ಚಂಗಾಳ್ವ ಅರಸರು ವೈಧಿಕ ಮತ್ತು ಅವೈಧಿಕ ಧರ್ಮಗಳನ್ನು ಅವಲಂಬಿಸಿ ಪ್ರೋತ್ಸಾಹಿಸಿ, ಆಚರಿಸಿ ಆರಾಧಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಹಾಗೆಯೇ ಚಂಗಾಳ್ವ ಅರಸರ ಕಾಲದಲ್ಲಿ ನಿರ್ಮಿಸಿದ ದೇವಾಲಯ, ಸ್ಮಾರಕಗಳು, ಚೈತ್ಯಗೃಹಗಳು ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿರುವ ಅಧಿಕವಾದ ಕೊಡುಗೆನ್ನು ಸಹ ಈ ಅಧ್ಯಾಯದಲ್ಲಿ ದಾಖಲೀಕರಿಸಲಾಗಿದೆ.

ಅಧ್ಯಾಯ ಏಳರಲ್ಲಿ ಮೇಲೆ ತಿಳಿಸಿದ ಎಲ್ಲಾ ಅಧ್ಯಾಯಗಳ ಚರ್ಚೆಯಿಂದ ಹೊರಹೊಮ್ಮುವ ಫಲಿತಾಂಶಗಳನ್ನು ವಿಶ್ಲೇಷಿಸಲಾಗಿದೆ. ಇದು ಅಧ್ಯಯನದ ಪ್ರಧಾನವಾದ ಭಾಗವೇ ಆಗಿರುತ್ತದೆ. ಹಾಗೆಯೇ ಸಂಶೋಧನೆಯ ಬಗೆಯಲ್ಲಿ ಮೂಡಿಬರುವ ಹೊಸ ಹೊಸ ಸಾಧ್ಯತೆಗಳನ್ನು ಕೂಡ ಇದು ಸೂಚಿಸುತ್ತದೆ

ಎಂದು ಹೇಳಬಹುದು. ಚಂಗಾಳ್ವರು ಆಳ್ವಿಕೆ ಮಾಡಿದ ಪ್ರದೇಶದಲ್ಲಿ ಕಂಡುಬರುವ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಯನ್ನು ಕುರಿತು ಮುಂದಿನ ಪೀಳಿಗೆಗೆ ಸ್ಪಷ್ಟವಾಗಿ ರವಾನಿಸಲು ಪೂರಕವಾಗಿ ಗ್ರಂಥಸೂಚಿ, ನಕಾಶೆಗಳು ಮತ್ತು ಛಾಯಚಿತ್ರಗಳನ್ನು ಒಳಗೊಂಡಂತೆ ಸಂಪೂರ್ಣ ಮಾಹಿತಿಯನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿಕೊಡಲಾಗಿದೆ.

ಅಧ್ಯಯನದ ಉದ್ದೇಶ

ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಕರ್ನಾಟಕ ರಾಜ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಈ ಮನೆತನವು ಸಹಜವಾಗಿ ಇತಿಹಾಸದ ಅನೇಕ ಘಟನೆಗಳಿಗೂ ಕಾರಣವಾಗಿದೆ. ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದಂತೆ ಈ ರಾಜಮನೆತನದ ಐತಿಹಾಸಿಕವಾದ ರಾಜಕೀಯ ಮತ್ತು ಸಾಂಸ್ಕೃತಿಕ ಹಿರಿಮೆಯನ್ನು ಎತ್ತಿಹಿಡಿಯುವುದು ಮೊದಲ ಉದ್ದೇಶವಾಗಿದೆ. ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಗಳ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡು ಚಂಗಾಳ್ವರ ರಾಜಕೀಯ ಪ್ರದೇಶದಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳಾದ ಹಬ್ಬ, ಉತ್ಸವ, ಜಾತ್ರೆ ಮಹೋತ್ಸವ, ದೇವಾಲಯಗಳ ನಿರ್ಮಾಣ, ದೇವದಾಸಿ ಪದ್ಧತಿ, ಸಾಮಾಜಿಕ ಪದ್ಧತಿಗಳು, ಧಾರ್ಮಿಕ ನಂಬಿಕೆಗಳು, ಹೀಗೆ ಒಂದು ಪ್ರದೇಶದಲ್ಲಿನ ಸಂಸ್ಕೃತಿಯ ಬೆಳವಣಿಗೆಗೆ ಅಲ್ಲಿನ ರಾಜಮನೆತನಗಳು ಹೇಗೆ ಕಾರಣವಾದವು ಎಂಬುದನ್ನು ತಿಳಿಯಪಡಿಸಲಾಗಿದೆ. ಈ ಚಂಗಾಳ್ವರು ಆಳಿದ ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆಯ ಕೆಲವು ಪ್ರದೇಶಗಳು ಎಂಬುದನ್ನು ಗುರುತಿಸಲಾಗಿರುತ್ತದೆ. ಹಾಗೆಯೇ ಈ ಪ್ರದೇಶವನ್ನು ಆಳಿದಂತಹ ಇತರೆ ರಾಜ ಮಹಾರಾಜರು ಹಾಗೂ ಅವರ ರಾಜಮನೆತನದೊಟ್ಟಿಗೆ ಚಂಗಾಳ್ವ ಅರಸರು ಸಾಮಂತರಾಗಿಯೂ ಹಾಗೂ ಸ್ವತಂತ್ರರಾಗಿಯೂ ಆಡಳಿತ ಕಾರ್ಯನಿರ್ವಹಿಸಿದ್ದರು ಎಂಬುದನ್ನು ಅವಲೋಕಿಸಲಾಗಿರುತ್ತದೆ. ಇದೇ ಸಂದರ್ಭದಲ್ಲಿ ಚಂಗಾಳ್ವ ಅರಸರು ರಾಜಕೀಯವಾಗಿ ಸಾಧಿಸಿರುವ ಸಾಧನೆಯ ವಿವಿಧ ಮಜಲುಗಳನ್ನು ಸಾಕ್ಷಿ ಸಹಿತ ಹೊರತರಲಾಗಿದೆ. ಬಹುಮುಖ್ಯವಾಗಿ ಹೀಗೆ ಆಳ್ವಿಕೆಯನ್ನು ನಡೆಸಿರುವಂತಹ ಚಂಗಾಳ್ವ ಅರಸರು ತಾವು ಆಳಿರುವ ಪ್ರದೇಶಗಳಿಗೆ ನೀಡಿರುವಂತಹ ಸಾಂಸ್ಕೃತಿಕ ಕೊಡುಗೆಗಳನ್ನು ಕೂಡ ಶಿಸ್ತುಬದ್ಧವಾಗಿ ಹಾಗೂ ವೈಜ್ಞಾನಿಕವಾಗಿ ದಾಖಲಿಸಲಾಗಿರುತ್ತದೆ. ಹಾಗೆಯೇ ಇದೇ ಚಂಗಾಳ್ವ ಅರಸರ ಆಡಳಿತದ ಕಾಲದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಪರಿಸ್ಥಿತಿಗಳನ್ನು ಕೂಡ ಪ್ರಧಾನವಾಗಿ ಗುರುತಿಸಲಾಗಿರುತ್ತದೆ. ಈ ವಿಚಾರಧಾರೆಗಳಿಗೆ ಚಂಗಾಳ್ವ ಅರಸರು ತಮ್ಮದೇ ಆದಂತಹ ಪರಿಮಿತಿಯಲ್ಲಿ ನೀಡಿರುವಂತಹ ಕೊಡುಗೆಗಳನ್ನು ಕೂಡ ಕಾಲಾನುಕ್ರಮದಲ್ಲಿ ಶಾಸನಗಳು ಹಾಗೂ ಸಾಹಿತ್ಯಿಕ ಆಧಾರಗಳ ಸಾಕ್ಷ್ಯದಾರಗಳಿಂದ ದೃಢಪಡಿಸಲಾಗಿರುತ್ತದೆ.

ಪ್ರಸ್ತುತ ಅಧ್ಯಯನದ ಕೇಂದ್ರೀಯ ವಸ್ತುವಿಷಯದ ಪ್ರಧಾನ ಉದ್ದೇಶವೇನೆಂದರೆ ಈ ಅಧ್ಯಯನದ ಪ್ರದೇಶವಾಗಿರುವ ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ತಾಲ್ಲೂಕುಗಳು, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ದೊರೆತಿರುವಂತಹ ಚಂಗಾಳ್ವ ಅರಸರು ಹಾಗೂ ಇತರ ರಾಜವಂಶದವರ ಆಡಳಿತ ಕಾಲದಲ್ಲಿನ ಶಾಸನಗಳನ್ನು ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮೂಲಕ ಬಹುಸೂಕ್ಷ್ಮವಾಗಿ ಅಧ್ಯಯನ ಮಾಡಿ ವಿಶ್ಲೇಷಿಸಿ ಅವುಗಳಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಚಾರಧಾರೆಗಳ ಮಹತ್ವದ ಸಾರವನ್ನು ಗುರುತಿಸಲಾಗಿರುತ್ತದೆ.

ಸಂಶೋಧನಾ ಮಾರ್ಗ (Research Mathodology)

ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಸಂಶೋಧನಾ ವಸ್ತುವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ವಸ್ತುವಿಷಯವು ಈ ಕೆಳಕಂಡ ಸಂಶೋಧನಾತ್ಮಕ ವಿಧಾನಗಳನ್ನು ಒಳಗೊಂಡಿದೆ.

- ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನವು ಐತಿಹಾಸಿಕ ವಿಧಾನ(Historical Method)ದ ಮೂಲಕ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಿಸಿದಂತೆ ಅದರ ಸ್ವರೂಪ, ವ್ಯಾಪ್ತಿ, ಪ್ರಾಮುಖ್ಯತೆ, ಚಂಗಾಳ್ವರ ರಾಜಕೀಯ ಸಾಧನೆ, ಸಾಂಸ್ಕೃತಿಕ ಕೊಡುಗೆಗಳು, ಅನುಸರಿಸಿದ ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಅಧ್ಯಯನ ಮಾಡಲು ಸಹಾಯಕವಾಗಿದೆ.
- ವಿಶ್ಲೇಷಣಾ(Analytical) ಮತ್ತು ವಿವರಣಾತ್ಮಕ ವಿಧಾನ (Discriptive)ಗಳ ಮೂಲಕ ಎಲ್ಲಾ ಸಂಗ್ರಹಿತ ಮಾಹಿತಿಗಳನ್ನು ಕ್ರಮಬದ್ಧವಾಗಿ, ವಸ್ತುನಿಷ್ಠವಾಗಿ ಹಾಗೂ ವ್ಯವಸ್ಥಿತವಾಗಿ ವಿಶ್ಲೇಷಿಸಿ ವಿವರಣಾತ್ಮಕವಾಗಿ ನಿರೂಪಿಸಲಾಸಲಾಗಿದೆ.
- ಅವಲೋಕನ ವಿಧಾನ(observation)ದ ಮೂಲಕ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಿಸಿದಂತೆ ಸ್ಥಿತಿಗತಿ, ನೈಜತೆಯನ್ನು, ಸತ್ಯಾಸತ್ಯತೆಯನ್ನು ಅರಿಯಲು ಸಹಾಯಕ ಅಥವಾ ಸಾಧ್ಯವಾಗಿದೆ.

- ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳಿಗೆ ಸಂಬಂಧಿಸಿದ ವಿಷಯವನ್ನು ಕ್ಷೇತ್ರಕಾರ್ಯ (Fild study) ಮತ್ತು ಸಮಗ್ರ ಸಮೀಕ್ಷಾ (survey) ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.
- ಪ್ರಾಯೋಗಿಕ (Empirical) ಮತ್ತು ಸಂದರ್ಶನದ ವಿಧಾನ (interview) ದಿಂದ ಲಾವಣಿಗಳು, ರೂಡಿಸಂಪ್ರಾದಾಯಗಳು, ಪದ್ಧತಿಗಳು, ಆಚಾರ ವಿಚಾರಗಳು, ವೀರಕಥೆಗಳನ್ನು ತಿಳಿದುಕೊಂಡು ಇತಿಹಾಸ ರಚನೆಯನ್ನು ಮಾಡಲಾಗಿದೆ.

ಈ ಮೇಲಿನ ಎಲ್ಲಾ ಸಂಶೋಧನಾ ವಿಧಾನಗಳ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆ

ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆಯೂ ಪ್ರತಿಯೊಂದು ಅಧ್ಯಯನಕ್ಕೂ ಕೂಡ ಪೂರಕ ಹಾಗೂ ಅಗತ್ಯವಾಗಿ ಬೇಕಾಗಿರುತ್ತದೆ. ಏಕೆಂದರೆ ಯಾವುದೇ ಒಂದು ಅಧ್ಯಯನವು ತನ್ನ ಆರಂಭಿಕ ಕಾಲಘಟ್ಟದಿಂದ ಹಿಡಿದು ಅಂತಿಮ ಗುರಿ ಸಾಧನೆಯನ್ನು ತಲುಪುವವರೆಗೂ ಕೂಡ ಗ್ರಂಥ ಭಂಡಾರವೂ ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ವಿವಿಧ ಮಾದರಿಯ ಸಾಹಿತ್ಯಿಕ ಮಾಹಿತಿಯ ರೂಪವೇ ಗ್ರಂಥಮಾಲಿಕೆ ಆಗಿರುತ್ತದೆ. ಪ್ರಾಥಮಿಕ ಮೂಲ ಆಧಾರಗಳು, ಅನುಷಂಗಿಕ ಮೂಲ ಆಧಾರಗಳು, ನಿಯತಕಾಲಿಕೆಗಳು, ಮಾಸ ಪತ್ರಿಕೆಗಳು ಮತ್ತು ದಿನಪತ್ರಿಕೆಗಳು, ಯಾವುದು ಪ್ರಕಟಿತ ಮಾಧ್ಯಮದಲ್ಲಿ ಲಭ್ಯವಾಗುವುದಿಲ್ಲವೊ ಅಂತಹ ಮಾಹಿತಿಯನ್ನು ಇಂದಿನ ತಂತ್ರಜ್ಞಾನ ಬಳಕೆಯ ಮೂಲಕ ಪಡೆದುಕೊಂಡಿರುವ ಅಂಶಗಳನ್ನು ಈ ವಿಭಾಗದಲ್ಲಿ ದಾಖಲೀಸಲಾಗಿದೆ. ಹೀಗೆ, ಪ್ರಸ್ತುತ ಅಧ್ಯಯನವು ತನ್ನದೇ ಆದಂತಹ ಸ್ವರೂಪವನ್ನು ಹೊಂದುವ ಮೂಲಕ ಅಂತಿಮ ಗುರಿ ಮತ್ತು ಉದ್ದೇಶವನ್ನು ತಲುಪಿರುತ್ತದೆ.

ಪ್ರಸ್ತುತ ಅಧ್ಯಯನ ವಿಷಯವೇ ಆಗಿರುವ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ವಸ್ತುವಿಷಯಕ್ಕೆ ಪೂರಕವಾಗಿರುವ ಶಾಸನಗಳು, ಕೃತಿಗಳನ್ನು ಬಹುಸೂಕ್ಷ್ಮವಾಗಿ ಪರಿವೀಕ್ಷಿಸಲಾಗಿದೆ. ಒಂದೇ ಸ್ಥಳ ಅಥವಾ ಊರಿಗೆ ಸೀಮಿತವಾಗದೇ ಕೆಲವೊಮ್ಮೆ ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿರುವ ಶಾಸನಗಳನ್ನು ಕೂಡ ಅವಲೋಕಿಸಲಾಗಿದೆ. ಹಾಗೆಯೇ ಸಂದರ್ಭೋಚಿತವಾಗಿ ಅಗತ್ಯವೆನಿಸಿದ ಶಾಸನ ಸಂಪುಟಗಳನ್ನು ಪರಿಶೀಲಿಸಲಾಗಿದೆ. ಈ ಹಿನ್ನೆಲೆಯಲ್ಲಿ

ಬಿ.ಎಲ್.ರೈಸ್‌ರವರ ಪ್ರಕಟಿಸಿರುವ ಎಪಿಗ್ರಾಫಿಯ ಕರ್ನಾಟಿಕ, ಹಯವದನರಾವ್, ಸ್ಯುಯಲ್, ಎಂ.ವಿ.ಕೃಷ್ಣರಾವ್, ಡಾ.ಬಿ.ಆರ್.ಗೋಪಾಲ್, ಡಾ.ಸೂರ್ಯನಾಥ್ ಕಾಮತ್, ಡಾ.ಪಿ.ಕೆ.ರಾಜಶೇಖರ್, ಎಂ.ಜಿ.ನಾಗರಾಜ್, ಪಿ.ವಿ.ಕೃಷ್ಣಮೂರ್ತಿ, ಶಾಸನ ತಜ್ಞರಾದ ಆರ್.ನರಸಿಂಹಾಚಾರ್, ಶಾಮಾಶಾಸ್ತ್ರಿ ಮತ್ತು ಡಾ.ಎಂ.ಎಚ್.ಕೃಷ್ಣ ಇತ್ಯಾದಿ ವಿದ್ವಾಂಸರು ಚಂಗಾಳ್ವರನ್ನು ಕುರಿತು ಪರಿಶೀಲನೆ ಮಾಡಿ ಲೇಖನಗಳನ್ನು ಬರೆದು ಚಂಗಾಳ್ವರನ್ನು ಪರಿಚಯಸಿದ್ದಾರೆ. ಪುರಾತತ್ವ ಇಲಾಖೆಯ ವಾರ್ಷಿಕ ವರದಿ ಹಾಗೂ ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ ಸಂಪುಟಗಳಲ್ಲಿ ಪ್ರಕಟಪಡಿಸಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಪ್ರಾನ್ಸಿಸ್ ಬುಕಾನನ್, (1807) ಜರ್ನಿ ಫ್ರಂ ಮದ್ರಾಸ್ ಸಂ–3, (ಮೈಸೂರು, ಕೆನರಾ ಮತ್ತು ಮದ್ರಾಸ್), ಲಂಡನ್. ಈ ಕೃತಿಯಲ್ಲಿ ಪ್ರಾನ್ಸಿಸ್ ಬುಕಾನನ್‌ನು ಕ್ರಿ.ಶ. 1800ರಲ್ಲಿ ಭಾರತಕ್ಕೆ ಬೇಟಿ ನೀಡಿದಾಗ ದಕ್ಷಿಣ ಭಾರತದ ಭೌಗೋಳಿಕ ಅಂಶಗಳ ಜೊತೆಗೆ ಜಾತಿಗಳ ಪಟ್ಟಿಯನ್ನು ನೀಡಿದ್ದಾನೆ. ಕೃಷಿ ಉಪಕರಣಗಳ ಪಟ್ಟಿ, ಬೆಳೆಗಳು, ಸಸ್ಯಸಂಪತ್ತು ಮತ್ತು ನೀರಾವರಿ ಪದ್ಧತಿ, ನೀರಾವರಿ ಬೆಳೆಗಳು ಹಾಗೂ ಖುಷ್ಕಿ ಬೆಳೆಗಳು ಮುಂತಾದ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ. ಕೃಷಿ ಮಾಡಲು ಉಪಯೋಗಿಸುತ್ತಿದ್ದ ವಸ್ತುಗಳಾದ ನೇಗಿಲು, ಕುಂಟೆ, ಅಲೂಬ, ಮುಂತಾದ ವಸ್ತುಗಳ ಪಟ್ಟಿಯನ್ನು ನೀಡಿದ್ದಾನೆ. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಚಾರಗಳನ್ನು ಈ ಗ್ರಂಥವು ತಿಳಿಸುತ್ತದೆ. ಹಾಗೆಯೇ ಗಾಣದಿಂದ ಎಣ್ಣೆಯನ್ನು, ಹತ್ತಿಯಿಂದ ನೂಲನ್ನು, ಸೆಣಬಿನಿಂದ ನಾರನ್ನು, ತೆಂಗಿನ ನಾರಿನ್ನು ತೆಗೆಯುತ್ತಿದ್ದ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ. ಅಂದಿನ ಸಾಮಾಜದಲ್ಲಿದ್ದ ನಂಬಿಕೆ, ಆಚಾರ ವಿಚಾರ, ಜನರ ಉಡುಗೆ ತೊಡುಗೆ, ಶಿಕ್ಷಣ ಪದ್ಧತಿ, ಬಹುಪತ್ನಿತ್ವ, ಸತಿಸಹಗಮನ ಪದ್ಧತಿ ಮುಂತಾದ ಮಾಹಿತಿಗಳನ್ನು ನೀಡಿದ್ದಾರೆ. ಆದುದ್ದರಿಂದ ಪ್ರಸ್ತುತ ಸಂಶೋಧನೆಯಲ್ಲಿ ಈ ಗ್ರಂಥವನ್ನು ಚರ್ಚಿಸಲಾಗಿದೆ.

ಬಿ. ಎಲ್. ರೈಸ್, (1909) ಮೈಸೂರು ಅಂಡ್ ಕೂರ್ಗ್ ಇನ್ಸ್‌ಕ್ರಿಪ್ಸನ್ಸ್ ಲಂಡನ್ ಅರ್ಚಿಬಾಲ್ಡ್ ಕಾನ್ಸ್‌ಟೇಬಲ್ ಅಂಡ್ ಕಂ. ಲಿಮಿಟೆಡ್. ಕರ್ನಾಟಕದ ಇತಿಹಾಸ ರಚನಾಕಾರರಲ್ಲಿ ಪ್ರಮುಖರಾದ ಬಿ.ಎಲ್.ರೈಸ್‌ರವರು ಪ್ರಮುಖ ಪುರಾತತ್ವ ಶಾಸ್ತ್ರಜ್ಞರಾಗಿ ಭೂ ಉತ್ಖನನ, ಶಾಸನಗಳ ಅಧ್ಯಯನ, ಸ್ಮಾರಕಗಳು ಮತ್ತು ನಾಣ್ಯಗಳ ಅಧ್ಯಯನದಲ್ಲಿ ಪ್ರಖ್ಯಾತರಾಗಿದ್ದಾರೆ. ಇವರು ರಚಿಸಿದ ಈ ಕೃತಿಯು ಕರ್ನಾಟಕದ ಆನೇಕ ಚಾರಿತ್ರಿಕ ಸ್ಥಳಗಳನ್ನು ಕುರಿತ ವಿಸ್ತಾರವಾದ ಗ್ರಂಥವಾಗಿದೆ. ಚಂಗಾಳ್ವರ ರಾಜಕೀಯ ಇತಿಹಾಸ, ಮೂಲನೆಲೆ, ಆಡಳಿತ ಪ್ರದೇಶ, ರಾಜಧಾನಿ, ಆರ್ಥಿಕ ಸ್ಥಿತಿಗತಿ, ಸಾಮಾಜಿಕ, ಸ್ಥಿತಿಗಳು, ಧಾರ್ಮಿಕ ಪದ್ಧತಿಯ ಬಗ್ಗೆ ವಿವವರಿಸಿದ್ದಾನೆ. ಸಿಂಹಪಟ್ಟಣ ಒಂದು ಪ್ರಾಚೀನ ರಾಜ್ಯ. ಮೈಸೂರಿನ ದಕ್ಷಿಣ

ಭಾಗದಲ್ಲಿದೆ. ಉತ್ತರ ಭಾರತದಿಂದ ಚಂದ್ರಗುಪ್ತ ಮೌರ್ಯನೊಡನೆ ಬಂದ ಜೈನಗುರು ಭದ್ರಬಾಹು ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದುದರಿಂದ ಅದು ಪ್ರಸಿದ್ಧ ಜೈನ ಕೇಂದ್ರವಾಗಿ ಬೆಳವಣಿಗೆ ಹೊಂದಿತು. ಇದರ ಪ್ರಭಾವ ಪ್ರಾಚೀನ ರಾಜ್ಯವಾದ ಸಿಂಹಪಟ್ಟಣದ ಮೇಲೂ ಆಯಿತು. ರಾಜಧಾನಿ ಸಿಂಹಪಟ್ಟಣ ಪ್ರಮುಖ ವ್ಯಾಪರ ಕೇಂದ್ರವಾಗಿತ್ತು. ಸ್ಥಳೀಯ ಅರಸರು ಸಾಮಂತರ ಆಳ್ವಿಕೆಗೆ ಸಿಂಹಪಟ್ಟಣ ಒಳಪಟ್ಟಿದ್ದ ವಿಷಯಗಳನ್ನು ಮತ್ತು ಶಾಸನಗಳನ್ನು ಆಧರಿಸಿ ವಿವರಿಸಲಾಗಿದೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

ಡಾ.ಎಂ.ಚಿದಾನಂದಮೂರ್ತಿ (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150), ಸಪ್ನ ಬುಕಹೌಸ್, ಬೆಂಗಳೂರು. ಈ ಕೃತಿಯನ್ನು ಶಾಸನಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಶೈವ ಧರ್ಮ, ವೈಷ್ಣವ ಧರ್ಮ, ದೇವಸ್ಥಾನ ಒಂದು ಸಾಮಾಜಿಕ ಸಂಸ್ಥೆ, ವಿದ್ಯಾಭ್ಯಾಸ, ಯುದ್ಧಕಲೆ, ಆತ್ಮಬಲಿಯ ಹಲವು ಪ್ರಕಾರಗಳು, ಆಡಳಿತ ವ್ಯವಸ್ಥೆ ಆರ್ಥಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಅನುಬಂಧ ಕಲೆಗಳು, ಗ್ರಂಥಸೂಚಿಯನ್ನು ನೀಡಿದ್ದಾರೆ. ಈ ಕೃತಿಯು ಪ್ರಸ್ತುತ ಸಂಶೋಧನೆಗೆ ಉಪಯುಕ್ತವಾಗಿದೆ.

ಆರ್.ಆರ್. ದಿವಾಕರ್ (1970), ಕರ್ನಾಟಕ ಪರಂಪರೆ, ಸಂ–1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಈ ಕೃತಿಯಲ್ಲಿ ಒಂದು ದೇಶದ ಚರಿತ್ರೆಯು ಬಹುವಾಗಿ ಅದರ ಭೂಗೋಳದಿಂದ ನಿರ್ಧರವಾಗುತ್ತದೆಂದು ಹೇಳಲಾಗಿದೆ. ಜೊತೆಗೆ ಕರ್ನಾಟಕದ ಭೂಚರಿತ್ರೆಯನ್ನು ಅಥವಾ ಭೂವಿಕಾಸವನ್ನು ಈ ಪ್ರದೇಶದ ಭೂಭಾಗದಲ್ಲಿ ಒಂದಾದ ಮೇಲೊಂದರಂತೆ ಆನೇಕ ಬದಲಾವಣೆಗಳಾಗಿವೆ ಮತ್ತು ಈ ಅನುಕ್ರಮ ಬದಲಾವಣೆಯಾಗಲೂ ಬಹಳ ಕಾಲಾವದಿ ತೆಗೆದುಕೊಂಡಿದೆ ಎಂಬ ಮಾಹಿತಿಯನ್ನು ತಿಳಿಸುತ್ತದೆ. ಮೈಸೂರಿನ ಪ್ರದೇಶದಲ್ಲಿ ದೊರೆಯುವ ಖನಿಜಗಳಾದ ಕಲ್ನಾರು, ಪಚ್ಚೆ, ಕುರಂಗ, ಗ್ರಾನೇಟ್, ಕರಿಸೀಸ (ಗ್ರಾಫೈಟ್) ಸುಣ್ಣಕಲ್ಲುಗಳ ಬಗ್ಗೆ ತಿಳಿಸಿಕೊಡುತ್ತದೆ. ಆದುದರಿಂದ ಈ ಗ್ರಂಥವನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಡಾ. ಹಾ. ಮಾ. ನಾಯಕ (1974), ಎಪಿಗ್ರಾಫಿಯ ಆಫ್ ಕರ್ನಾಟಕ, ಸಂ. 01, 02, 03, 04, 05, 07, 08, 09, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಡಾ.ಹಾ.ಮಾ. ನಾಯಕರವರು ಎಪಿಗ್ರಾಫಿಯ ಕರ್ನಾಟಕ ಸಂಪುಟಗಳಲ್ಲಿ (ಪರಿಷ್ಕೃತ) ಚಂಗಾಳ್ವರ ಇತಿಹಾಸಕ್ಕೆ ಸಂಬಂಧಿಸಿದಂತೆ ಕಂಡುಬರುವ ಶಾಸನಗಳನ್ನು ಪ್ರಕಟಿಸಿದ್ದಾರೆ. ಯಾವುದೇ ಒಂದು ಪ್ರದೇಶದ ಇತಿಹಾಸವನ್ನು ತಿಳಿಯಲು ಅಲ್ಲಿ ದೊರೆಯುವ ಶಾಸನಗಳು ಅತ್ಯಮೂಲ್ಯ ಆಕರಗಳಾಗಿವೆ. ಸಂಪುಟಗಳಲ್ಲಿ 85ಕ್ಕೂ ಅಧಿಕ ಶಾಸನಗಳನ್ನು

ಬಳಸಿಕೊಂಡು ಭೌಗೋಳಿಕ ಹಿನ್ನೆಲೆ, ರಾಜಕೀಯ ಇತಿಹಾಸ, ಅದರ ವ್ಯಾಪ್ತಿ, ಸಾಂಸ್ಕೃತಿಕ ವೈಶಿಷ್ಟ್ಯತೆ ಮುಂತಾದ ಅಂಶಗಳನ್ನು ಅಧ್ಯಯನ ಮಾಡಲಾಗಿದೆ.

ಸೂರ್ಯನಾಥ್ ಯು. ಕಾಮತ್ (1984), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಪರಿಶ್ರೀ ಪ್ರಿಂಟರ್ಸ್, ಬೆಂಗಳೂರು. ಕರ್ನಾಟಕ ಇತಿಹಾಸಕಾರಾರದ ಸೂರ್ಯನಾಥ್ ಯು. ಕಾಮತ್‌ರವರು ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿ, ಭಾಷೆ, ಧರ್ಮ, ಸಾಹಿತ್ಯ ಮುಂತಾದ ವಿಷಯಗಳನ್ನು ಕರ್ನಾಟಕ ಗ್ಯಾಸೆಟಿಯರ್ ಮೂಲಕ ತಿಳಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ದಕ್ಷಿಣ ಭಾಗದಲ್ಲಿ ದೊರೆಯುತ್ತಿರುವ ಉತ್ತಮ ದರ್ಜೆಯ ರೂಪಾಂತರ ಶಿಲೆಗಳನ್ನು ಪ್ರತ್ಯೇಕಿಸಿ ಅವುಗಳನ್ನು ಇನ್ನೂ ಹಳೆಯ ಶಿಲಾಸ್ತೋಮಗಳೆಂದು ವಿಂಗಡಿಸಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕಿನ ಪಿರಿಯಾಪಟ್ಟಣ ಬಳಿ ಇವುಗಳ ಸರಿಯಾದ ಬೆಳವಣಿಗೆ ಮತ್ತು ಕಾಪಾಡುವಿಕೆ ಕಂಡು ಬಂದಿರುವುದರಿಂದ ಈ ಶಿಲೆಗಳಿಗೆ ಪಿರಿಯಾಪಟ್ಟಣ ಶಿಲೆಗಳೆಂದು ಕರೆಯಲಾಗಿದೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

ಹೆಚ್. ತಿಪ್ಪೇರುದ್ರಸ್ವಾಮಿ (1985), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ಈ ಕೃತಿಯು ಚಂಗಾಳ್ವರ ಆಡಳಿತ ಪ್ರದೇಶದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳನ್ನು ಕುರಿತು ವಿಪುಲ ಮಾಹಿತಿಗಳನ್ನು ನೀಡುತ್ತದೆ. ಕರ್ನಾಟಕ ರಾಜ್ಯ ಅದರ ಪ್ರಾಚೀನತೆ, ಕದಂಬರು ಮತ್ತು ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಕೆಳದಿ ಮತ್ತು ಮೈಸೂರು ಒಡೆಯರ್ ಕುರಿತು ತಿಳಿದುಬರುತ್ತದೆ. ಕನ್ನಡ ಜನಪದ, ಆಡಳಿತ ಕ್ರಮ, ಧಾರ್ಮಿಕ ಪರಿಸ್ಥಿತಿ, ಸಾಮಾಜಿಕ ಜೀವನ, ವಿದ್ಯಾಭ್ಯಾಸ, ಶಾಸನಗಳಲ್ಲಿ ಸಂಸ್ಕೃತಿ, ಶಾಸನ ಸಂಪತ್ತು, ವೀರಗಲ್ಲುಗಳು, ದಾನಶಾಸನಗಳು, ಧರ್ಮ ಸಮನ್ವಯ, ಸಾಮಾಜಿಕ ಜೀವನ, ಸಾಹಿತ್ಯ ಸೌಂದರ್ಯ ಮುಂತಾದ ವಿಷಯಗಳನ್ನು ತಿಳಿಸುತ್ತದೆ.

ಡಾ.ಎ.ವಿ.ವೆಂಕಟರತ್ನಂ ಮತ್ತು ಡಾ.ಎಂ.ಬಿ.ಪದ್ಮ (1985), ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು. ಈ ಕೃತಿಯು ಇತಿಹಾಸದ ವ್ಯಾಪ್ತಿ, ಇತಿಹಾಸ ಮತ್ತು ಸಾಮಾಜಿಕ ವಿಜ್ಞಾನಗಳಿಗಿರುವ ಸಂಬಂಧ ಹಾಗೂ ಇತರ ಸಹಾಯಕಶಾಸ್ತ್ರ, ಇತಿಹಾಸದ ಸ್ವರೂಪ ಇತಿಹಾಸವು ಒಂದು ವಿಜ್ಞಾನವೇ ಅಥವಾ ಕಲೆಯೇ, ಇತಿಹಾಸ ದರ್ಶನ ಮತ್ತು ಸಿದ್ಧಾಂತಗಳು ಕಾವ್ಯಕಾರಣ ಸಂಬಂಧಗಳು ಐತಿಹಾಸಿಕ ಸಂಯೋಜನೆ, ಸಂಶೋಧನಾ ಕ್ಷೇತ್ರದಲ್ಲಿ ಪೂರ್ವ ಸಿದ್ಧತೆ ಆರಂಭ ಹಾಗೂ ತಂತ್ರ, ವಿಶ್ಲೇಷಣಾ ಕಾರ್ಯನೀತಿ, ಸಂಯೋಜನಾತ್ಮಕ ಅಥವಾ ಸಾಂಶ್ಲೇಷಿಕ ಅಥವಾ ಸಂಶಿಷ್ಟ ಕಾರ್ಯ ರೀತಿಗಳು, ಅಂತಿಮ ಕಾರ್ಯ ರೀತಿಗಳು, ಇತಿಹಾಸ ಲೇಖನ ಕಲೆ,

ಮಧ್ಯಯುಗದ ಇತಿಹಾಸಲೇಖನ ಕಲೆ, ಆಧುನಿಕ ಯುಗದ ಇತಿಹಾಸ ಲೇಖನ ಕಲೆ, ಆಧುನಿಕ ಇತಿಹಾಸ ಲೇಖನ ಕಲೆ, ಯುರೋಪಿನ ಇತರ ರಾಷ್ಟ್ರಗಳ ವಿಚಾರ ಪಂಥಗಳು ಭಾರತ ದೇಶದ ಇತಿಹಾಸಲೇಖನ ಕಲೆ ಪ್ರಾಚೀನ ಹಾಗೂ ಮಧ್ಯಯುಗಗಳು ಭಾರತದ ಇತಿಹಾಸ ಲೇಖನ ಕಲೆ, ಆಧುನಿಕ ಯುಗಗಳ ಕುರಿತು ತಿಳಿದುಬರುತ್ತದೆ. ಆದಕಾರಣ ಇತಿಹಾಸ ಸಂಸೋಧನೆಗೆ ಇದೊಂದು ಮಾರ್ಗಸೂಚಕ ಕೃತಿಯಾಗಿದೆ.

ಡಾ.ಎಚ್.ಎಸ್.ಗೋಪಾಲರಾವ್ (1993), ನಮ್ಮನಾಡು ಕರ್ನಾಟಕ, ನವಕರ್ನಾಟಕ ಪ್ರಕಾಶನ, ಮೈಸೂರು ಈ ಕೃತಿಯು ಪ್ರಾಕೃತಿಕ ಸಂಪತ್ತು, ಇತಿಹಾಸ ಮತ್ತು ಸಂಸ್ಕೃತಿಕ, ಕೈಗಾರಿಕ ಸಂಪತ್ತು, ಪ್ರೇಕ್ಷಣೀಯ ಸಂಪತ್ತು, ಅಲ್ಲದೆ ಕರ್ನಾಟಕದ ಕೆಲವು ಮೊದಲುಗಳು ಕುರಿತು ಕೃತಿ ರಚಿಸಿದ್ದಾರೆ. ಈ ಕೃತಿಯು ಕರ್ನಾಟಕದ ಇತಿಹಾಸವನ್ನು ಕುರಿತು ಸಾಕಷ್ಟು ವಿಚಾರಗಳನ್ನು ಚರ್ಚಿಸಿದೆ. ಕೆಲವೊಂದು ವಿಚಾರಗಳನ್ನು ತಿಳಿದುಕೊಳ್ಳಲು ಇದೊಂದು ಉತ್ತಮವಾದ ಒಂದು ಕೃತಿಯಾಗಿದೆ.

ಡಾ.ಎ.ವಿ.ನರಸಿಂಹಮೂರ್ತಿ (1996), ವಿಜಯನಗರದ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು. ಈ ಕೃತಿಯಲ್ಲಿ ಪೀಠಿಕೆ, ವಿಜಯನಗರದ ನಾಣ್ಯಗಳ ಸಾಮಾನ್ಯ ಲಕ್ಷಣಗಳು, ಶಾಸನಗಳಲ್ಲಿ ವಿಜಯನಗರ ನಾಣ್ಯಗಳು, ವಿದೇಶಿ ಯಾತ್ರಿಕರ ದೃಷ್ಟಿಯಲ್ಲಿ ವಿಜಯನಗರ ನಾಣ್ಯಗಳು ಉಪಲಬ್ಧ ವಿಜಯನಗರ ನಾಣ್ಯಗಳು, ವಿಜಯನಗರ ನಾಣ್ಯಗಳ ಪ್ರಭಾವ, ನಂತರ ಅನುಬಂಧವನ್ನು ನೀಡಲಾಗಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ದಕ್ಷಿಣ ಭಾರತದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆ, ಈ ಸಾಮ್ರಾಜ್ಯದ ಉದಯದಿಂದ ದಖನ್ ಮತ್ತು ದಕ್ಷಿಣ ಭಾರತದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸಕ್ಕೆ ಒಂದು ಹೊಸ ಆಯಾಮ ದೊರಕಿತು. ಇದುವರೆಗೂ ದಕ್ಷಿಣ ಭಾರತ ಕಾಣದೇ ಇದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಔನ್ನತ್ಯವನ್ನು ಒದಗಿಸಿತು. ಆದುದರಿಂದ ಇತಿಹಾಸಕಾರರು ವಿಜಯನಗರ ಕಾಲವನ್ನು ದಕ್ಷಿಣ ಭಾರತ ಇತಿಹಾಸದ ಸುವರ್ಣಯುಗ ಎಂದು ಕರೆಯುತ್ತಾರೆ. ವಿಜಯನಗರ ಅರಸರ ಕಾಲಕ್ಕೆ ಸೇರಿದ ಶಾಸನಗಳು ದೇವಾಲಯಗಳು, ವೀರಗಲ್ಲು, ಇನ್ನಿತರ ಶಿಲ್ಪಗಳು, ಪಿರಿಯಾಪಟ್ಟಣ ತಾಲ್ಲೂಕಿನಲ್ಲೂ ದೊರೆಯುತ್ತವೆ. ಇವೆಲ್ಲವನ್ನು ಆಯಾ ನೆಲೆಯಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

ಡಾ.ಡಿ.ವಿ.ದೇವರಾಜ್ (1996), ವಿಜಯನಗರ ಅಧ್ಯಯನ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. ವಿಜಯನಗರದ ಇತ್ತೀಚಿನ ಉತ್ಖನನ, ವಿಜಯನಗರದ ಸ್ಮಾರಕಗಳ ಸಂರಕ್ಷಣೆ, ಹಂಪೆಯಲ್ಲೊಂದು ಸಿದ್ದರಾಮೇಶ್ವರ ಪ್ರಣೀತ ಲಿಂಗಕ್ಕೆ ಲಿಂಗವೇ ಪೀಠವಗಿರ್ಪ ಯೋಗಿಲಿಂಗ ಶಿಲ್ಪ, ಅಚ್ಚುತಾಪುರದ ಶಿಲ್ಪಗಳು, ತಿರುಪತಿಯಲ್ಲಿರುವ ಕೃಷ್ಣದೇವರಾಯ ಮತ್ತು ಅವನ ರಾಣಿಯರ ಕಂಚಿನ

ವಿಗ್ರಹಗಳು ಒಂದು ಟಿಪ್ಪಣಿ, ಹಂಪೆಯ ಸ್ಮಾರಕಗಳು ಪ್ರೇರಣೆಯ ಸಂಕೇತಗಳಾಗಿ, ಹಂಪೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದ ದೇವಾಲಯ, ಹಂಪೆಯ ವಿರೂಪಾಕ್ಷ ಸಂಕೀರ್ಣದ ಮಹಿಷಮರ್ದಿನಿ ದೇವಾಲಯ, ವಿಜಯನಗರದ ಶ್ರೀರಂಗರಾಯನ ಅಪ್ರಕಟಿತ ದಾನ ಶಾಸನ ಬಾದಾಮಿಯ ಪರಿಸರದ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ವಿಜಯನಗರ ಶಾಸನಗಳಲ್ಲಿ ಮಹಿಳೆ ಕುಮಾರರಾಯ ಮತ್ತು ಸಂಗಮ ವಂಶ, ಕೃಷ್ಣದೇವರಾಯನ ಇತಿಹಾಸಕ್ಕೆ ಒಂದು ಹೊಸ ಆಕರ, ವಿಜಯನಗರ ಚರಿತ್ರೆಯಲ್ಲಿ ಕೆಳದಿ ಅರಸರು, ಕರಾವಳಿ ಕರ್ನಾಟಕದ ತುಂಡರಸುಗಳು ಮತ್ತು ವಿಜಯನಗರದ ಚಕ್ರವರ್ತಿಗಳು ಒಂದು ವಿಶ್ಲೇಷಣೆ, ಕುಮಾರವ್ಯಾಸನ ಗಜನಗರ ವಿಜಯ ನಗರವೇ ವಿಜಯನಗರ ಮತ್ತು ವಚನ ಸಾಹಿತ್ಯದ ಶಾಸ್ತ್ರೀಕರಣ, ವಿಜಯನಗರ ಕಾಲದಲ್ಲಿ ಸಂಗೀತ ಮತ್ತು ನೃತ್ಯ ಕೊಡುಗೆ ಈ ಮೇಲಿನವುಗಳನ್ನು ಕುರಿತಂತೆ ಪ್ರಬಂಧಗಳನ್ನು ರಚಿಸಿದ್ದಾರೆ. ಆದರೆ ವಿಜಯನಗರ ಅರಸರ ಕಾಲಕ್ಕೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಶಾಸನಗಳು ದೇವಾಲಯಗಳು ಬಿಡಿಶಿಲ್ಪಗಳು ಸ್ಮಾರಕ ಶಿಲ್ಪಗಳು ದೊರೆಯುತ್ತವೆ. ಈ ಕೃತಿಯನ್ನು ಆಧಾರವಾಗಿಟ್ಟುಕೊಂಡು ಈ ಭಾಗದಲ್ಲಿ ಕ್ಷೇತ್ರಕಾರ್ಯದ ಮುಖಾಂತರ ಅಧ್ಯಯನವನ್ನು ನಡೆಸಲಾಗಿದೆ.

ಡಾ. ಡಿ. ವಿ. ಪರಮಶಿವಮೂರ್ತಿ (1999), ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಈ ಕೃತಿಯು ಕರ್ನಾಟಕ ಸಾಂಸ್ಕೃತಿಕ ಇತಿಹಾಸ ರಚನೆಗೆ ನೆರವಾಗುವ ಪ್ರಮುಖ ಆಧಾರ ಗ್ರಂಥವಾಗಿದೆ. ಚಾರಿತ್ರಿಕ ಆಕರ ಸಾಮಾಗ್ರಿಗಳಲ್ಲಿ ಶಾಸನ ಶಿಲ್ಪಗಳು, ಪ್ರಮಾಣವಾದವು. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಮಾತ್ರ ಅಲ್ಲ, ಅಲ್ಲಿ ಬದುಕಿ ಬಾಳಿದ ಜನರೇ ಒಂದು ಗಣನೀಯ ಭಾಗ. ಆ ನಾಡನ್ನಾಳಿದ ರಾಜ ಸಮೂಹ, ಶಾಸನ ಶಿಲ್ಪಗಳು, ದಾನಶಾಸನ ಶಿಲ್ಪಗಳು, ವೀರಶಾಸನ ಶಿಲ್ಪಗಳು, ಬಲಿದಾನ ಶಾಸನ ಶಿಲ್ಪಗಳು, ಶಾಸನ ಶಿಲ್ಪಗಳಲ್ಲಿ ಕಂಡುಬರುವ ಉಡುಪು, ಮಹಾಸತಿಯರ ಉಡುಪು, ಅಪ್ಸರೆಯರ ಉಡುಪು, ಆಭರಣಗಳು, ಹಣೆಸರ, ಕಿರೀಟ, ಕಡಗ ಮುಂತಾದ ವಿಷಯಗಳನ್ನು ಒಳಗೊಂಡಿವೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನ ಪ್ರಬಂಧದಲ್ಲಿ ಬಳಸಿಕೊಳ್ಳಲಾಗುವುದು.

ಡಾ.ಪಿ.ಕೆ.ರಾಜಶೇಖರ್ (ಸಂ) 2001, ಶಿವಸಂಪದ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು. ಈ ಕೃತಿಯ ಎಲ್ಲಾ ಲೇಖನಗಳು ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಿಸಿವೆ. ಐತಿಹಾಸಿಕ ಸಂಪದ, ರಾಜಕಾರಣ ಸಂಪದ, ಧಾರ್ಮಿಕ ಸಂಪದ, ಸಾಹಿತ್ಯ ಸಂಪದ, ಸಾಂಸ್ಕೃತಿಕ ಸಂಪದ, ಸಾಮಾಜಿಕ ಸಂಪದ, ಜಾನಪದ ಸಂಪದ ಹೀಗೆ ಅನೇಕ ಭಾಗಗಳನ್ನು ಮಾಡಿಕೊಂಡು ಕೃತಿಯನ್ನು ಅನೇಕ ಲೇಖಕರು ಸೇರಿ ರಚಿಸಿದ್ದಾರೆ. ಈ ಕೃತಿಯಿಂದ ಪಿರಿಯಾಪಟ್ಟಣ ತಾಲ್ಲೂಕಿನ ಒಂದು ಚಿತ್ರಣವನ್ನು ತಿಳಿಯಲಾಗಿದೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

ಡಾ.ವೆಂಕಟೇಶ್ ಇಂದ್ವಾಡಿ (ಸಂ) (2003), ದೇವಚಂದ್ರನ, ರಾಜಾವಳಿ ಕಥೆ, ಪ್ರಸಾರಾಂಗ, ಹಂಪಿ. ಈ ಕೃತಿಯಲ್ಲಿ ಜೈನಪರಂಪರೆಯನ್ನು ಮಾತ್ರ ಕುರಿತು ಚರ್ಚಿಸಿದೆ ದೇವಚಂದ್ರನ ರಾಜಾವಳಿಕಥೆಯನ್ನು ಸವಿವರವಾಗಿ ಚರ್ಚಿಸಿದ್ದಾರೆ. ಪ್ರಾಚೀನ ಕೃತಿಗಳಲ್ಲಿ ಒಂದು ಅದು ರೂಪುಗೊಂಡ ಕಾಲದ ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಗಮನಿಸುವುದು ಒಂದು ಕ್ರಮವಾದರೆ ಕೃತಿ ಸಮಕಾಲೀನ ಸಂದರ್ಭದಲ್ಲಿ ಎಷ್ಟು ಪ್ರಸ್ತುತ ಎಂದು ನೋಡುವುದು ಇನ್ನೊಂದು ಕ್ರಮ ದೇವಚಂದ್ರನ ರಾಜಾವಳಿ ಕಥೆ ಕರ್ನಾಟಕ ಚರಿತ್ರೆಯ ಒಂದು ಸಂಘರ್ಷ ಗಳಿಗೆಯಲ್ಲಿ ಹುಟ್ಟಿದ ಸಂಕೀರ್ಣ ಪುಸ್ತಕ, ನಮ್ಮ ಪಾರಂಪರಿಕ ರಾಜಾಡಳಿತಗಳು ಕೊನೆಗೊಂಡು ವಸಾಹತುಶಾಹಿ ಆಳ್ವಿಕೆ ಪ್ರಾರಂಭವಾಗುತ್ತಿದ್ದ ಮೊದಲ ಘಟ್ಟದಲ್ಲಿ ಈ ಕೃತಿ ರೂಪ ತಳೆದಿದೆ. ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿಯೂ ಹಲವಾರು ಜೈನ ನೆಲೆಗಳಿವೆ. ಆದಕಾರಣ ಈ ಕೃತಿ ಒಂದು ರೀತಿ ಉಪಯುಕ್ತ ಕೃತಿಯಾಗಿದೆ.

ಡಾ.ಆರ್.ಶೇಷಶಾಸ್ತ್ರಿ (2004), ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ಈ ಕೃತಿಯಲ್ಲಿ ಚಂಗಾಳ್ವರ ಸ್ಮಾರಕಗಳನ್ನು ಕುರಿತು ತಿಳಿಸಲಾಗಿರುತ್ತದೆ. ಮಾನವನ ಹುಟ್ಟು ಅನಿವಾರ್ಯವಾಗದೇ ಇರಬಹುದು, ಆದರೆ ಹುಟ್ಟಿದ ಮೇಲೆ ಮರಣವೆಂಬುದು ಅವನಿಗೆ ಅನಿವಾರ್ಯವೂ, ಪ್ರಕೃತಿ ನಿಯಮವೂ ಹೌದು. ಈ ಹಿನ್ನೆಲೆಯಿಂದ ಉಗಮ, ವಿಕಾಸ, ಸ್ಮಾರಕಗಳ ನಿರ್ಮಿತಿ, ವೀರ ವೀರತನ, ವೀರನ ಬಗ್ಗೆ ಸಮಾಜಕ್ಕೆ ಇರುವ ಗೌರವ, ಆತ್ಮಬಲಿ, ವೀರತನ, ಧಾರ್ಮಿಕ ಕಾರಣಗಳಿಗಾಗಿ ಆತ್ಮಬಲಿ ಮಾಡಿಕೊಂಡವರು, ವೀರಗಲ್ಲುಗಳ ಆರಾಧನೆ, ದೈವದತ್ತದ ಮಟ್ಟಕ್ಕೇರಿದ ವೀರರು, ವೀರಗುಡಿಗಳು, ವೀರಲಿಂಗಗಳು ಕಂಡುಬರುತ್ತವೆ. ಒಟ್ಟಾರೆ ಈ ಕೃತಿಯು ವೀರಗಲ್ಲುಗಳ ವಿಚಾರವನ್ನು ಕುರಿತು ಸಾಕಷ್ಟು ಮಾಹಿತಿಗಳನ್ನು ಒದಗಿಸುತ್ತದೆ. ಕೃತಿಯು ಸಂಶೋಧನೆಗೆ ಉಪಯುಕ್ತವಾಗಿದೆ.

ಡಾ.ಸುಭಾಷ್ ಭರಣಿ (2005), ಧರೆಗೆ ದೊಡ್ಡವರು, ದ್ರಾವಿಡ ಪಬ್ಲಿಕೇಷನ್, ಮೈಸೂರು. ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ, ಜನವರ್ಗದ ಹೆಸರಿನ ಪ್ರಾಚೀನತೆ ಮತ್ತು ಅರ್ಥ, ಆದಿಕರ್ನಾಟಕ ಜನವರ್ಗದ ಪೌರಾಣಿಕ ಐತಿಹಾಸಿಕ, ಸಾಮಾಜಿಕ ಹಿನ್ನೆಲೆ, ಮಲೆ ಮಾದೇಶ್ವರ ಹಾಗೂ ಮಂಟೇಸ್ವಾಮಿ ಮಹಾಕಾವ್ಯಗಳ ಪರಂಪರೆ ಮತ್ತು ದಲಿತ ಜನವರ್ಗ. ಎರಡನೆಯ ಭಾಗದಲ್ಲಿ ಪಂಗಡಗಳು ಕುಲ (ಬೆಡಗುಗಳು) ಋತುಮತಿ ವಿವಾಹ ಹಾಕಿ, ಹುಟು ಸಾವು. ಆದಿ ಕರ್ನಾಟಕರ ಜಾನಪದ ವೈದ್ಯಕೀಯ ಪದ್ಧತಿ, ಕುಸ್ತಿ ಮತ್ತು ಇತರೆ ಕ್ರೀಡೆಗಳು ಧರೆಗೆ ದೊಡ್ಡವರ, ಐದನೆಯ ಭಾಗವು ಸಮಾರೋಪವನ್ನು ಆರನೆಯ ಭಾಗವು ಭಾವಚಿತ್ರಗಳ ಸಂಗಮ ಅನುಬಂಧದಲ್ಲಿ ಆದಿಕವಿ ಸೋಸಲೆ ಸಿದ್ದಪ್ಪರವರ ಕೈಬರಹ,

ಮೌಲ್ಯಮಾಪಕರ ಅಭಿಪ್ರಾಯಗಳು, ಮಾಹಿತಿ ನೀಡಿರುವರು. ಆದ್ದರಿಂದ ಈ ಕೃತಿಯ ಆಧಾರದಿಂದ ಪಿರಿಯಾಪಟ್ಟಣ ತಾಲ್ಲೂಕಿನ ಭೌಗೋಳಿಕ ಹಿನ್ನೆಲೆಯಲ್ಲಿ ಯಾವ ಯಾವ ರೀತಿಯ ಜನಸಮುದಾಯಗಳು ಇದ್ದವು ಎಂಬುದನ್ನು ತಿಳಿದುಕೊಳ್ಳಲು ಸಹಾಯವಾಗಿದೆ.

ಪ್ರೊ.ಲಕ್ಷ್ಮಣ್ ತೆಲಗಾವಿ (ಸಂ) (2006), ಚರಿತ್ರೆ ಅಧ್ಯಯನ ಪ್ರಸಾರಾಂಗ, ಹಂಪಿ. ಈ ಕೃತಿಯಲ್ಲಿ ಪ್ರೊ.ಬಿ.ಸುರೇಂದ್ರರಾವ್‌ರವರು ಕರ್ನಾಟಕ ಇತಿಹಾಸ ರಚನೆ ಪ್ರಾದೇಶಿಕತೆ ಹಾಗೂ ಸೈದ್ಧಾಂತಿಕತೆಯನ್ನು ತಿಳಿಸಿದ್ದಾರೆ. ಡಾ.ಪಿ.ಎನ್.ನರಸಿಂಹಮೂರ್ತಿರವರು ಕೆಲ್ಲಪುತ್ತಿಗೆಯ ಕೆಲ್ಲರು ಕರ್ನಾಟಕದ ಒಂದು ಪ್ರಾಚೀನ ಜೈನ ಮನೆತನ, ಡಾ.ಹನುಮನಾಯಕರವರು ದಕ್ಷಿಣ ಭಾರತದ ಮಧ್ಯಕಾಲೀನ ರಾಜ್ಯಗಳ ಸ್ವರೂಪ ಹೊಯ್ಸಳ ರಾಜ್ಯ ಒಂದು ವಿಶ್ಲೇಷಣೆ ಕುರಿತು, ಡಾ.ಎಂ.ಟಿ.ಕಾಂಬಳೆರವರು ರಾಷ್ಟ್ರಕೂಟರ ಕಾಲದ ಕೆಲವು ವಿಶಿಷ್ಟ ತಳವಿನ್ಯಾಸ ಹೊಂದಿದ ದೇವಾಲಯಗಳು ಅಲ್ಲದೆ ಡಾ.ಕೆ.ಮೋಹನ್‌ಕೃಷ್ಣ ರೈಸ್‌ರವರು ಸ್ಮಾರಕಗಳು ಮತ್ತು ಸಾಮಾಜಿಕ ವಾಸ್ತವತೆ ಕುರಿತು ತಿಳಿಸಿದ್ದಾರೆ. ಈ ಮೇಲಿನ ಸಾಕಷ್ಟು ವಿಚಾರಗಳಿಂದ ಪ್ರಸ್ತುತ ಸಂಶೋಧನಾ ವಿಚಾರಕ್ಕೆ ಪೂರಕವಾಗಿ ಅಧ್ಯಯನ ಮಾಡಲಾಗಿದೆ.

ಎಚ್.ಎಂ. ನಾಗರಾಜು ರಾವ್ (2008), ಶಿವಶೋಧ, ರಚನ ಪ್ರಕಾಸನ, ಮೈಸೂರು. ಈ ಕೃತಿಯು ಬಿ.ಎಲ್.ರೈಸ್‌ರವರ ಕೈಗೊಂಡ ಅಧ್ಯಯನದ ವಿಷಯವನ್ನು ತಿಳಿಸುತ್ತದೆ. ಕನ್ನಡ ನಾಡಿಗೆ ಸುದೀರ್ಘ ಇತಿಹಾಸ, ಸಾಹಿತ್ಯ ಪರಂಪರೆ ಮತ್ತು ಭವ್ಯ ಸಾಂಸ್ಕೃತಿಕ ಚರಿತ್ರೆ, ವಾಸ್ತುಶಿಲ್ಪಗಳ ಜನಪ್ರಿಯತೆ ಮುಂತಾದ ಮಾಹಿತಿಗಳನ್ನು ಒಳಗೊಂಡಿದೆ. ಈ ಪಿರಿಯಾಪಟ್ಟಣ ಭಾಗದ ಶಾಸನಗಳ ಅಧ್ಯಯನದಿಂದ ದೇವಾಲಯಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಮುಂತಾದ ವಿಷಯಗಳನ್ನು ಕ್ಷೇತ್ರ ಕಾರ್ಯದ ಮೂಲಕ ತಿಳಿಸಿಕೊಡಲಾಗಿದೆ. ಆದ್ದರಿಂದ ಈ ಕೃತಿಯು ಪ್ರಸ್ತುತ ಸಂಶೋಧನೆಗೆ ಸಹಾಯಕವಾಗಿದೆ.

ಡಾ.ಅಂಬಳಿಕೆ ಹಿರಿಯಣ್ಣ (ಸಂ) (2009),ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಈ ಕೃತಿಯಲ್ಲಿ ಇತಿಹಾಸ ಹಾಗೂ ಪುರಾತತ್ವ ವಿಚಾರಗಳನ್ನು ಕುರಿತು ಸಾಕಷ್ಟು ವಿಚಾರಗಳನ್ನು ಚರ್ಚಿಸಲಾಗಿದೆ. ಇದೊಂದು ವಿಶೇಷತೆಯನ್ನು ಹೊಂದಿರುವ ಸಂಶೋಧನಾ ಕೃತಿಯಾಗಿದೆ. ಆದಿ ಹಳೆಶಿಲಾಯುಗದ ನೆಲೆಗಳು, ಮಧ್ಯ ಹಳೆಯ ಶಿಲಯುಗದ ನೆಲೆಗಳು ಅಂತ್ಯಶಿಲಾಯುಗ ನೆಲೆಗಳು, ಸೂಕ್ಷ್ಮ ಶಿಲಾಯುಗದ ನೆಲೆಗಳು, ಪ್ರಾಚೀನ ಭಾರತ, ಕ್ರಿ.ಪೂ.6ನೇ ಶತಮಾನ (ಹದಿನಾರು ಮಹಾಜನ ಪಥಗಳು) ಬಾದಾಮಿ ಚಾಳುಕ್ಯರ ಸಾಮ್ರಾಜ್ಯ, ರಾಷ್ಟ್ರಕೂಟ, ಸಾಮ್ರಾಜ್ಯ, ಕಲ್ಯಾಣ ಚಾಳುಕ್ಯರ ಸಾಮ್ರಾಜ್ಯ ಹಾಗೂ ಕಳಚೂರಿ ಆಕ್ರಮಣ ಭಾಗ, ಸೇವುಣ ಸಾಮ್ರಾಜ್ಯ,

ಹೊಯ್ಸಳ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯ, ಚಂಗಾಳ್ವರು ಮುಂತಾದ ರಾಜಮನೆತನಗಳ ಮಾಹಿತಿಯನ್ನು ತಿಳಿಸಲಾಗಿದೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನೆಯಲ್ಲಿ ಬಳಸಿಕೊಳ್ಳಲಾಗಿದೆ.

ಷ.ಶೆಟ್ಟರ್ (2009), ಶಂಗಂ, ತಮಿಳಗಂ ಮತ್ತು ಕನ್ನಡ ನಾಡು ನುಡಿ (ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) ಅಭಿನವ, ಬೆಂಗಳೂರು. ಈ ಕೃತಿಯಲ್ಲಿ ನಾಡು ನುಡಿಗಳನ್ನು ಕುರಿತು ತಿಳಿಸಿಕೊಟ್ಟಿದ್ದಾರೆ. ಕೊಡಗು, ಕೊಂಗಣ, ಮತ್ತು ತುಳುನಾಡನ್ನು ಕುರಿತು ಚರ್ಚಿಸಿದ್ದಾರೆ. ಪಿರಿಯಾಪಟ್ಟಣ ಸಹ ಒಂದು ಕಾಲಕ್ಕೆ ಕೊಡಗು ಜಿಲ್ಲೆಗೆ ಸೇರಿದ ಒಂದು ಭಾಗವಾಗಿತ್ತು. ಈ ಹಿನ್ನೆಲೆಯಿಂದ ಕನ್ನಡನಾಡು, ತಮಿಳುನಾಡು, ಎರಮೈನಾಡುಗಳ ಕುರಿತು ತಿಳಿದುಕೊಳ್ಳುವುದಕ್ಕೆ ಈ ಕೃತಿಯು ಸಹಕಾರಿಯಾಗಿದೆ.

ಡಾ.ಕೆ.ಜಿ.ಭಟ್‌ಸೂರಿ(2009), ಕರ್ನಾಟಕ ಶಾಸನ ಸಂಶೋಧನೆ, ಪ್ರಸಾರಾಂಗ, ಹಂಪಿ. ಈ ಕೃತಿಯು ಸಂಶೋಧನಾ ಲೇಖನಗಳಿಂದ ರಚಿಸಿದ ಕೃತಿಯಾಗಿದೆ. ವಿವಿಧ ಹಿರಿಯ ವಿದ್ವಾಂಸರುಗಳು ಸೇರಿ ರಚಿಸಿದ್ದಾರೆ. ಒಟ್ಟಾರೆ ಶಾಸನಗಳ ಬೆಳವಣಿಗೆಯನ್ನು ತಿಳಿದುಕೊಳ್ಳುವುದಕ್ಕೆ ಸಹಾಯವಾಗಿದೆ. ಆದ್ದರಿಂದ ಈ ಕೃತಿಯನ್ನು ಪ್ರಸ್ತುತ ಸಂಶೋಧನೆಯಲ್ಲಿ ಬಳಸಿಕೊಂಡು ವಿವರಿಸಲಾಗಿದೆ.

ಡಾ.ಕೋ.ವೆಂ.ರಾಮಕೃಷ್ಣೇಗೌಡ (2011), ಕರ್ನಾಟಕ ಕಾವೇರಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಈ ಕೃತಿಯು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ತಿಳಿಸುತ್ತದೆ. ಕಾವೇರಿ ಪ್ರದೇಶದ ಪೌರಾಣಿಕ ನೆಲೆ, ಪ್ರಾಗೈತಿಹಾಸಿಕ ಮತ್ತು ಚಾರಿತ್ರಿಕ ನೆಲೆ ಮುಖ್ಯ ಪ್ರಭುತ್ವಗಳ ಹಿನ್ನೆಲೆಯ, ಧಾರ್ಮಿಕ ನೆಲೆ, ದೇವಾಲಯ, ಹಬ್ಬ ಜಾತ್ರೆಯನ್ನು ಕುರಿತು ತಿಳಿದುಬರುತ್ತದೆ. ಸಾಮಾಜಿಕ ನೆಲೆ, ವರ್ಣ, ಜಾತಿ, ಸ್ತ್ರೀಸ್ಥಾನಮಾನ, ಆತ್ಮಬಲಿ ವೀರಗಲ್ಲು, ಮಾಸ್ತಿಕಲ್ಲು, ಕೃಷಿ, ವ್ಯಾಪಾರ, ಶಿಕ್ಷಣ, ಅಗ್ರಹಾರಗಳು ಮಠಗಳು, ಗುರುಶಿಷ್ಯರ ಬೋಧನೆ, ದಾನ ದತ್ತಿಗಳು ಮತ್ತು ಸಂಸ್ಕೃತಿ ಎನ್ನುವುದು ಸಾಮೂಹಿಕ ಸಮ್ಮತಿಯನ್ನು ಪಡೆದ ಜೀವನ ಪದ್ಧತಿಯಾಗಿದೆ ಎಂಬ ಮುಂತಾದ ಮಾಹಿತಿಯನ್ನು ಒಳಗೊಂಡಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಈ ಕೃತಿಯು ಸಂಶೊಧನೆಗೆ ಪೂರಕವಾದ ಕೃತಿಯಾಗಿದೆ.

ಪ್ರೊ.ಕೆ.ಎನ್.ಗಂಗಾನಾಯಕ್ (ಸಂ) (2011), ಕರ್ನಾಟಕದ ಇತಿಹಾಸ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಈ ಕೃತಿಯು ಚಂದ್ರಗುಪ್ತ ಮೌರ್ಯ, ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟ, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಶಿವಪ್ಪನಾಯಕ,

ಇಕ್ಕೇರಿ ಚರಿತ್ರೆ, ಮೈಸೂರು ಒಡೆಯರ್, ಕೊಡಗಿನ ಹಾಲೇರಿ ರಾಜವಂಶ ಮಾಹಿತಿಯನ್ನು ತಿಳಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಪಿರಿಯಾಪಟ್ಟಣ ತಾಲ್ಲೂಕಿಗೆ ಇವರ ಕೊಡುಗೆ ಕುರಿತು ಅಧ್ಯಯನವನ್ನು ನಡೆಸಲಾಗಿದೆ.

ಡಾ. ಸಿ. ಯು. ಮಂಜುನಾಥ, (2012) ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, (ಕ್ರಿ. ಶ. 1150 ರಿಂದ 1340) ಚಿತ್ಕಲಾ ಪ್ರಕಾಶನ, ಕುಪ್ಪಂ. ಈ ಕೃತಿಯಲ್ಲಿ ಕನ್ನಡ ನಾಡಿನ ಪ್ರಾಚೀನ ಸಂಸ್ಕೃತಿಯ ವಿವಿಧ ಮುಖಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಶಾಸನಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ. ಕ್ರಿ. ಶ. 1150 ರಿಂದ 1340ರ ಅವಧಿಯು ಕರ್ನಾಟಕದಲ್ಲಿ ರಾಜಕೀಯವಾಗಿ ಅನೇಕ ಸ್ಥಿತ್ಯಂತರಗಳನ್ನು ಕಂಡ ಕಾಲವಾಗಿದೆ. ಕನ್ನಡ ನಾಡಿನ ರಾಜಕೀಯ, ಧರ್ಮ, ಸಮಾಜ, ಸಂಸ್ಕೃತಿ, ಸಾಹಿತ್ಯ, ಸಂಗೀತ, ಶಿಲ್ಪಕಲೆ ಒಟ್ಟಾಗಿ ಇಡೀ ಕರ್ನಾಟಕದ ಜನರ ಬದುಕು ಒಂದು ಹೊಸ ಆಯಾಮವನ್ನು ಪಡೆದುಕೊಂಡ ಕಾಲವಿದು. ಈ ಸಂದರ್ಭದಲ್ಲಿ ಧಾರ್ಮಿಕವಾಗಿಯೂ ಅನೇಕ ಏರಿಳಿತಗಳು ಕಂಡು ಬರುತ್ತವೆ. ಉದಾಹರಣೆಗೆ ಜೈನಧರ್ಮ ತನ್ನ ಜನಪ್ರಿಯತೆಯ ಶಿಖರದಿಂದ ಕೆಳಗೆ ಇಳಿಯುತ್ತಿದ್ದ ಸಂದರ್ಭದಲ್ಲಿ ಶೈವ ಧರ್ಮವು ತೀವ್ರವಾಗಿ ಪ್ರಚಾರದಲ್ಲಿತ್ತು. ಹೀಗೆ ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಗಳಿಂದ ಅನೇಕ ಸ್ಥಿತ್ಯಂತರಗಳನ್ನು ಈ ಗ್ರಂಥದಲ್ಲಿ ಅಧ್ಯಯನ ಮಾಡಲಾಗಿದೆ. ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಶೈವ ಹಾಗೂ ಜೈನ ಧರ್ಮಗಳ ಬೆಳವಣಿಗೆಗೆ ಹಾಗೂ ಧರ್ಮಗಳ ನಡುವಣ ಸಂಘರ್ಷ ಮೊದಲಾದ ವಿಷಯಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಡಾ.ಸರಸ್ವತಿ ವಿಜಯ ಕುಮಾರ್ (2012), ಜೈನ ಸಾಹಿತ್ಯ ಪರಿಸರ, ಪ್ರಸಾರಾಂಗ, ಮೈಸೂರು. ಈ ಕೃತಿಯಲ್ಲಿ ದಕ್ಷಿಣ ಭಾರತದ ಪ್ರಾಕೃತ ವೈಯಾಕರಣಿಗಳು, ಜೈನ ಕಾವ್ಯಗಳಲ್ಲಿ ಮಹಿಳೆ, ದುಡಿಮೆಯ ತುಡಿತ, ರಾಷ್ಟ್ರ ಸಂತ ಮುನಿ ಶ್ರೀ ತರುಣಸಾಗರ, ಸಸ್ಯ ಪರಿಸರಕ್ಕೊಂದು ವೃಕ್ಷ ಪ್ರತಿಮೆ, ಮೂಲಾರಾಧನಾ ಗ್ರಂಥದಲ್ಲಿ ದೃಷ್ಟಾಂತಲಂಕಾರಗಳ ಪ್ರಯೋಗ, ಜೈನ ಪರಂಪರೆಯಲ್ಲಿ ರಾಮಾಯಣದ ಆವಿಷ್ಕಾರಗಳು, ರನ್ನನ ಧಾರ್ಮಿಕ ನಿಲುವುಗಳು, ಅಭಿಧಾನ ವಸ್ತುಕೋಶ ಮುಂತಾದ ಮಾಹಿತಿಯನ್ನು ನೀಡಲಾಗಿದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಾಕಷ್ಟು ಜೈನ ಬಸದಿಗಳಿವೆ. ಈ ಕೃತಿಯಿಂದ ಈ ಭಾಗದ ಜೈನ ಪರಂಪರೆಯನ್ನು ತಿಳಿದುಕೊಳ್ಳಲು ತುಂಬಾ ಸಹಾಯಕವಾಗಿದೆ.

ಡಾ. ಮೈಸೂರು ನಾಗರಾಜ ಶರ್ಮ (2012), ಹೊಯ್ಸಳ ಶಿಲ್ಪದಲ್ಲಿ ಶಿವ, ಪ್ರಸಾರಾಂಗ ಮೈಸೂರು. ಭಾರತೀಯ ಪರಂಪರೆಯಲ್ಲಿ ಶಿವ, ಕರ್ನಾಟಕ ಪರಂಪರೆಯಲ್ಲಿ ಶಿವ, ಹೊಯ್ಸಳ ಪರಂಪರೆಯಲ್ಲಿ ಶಿವ, ಲಿಂಗರೂಪಿ ಶಿವ, ಕರ್ನಾಟಕದಲ್ಲಿ ಲಿಂಗ, ಮಾನವರೂಪಿ ಶಿವ, ಉಪಸಂಹಾರ,

ಪದಸೂಚಿ, ಗ್ರಂಥಋಣವನ್ನು ನೀಡಿದ್ದಾರೆ. ಶಿವಶಿಲ್ಪ ಹಾಗೂ ಶೈವವಾಸ್ತುಗಳ ಮೂಲಕ ನಡೆಸುವ ಅಧ್ಯಯನ ಇದಾದರೂ ಶೈವಾಚರಣೆಗಳಲ್ಲಿನ ಭಿನ್ನತೆಗಳನ್ನು ಅರಿಯಲು ವೈಷ್ಣವ ಶಿಲ್ಪ ಮತ್ತು ಆಚರಣೆಗಳೊಡನೆ ಹೋಲಿಸಿ ಅವಲೋಕಿಸುವ ಪ್ರಯತ್ನವನ್ನು ಇಲ್ಲಿ ನಡೆಸಲಾಗಿದೆ. ಅಲ್ಲದೆ ಹೊಯ್ಸಳ ಕಾಲದ ಶೈವಾಚರಣೆಯಲ್ಲಿನ ವಿಶೇಷತೆಗಳನ್ನು ತಿಳಿಯಲು ಸ್ವಾಭಾವಿಕವಾಗಿ ಹೊಯ್ಸಳ ಪೂರ್ವಕಾಲದ ಹೋಲಿಕೆ ಅತ್ಯವಶ್ಯ. ಈ ಕೃತಿಯ ಶೀರ್ಷಿಕೆ ಹೊಯ್ಸಳ ಶಿಲ್ಪದಲ್ಲಿ ಶಿವ ಎಂದಾದರೂ ಇದು ಕೇವಲ ಹೊಯ್ಸಳ ಕಾಲ ಅಥವಾ ಶಿವಶಿಲ್ಪ ಎಂಬ ಪರಿಮಿತಿಯ ಅಧ್ಯಯನವಾಗಿದೆ. ಇತಿಹಾಸ ಅಧ್ಯಯನದ ಮುಖ್ಯಮಾರ್ಗಗಳಾದ ಪುರಾತತ್ವ ಶಾಸನ, ವಾಸ್ತುಶಿಲ್ಪ ಮತ್ತು ಸಾಹಿತ್ಯಗಳನ್ನು ಸ್ವಾಭಾವಿಕವಾಗಿ ಬಳಸಿಕೊಂಡಿರುವುದನ್ನು ಗಮನಿಸಿದ್ದೇನೆ. ಈ ಕೃತಿಯ ಪ್ರಸ್ತುತ ಸಂಶೋಧನೆಗೆ ಉಪಯುಕ್ತವಾದ ಕೃತಿಯಾಗಿದೆ.

ಡಾ.ಎಂ.ಎಸ್.ಅನಿತಾ (2012), ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ (ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ – 1884–1940), ಪ್ರಿಯದರ್ಶಿನಿ ಪ್ರಕಾಶನ, ಮೈಸೂರು. ಈ ಕೃತಿಯು ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆಗಳನ್ನು ಅವರ ಕೊಡುಗೆಗಳನ್ನು ಕುರಿತು ತಿಳಿದುಬರುತ್ತದೆ. ಮೈಸೂರು ಒಡೆಯರ್‌ರವರು ಪಿರಿಯಾಪಟ್ಟಣ ತಾಲ್ಲೂಕಿಗೆ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಈ ಹಿನ್ನೆಲೆಯಿಂದ ಒಡೆಯರ್ ಇತಿಹಾಸ ತಿಳಿಯಲು ಈ ಕೃತಿ ತುಂಬಾ ಸಹಾಯಕವಾಗಿದೆ.

ಈ ಎಲ್ಲಾ ಕೃತಿಗಳನ್ನು ಗಮನಿಸಿದರೆ ಚಂಗಾಳ್ವರ ರಾಜಕೀಯ ಸಾಧನೆಗಳು ಮತ್ತು ಸಾಂಸ್ಕೃತಿಕ ಕೊಡುಗೆಗಳು ಹಾಗೂ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಸಾಮಾಜಿಕ ಇತಿಹಾಸದ ಮಾಹಿತಿಗಳು ಹಲವು ಗ್ರಂಥಗಳು, ಲೇಖನಗಳಲ್ಲಿ ಹಂಚಿಹೋಗಿವೆ. ಒಂದು ರಾಜಮನೆತನದ ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಇತಿಹಾಸವನ್ನು ಕಟ್ಟುವ ಅಥವಾ ಈ ಎಲ್ಲಾ ದೃಷ್ಟಿ ಕೋನಗಳಲ್ಲಿ ನೋಡುವ ಪ್ರಯತ್ನವಾಗಿ ಆಡಳಿತ ಕೇಂದ್ರಗಳು, ಧಾರ್ಮಿಕ ಕೇಂದ್ರಗಳು, ಅಂತರಿಕ ವ್ಯಾಪಾರ ಕೇಂದ್ರಗಳು, ನಗರಗಳು, ಪಟ್ಟಣಗಳು, ಅವುಗಳ ಕಾಲಾಂತರದ ಬದಲಾವಣೆ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಗ್ರಂಥಋಣ

ಪ್ರಾಥಮಿಕ ಆಕರಗಳು :

1. ಹಯವದನರಾವ್.ಸಿ, (1972) ಮೈಸೂರು ಗೆಸೆಟಿಯರ್, ಸಂ–1, ಬೆಂಗಳೂರು.
2. ಡಾ. ಹಾ. ಮಾ. ನಾಯಕ, (1974) ಎಪಿಗ್ರಾಫಿಯ ಆಫ್ ಕರ್ನಾಟಕ, ಸಂ–3, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
3. ಡಾ. ಹಾ. ಮಾ. ನಾಯಕ, (1974) ಎಪಿಗ್ರಾಫಿಯ ಆಫ್ ಕರ್ನಾಟಕ, ಸಂ–4, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
4. ಡಾ. ಹಾ. ಮಾ. ನಾಯಕ, (1979) ಕನ್ನಡ ವಿಷಯ ವಿಶ್ವಕೋಶ, ಮೈಸೂರು.
5. ಸೂರ್ಯನಾಥ್ ಯು. ಕಾಮತ್, (1984) ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಪರಿಶ್ರೀ ಪ್ರಿಂಟರ್ಸ್, ಬೆಂಗಳೂರು.
6. ಡಾ.ಅಂಬಳಿಕೆ ಹಿರಿಯಣ್ಣ, (2006) (ಪ್ರಧಾನ ಸಂಪಾದಕರು) ಕನ್ನಡ ವಿಷಯ ವಿಶ್ವಕೋಶ ಭೂಗೋಳ ವಿಜ್ಞಾನ, ಮೈಸೂರು ವಿಶ್ವವಿದ್ಯಾನಿಲಯ.
7. ಡಾ.ಅಂಬಳಿಕೆ ಹಿರಿಯಣ್ಣ, (2006) (ಪ್ರಧಾನ ಸಂಪಾದಕರು), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ.
8. ಡಾ.ಪಿ.ಕೆ.ರಾಜಶೇಖರ್, ಪಿರಿಯಾಪಟ್ಟಣ ತಾಲ್ಲೂಕು ಗ್ಯಾಸೆಟಿಯರ್, ಕರ್ನಾಟಕ ಸರ್ಕಾರ ಕಾವೇರಿ ಭವನ, ಬೆಂಗಳೂರು, ಪ್ರಕಟಣೆ 2010,

ಅನುಷಂಗಿಕ ಆಕರಗಳು :

1. ಶ್ರೀಕಂಠಯ್ಯ/ಸಾಲೆತ್ತೊರೆ, (1941) ಕನ್ನಡನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಎಸ್. ನೀಲಕಂಠಶಾಸ್ತ್ರೀ, (1954) ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ವೆಸ್ಲಿ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು.
3. ಚಿದಾನಂದಮೂರ್ತಿ ಎಂ.(1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150)
4. ರಾಧಾಕೃಷನ್. ಎಸ್., (1970) ಯುಗಯಾತ್ರಿ ಭಾರತೀಯ ಸಂಸ್ಕೃತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ದಿವಾಕರ್ ಆರ್.ಆರ್., (ಸಂ) (1970) ಕರ್ನಾಟಕದ ಪರಂಪರೆ, ಸಂ–1, ಮೈಸೂರು ರಾಜ್ಯ ಸರಕಾರ.
6. ಅನಂತರಂಗಾಚಾರ್ ಎನ್., (1984) ಭಾರತೀಯ ತೀರ್ಥ ಕಲಾಕ್ಷೇತ್ರ ಸಂದರ್ಶಿನಿ, ಮೈಸೂರು,

7. ತಿಪ್ಪೇರುದ್ರಸ್ವಾಮಿ. ಹೆಚ್., (1985) ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.
8. ಹಿರೇಮಠ ಬಿ.ಆರ್., (1986) ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9. ಚೆನ್ನಕ್ಕ ಎಲಿಗಾರ, (1990) ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
10. ಪರಮಶಿವಮೂರ್ತಿ ಡಿ.ವಿ., (1999) ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ಶಿವಣ್ಣ (1999) ಮಧ್ಯಕಾಲೀನ ಭಾರತದ ಆರ್ಥಿಕ ಇತಿಹಾಸ(1200–1750), ಇತಿಹಾಸ ಲೋಕ ಮೈಸೂರು.
12. ನಾರಾಯಣ ಕೆ.ವಿ., (1999) (ಸಂ), ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ, ಪ್ರಸಾರಂಗ ಹಂಪಿ.
13. ಗೋಪಾಲರಾವ್ ಎಚ್.ಎಸ್., (2000) ಚಂಗಾಳ್ವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
14. ನರಸಿಂಹಮೂರ್ತಿ ಎ.ವಿ., (2000) ಕರ್ನಾಟಕದಲ್ಲಿ ವಿದೇಶಿ ನಾಣ್ಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
15. ಭಾರತೀಯ ವಿಧ್ಯಭವನ (2000) ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ.
16. ದೀಕ್ಷಿತ್, ಜಿ. ಎಸ್., ಕುಪ್ಪುಸ್ವಾಮಿ.ಜಿ.ಆರ್., ಮೋಹನ್.ಎಸ್.ಕೆ., (2000) ಕರ್ನಾಟಕದಲ್ಲಿ ಕೆರೆ ನೀರಾವರಿ(ಅನು), ನೀಲತ್ತಹಳ್ಳಿ ಕಸ್ತೂರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
17. ರಾಬರ್ಟ್ ಸಿವೆಲ್., (ಅನು) (2005) ಸದಾನಂದ ಕನವಳ್ಳಿ, ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
18. ಸುಭಾಷ್ ಭರಣಿ (2005) ಧರಗೆ ದೊಡ್ಡವರು, ಮೈಸೂರು.
19. ಷ. ಶೆಟ್ಟರ್ (2007) ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, (ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ) ಅಭಿನವ ಪ್ರಕಾಶನ, ಬೆಂಗಳೂರು.
20. ನರಸಿಂಹಮೂರ್ತಿ ಎ.ವಿ., (2008) ಭಾರತೀಯ ನಾಣ್ಯ ಪರಂಪರೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

21. ರಾಮದಾಸರೆಡ್ಡಿ ಎಸ್., (2011) ಕ್ಷೇತ್ರಕಾರ್ಯ (ಇತಿಹಾಸ ಮತ್ತು ಪುರಾತತ್ವ ಶೋಧಕಾರ್ಯ), ರೇಣುಕಾ ಶ್ರೀ ಪ್ರಕಾಶನ ಯಲ್ಲಮ, ಮೈಸೂರು.
22. ಕೋ.ವೆಂ. ರಾಮಕೃಷ್ಣೇಗೌಡ (2011) ಕರ್ನಾಟಕ ಕಾವೇರಿ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು.
23. ಕೊಸಾಂಬಿ ಡಿ.ಡಿ., (ಅನುವಾದ: ಟಿ.ಎಸ್. ವೇಣುಗೋಪಾಲ್ ಮತ್ತು ಶೈಲಜಾ) (2011) ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ, ಚಿಂತನ ಪುಸ್ತಕ, ಮೈಸೂರು.
24. ಹರೀಶ್ ಪಿ.ಎನ್., (2011) ಎರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
25. ಹರಿಲಾಲ್ ಪವಾರ್ ಕೆ., (2011) ಹೆಳವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
26. ಚಂದ್ರು ಕಾಳೇನಹಳ್ಳಿ (2011) ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.
27. ಪ್ರಹ್ಲಾದ ಬೆಟಗೇರಿ (2011) ಅಡವಿಚೆಂಚರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ.
28. ಮಂಜುನಾಥ್ ಸಿ.ಯು., (2012) ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, (ಕ್ರಿ. ಶ.1150 ರಿಂದ 1340) ಚಿತ್ಕಲಾ ಪ್ರಕಾಶನ, ಕುಪ್ಪಂ.
29. ಚನ್ನಬಸವಯ್ಯ ಹಿರೇಮಠ (2014) ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
30. ಚ.ನ. ಶಂಕರ್‌ರಾವ್ (2017–18) ಸಾಮಾಜಿಕ ಸಂಶೋಧನೆಯ ಕೈಪಿಡಿ, ಜೈಭಾರತ್ ಪ್ರಕಾಶನ, ಮಂಗಳೂರು.
31. ಷೇಕ್‌ಅಲಿ ಬಿ., ಪ್ರೊ.ಕೆ.ಎಸ್. ಶಿವಣ್ಣ, (2017) ಕರ್ನಾಟಕ ಚರಿತ್ರೆ ಸಂ–3, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾಪ್ರಬಂಧಗಳು :

1. ವೃಷಭ ಕುಮಾರ್ (2010) ಮೈಸೂರು ಜಿಲ್ಲೆಯ ಐತಿಹ್ಯಗಳು : ಒಂದು ಅಧ್ಯಯನ, ಕರ್ನಾಟಕ ಜಾನಪದ ಆಕಾಡೆಮಿ.
2. ಸುರೇಶ (2015) ಮೈಸೂರು ಜಿಲ್ಲೆಯ ಹೊಯ್ಸಳರ ಕಾಲದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪದ ಒಂದು ವಿವರಣಾತ್ಮಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ.

ಆಂಗ್ಲ ಗ್ರಂಥಗಳು :

1. ಫ್ರಾನ್ಸಿಸ್ ಬುಕಾನನ್ (1803) ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರಿಸ್ ಕೆನರಾ ಅಂಡ್ ಮಲಬಾರ್, ಸಂಪುಟ–3, ಲಂಡನ್.
2. ಮೆಕೆಂಜಿ (1803) ಮೆಮೋರಿಸ್ ಆಫ್ ದಿ ನಾರ್ಥರನ್ ಫರ್ಗಣಾಸ್ ಆಫ್ ಮೈಸೂರು ಸರ್ವೇ ಇನ್ 1800–1801, ಮದ್ರಾಸ್.
3. ಡೇ ಎನ್.ಎಲ್., (1972) ಡಿಕ್ಷನರಿ ಆಫ್ ಏನ್ಸಿಯಂಟ್ ಆಂಡ್ ಮಿಡೀವಲ್ ಇಂಡಿಯಾ ಲಂಡನ್.
4. ಗಾಯಿ ಜಿ. ಎಸ್. (1980–84) ಸ್ಟಡೀಸ್ ಇನ್ ಏನ್ಸಿಯಂಟ್ ಜಿಯಾಗ್ರಫಿ ಆಫ್ ಕರ್ನಾಟಕ, ಸಂಪುಟ 1–4. ಪ್ಲೇಸ್ ನೇಮ್ ಸೊಸೈಟಿ ಆಫ್ ಇಂಡಿಯಾ, ಮೈಸೂರು.
5. ವಣ್ಣ ಕೆ.ಎಸ್., (1982) ಅಗ್ರೆರಿಯನ್ ಸಿಸ್ಟಮ್ ಅಫ್ ಕರ್ನಾಟಕ, ಮೈಸೂರು.
6. ಅನಂತಕೃಷ್ಣ ಅಯ್ಯರ್ ಎಲ್. (1988) ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್, ಸಂಪುಟ–5, ಮಿಥಲ್ ಪಬ್ಲಿಕೇಷನ್, ನವದೆಹಲಿ.
7. ರೈಸ್ ಬಿ.ಎಲ್ (1909) ಮೈಸೂರು ಅಂಡ್ ಕೂರ್ಗ್ ಫ್ರಮ್ ಇನ್ಸ್‌ಕ್ರಿಪ್ಸನ್ಸ್, ಲಂಡನ್.
8. ನಾಗರಾಜು ಡಿ. ಎಂ. (1994) ಯಳಂದೂರು–ಎ ಪ್ಲೇಸ್ ನೇಮ್, ಪ್ಲೇಸ್ ನೇಮ್ ಸೊಸೈಟಿ ಆಫ್ ಇಂಡಿಯಾ, ಮೈಸೂರು.

ಮಾರ್ಗದರ್ಶಕರು — **ಸಂಶೋಧನಾ ವಿದ್ಯಾರ್ಥಿ**

(ಡಾ.ತ್ರಿವೇಣಿ) — **(ರವಿ ಎಂ.ಕೆ)**